ಜಾಗತಿಕ ಚಿಂತಕರು
ಮಾಲೆ

# ನಾರಾಯಣ ಗುರು

ಕೆ. ಕೆ. ನಾಯರ್
ಮೋಹನ್ ಕೋಟ್ಯಾನ್



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

*ಜಾಗತಿಕ ಚಿಂತಕರು ಮಾಲೆ - 2*

# ನಾರಾಯಣ ಗುರು

ಕೆ. ಕೆ. ನಾಯರ್
ಮೋಹನ್ ಕೋಟ್ಯಾನ್

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

**NARAYANA GURU :** A monograph on Narayana Guru written by Sri K. K. Nair and Mohan Kotyan, published by the Administrative Officer, Kannada Pustaka Pradhikara (Kannada Book Authority) Pampamahakavi Road, Chamarajpet, Bangalore - 560 018.

Pages : VIII + 56

ಮೊದಲನೆಯ ಮುದ್ರಣ : 2000
First Edition : 2000

ಗ್ರಂಥ ಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ISBN : 81 - 7713 - 037 - 4

ಬೆಲೆ : **25-00**

ಮುದ್ರಣ
**ಸಮೃದ್ಧ ಆಫ್‌ಸೆಟ್ ಪ್ರಿಂಟರ್ಸ್**
5ನೇ ಅಡ್ಡರಸ್ತೆ, ಚಾಮರಾಜಪೇಟೆ
ಬೆಂಗಳೂರು
ದೂರವಾಣಿ : 6747677

III

## ಸಂಪಾದಕರ ಸಮಿತಿ


ಡಾ|| ಎಚ್. ಜೆ. ಲಕ್ಕಪ್ಪಗೌಡ : ಅಧ್ಯಕ್ಷರು

ಪ್ರೊ|| ಎಂ. ಎಚ್. ಕೃಷ್ಣಯ್ಯ : ಸಂಪಾದಕರು

ಪ್ರೊ|| ಸಿ. ವೀರಣ್ಣ : ಸಂಪಾದಕರು

ಶ್ರೀ ವಿ. ಎನ್. ಮಲ್ಲಿಕಾರ್ಜುನಸ್ವಾಮಿ : ಸಂಚಾಲಕರು

# ಮುನ್ನುಡಿ

ಜಗತ್ತಿನ ಸಾಹಿತ್ಯಿಕ, ಸಾಂಸ್ಕೃತಿಕ, ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳನ್ನು ತಮ್ಮ ವಿಶಿಷ್ಟವಾದ ಬದುಕು, ಪ್ರಯೋಗಶೀಲತೆ, ಕ್ರಿಯಾಶೀಲತೆ, ಹೋರಾಟ, ಬುದ್ಧಿಮತ್ತೆ, ದಾರ್ಶನಿಕ ದೃಷ್ಟಿ ಮತ್ತು ದೂರಗಾಮೀ ಚಿಂತನೆಗಳಿಂದ ಅರ್ಥಪೂರ್ಣವನ್ನಾಗಿ ಸಂಪದ್ಭರಿತವನ್ನಾಗಿ ಅತ್ಯುಪಯುಕ್ತವನ್ನಾಗಿ ಜೀವಂತಿಸಿದ ನೂರಾರು ಶ್ರೇಷ್ಠ ಚಿಂತಕರು ಇತಿಹಾಸದಲ್ಲಿ ಮೂಡಿ ತಮ್ಮ ಸಾಧನೆ ಸಿದ್ಧಿಗಳಿಂದ ಚಿರಂತನವಾದ ಪರಿಣಾಮವನ್ನು ಉಂಟುಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಮಾನವ ಬದುಕನ್ನು ವೈಶಿಷ್ಟ್ಯಮಯವನ್ನಾಗಿ ಸಮೃದ್ಧವನ್ನಾಗಿ ಮಾಡಲು ಹಾಗೂ ಶಾಂತಿ, ತೃಪ್ತಿ, ವೈಚಾರಿಕತೆಗಳನ್ನು ತುಂಬಲು ಇವರ ಅಪೂರ್ವವೂ, ಅನನ್ಯವೂ ಆದ ಅಸಾಧಾರಣ ಜೀವನ ಮತ್ತು ಚಿಂತನೆಗಳು ಕಾಲ, ದೇಶ, ಮತ, ಬಣ್ಣ ಮತ್ತು ಭಾಷೆಗಳನ್ನು ಮೀರಿ ಸತತ ಪ್ರಸ್ತುತವಾಗಿ ನಿರಂತರ ಸತ್‌ಸ್ಫೂರ್ತಿಯನ್ನು ಬದುಕಿಗೆ ತುಂಬುತ್ತಿವೆ. ಇಂತಹವರ ಆದರ್ಶಪರ ವ್ಯಕ್ತಿತ್ವ, ಪರಿಶ್ರಮ ಮತ್ತು ಪರಿಚಿಂತನೆ ಗಳಿಂದಾಗಿಯೂ ಮನುಷ್ಯ ತನ್ನ ಇತಿ ಮಿತಿಗಳನ್ನು ಮೀರಲು, ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯವಾಗಿದೆ; ಸಾಧ್ಯವಾಗುತ್ತಿದೆ. ಹೀಗೆ ಮಾನವ ಜೀವಿತವನ್ನು ಸದಾ ಹಸಿರುಗೊಳಿಸುವ ಪ್ರಪಂಚದ ಮಹಾನ್ ಚಿಂತಕರ ಮುಖ್ಯ ಆಲೋಚನೆಗಳನ್ನು ಕನ್ನಡಿಗರಿಗೆ ಅದರಲ್ಲೂ ಯುವಜನತೆಗೆ, ಸರಳವಾದ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವ ಉದ್ದೇಶದಿಂದ ಪುಸ್ತಕ ಪ್ರಾಧಿಕಾರವು "ಜಾಗತಿಕ ಚಿಂತಕರ ಮಾಲೆ" ಎಂಬ ಹೊಸ ಪುಸ್ತಕ ಮಾಲೆಯೊಂದನ್ನು ಆರಂಭಿಸಿದೆ. ಸದ್ಯಕ್ಕೆ 50 ಜನ ವಿಶ್ವಚಿಂತಕರನ್ನು ಕುರಿತು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ಉದ್ಯುಕ್ತವಾಗಿದೆ. ಈ ಮಾಲೆಯ ಪುಸ್ತಕಗಳನ್ನು ಸಹೃದಯ ವಾಚಕರು ಪ್ರೀತಿ ಉತ್ಸಾಹಗಳಿಂದ ಸ್ವೀಕರಿಸುವರೆಂದು ಆಶಿಸಲಾಗಿದೆ.

ಈ ಜಾಗತಿಕ ಚಿಂತಕರ ಸಾಲಿನಲ್ಲಿ "ನಾರಾಯಣ ಗುರು" ಅವರನ್ನು ಕುರಿತ ಈ ಪುಟ್ಟ ಕೃತಿಯನ್ನು ಪ್ರಕಟಿಸಲು ಪ್ರಾಧಿಕಾರ ಸಂತೋಷಿಸುತ್ತದೆ. ನೆರೆಯ ಕೇರಳ ರಾಜ್ಯದಲ್ಲಿ ಹಿಂದುಳಿದ ಸಮಾಜದಲ್ಲಿ ಹುಟ್ಟಿದವರು ಶ್ರೀ ನಾರಾಯಣ ಗುರು ಅವರು. ಭಾರತೀಯ ಸಮಾಜದಲ್ಲಿ ಜಾತೀಯತೆ, ವರ್ಗ ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಅಜ್ಞಾನ ಮುಂತಾದವುಗಳು ಕಾಲಕಾಲಕ್ಕೆ ಅರ್ಬುದ ರೋಗದಂತೆ ಉಲ್ಬಣಿಸಿ ಜೀವನದ ಅಸ್ತಿವಾರವನ್ನೇ ಕುಸಿಯುವಂತೆ ಮಾಡುವ ಸಂದರ್ಭಗಳಲ್ಲಿ ಒಬ್ಬ ಧೀಮಂತ ಚಿಂತಕ, ಸಮಾಜ ಸುಧಾರಕ, ದಿಟ್ಟ ನಿಲುವಿನ, ಗಟ್ಟಿ ಮನಸ್ಸಿನ, ಕ್ರಿಯಾಶಾಲಿ ವ್ಯಕ್ತಿತ್ವದ, ಮಾನವಪ್ರಿಯ ವ್ಯಕ್ತಿಯೊಬ್ಬರು ಹುಟ್ಟಿ ಸಮಾಜದ ವಿಕಾಸಕ್ಕಾಗಿ ಶ್ರಮಿಸುವ, ಅದ್ಭುತವಾದುದನ್ನು ಸಾಧಿಸುವ ಹಲವಾರು ನಿದರ್ಶನಗಳು ನಮ್ಮ ಇತಿಹಾಸದಲ್ಲಿ ಕಣ್ಣಿಗೆ ಹೊಡೆಯುವಂತೆ ಕಾಣಿಸಿಕೊಳ್ಳುತ್ತವೆ. ಇಂಥದೇ ಸಂದರ್ಭದಲ್ಲಿ 19ನೆಯ ಶತಮಾನದಲ್ಲಿ

ಜನ್ಮ ತಳೆದವರು ಶ್ರೀ ನಾರಾಯಣ ಗುರುಗಳು. ಬುದ್ಧಿಮತ್ತೆಯಷ್ಟೇ ಗೊಡ್ಡು ಸಂಪ್ರದಾಯ ಮತ್ತು ಅಂಧ ವಿಶ್ವಾಸಗಳನ್ನು ಜನ್ಮತಃ ಧಾರಣೆ ಮಾಡಿಕೊಂಡಿದ್ದ ಕೇರಳದಲ್ಲಿ ಜಾತಿ ವೈಷಮ್ಯ ಮತ್ತು ಕೀಳು ಜಾತಿಯವರನ್ನು ಕ್ರಿಮಿ - ಕೀಟಗಳಿಗಿಂತ ಕೀಳಾಗಿ ಕಾಣುವ ಅಮಾನುಷ ಸಂದರ್ಭದಲ್ಲಿ ಹಿಂದುಳಿದ ಈಳವ ಸಮಾಜದಲ್ಲಿ ಹುಟ್ಟಿದ ನಾರಾಯಣ ಗುರುಗಳು ಅಂದಿನ ಸಮಾಜದ ಸ್ವಾಸ್ಥ್ಯಕ್ಕೆ ಮತ್ತು ಪರಿವರ್ತನೆಗೆ ಉಗ್ರ ಕ್ರಾಂತಿಯ ದಾರಿಯನ್ನು ತುಳಿಯದೆಯೇ ಸರ್ವರ ಮನಸ್ಸಿನಲ್ಲಿಯೂ ಸ್ವಸಂವೇದನೆಯ, ಸ್ವಾಭಿಮಾನದ ಜೀವಶಕ್ತಿಯನ್ನು ಜಾಗೃತಗೊಳಿಸಿ, ಮೇಲು ಸಮಾಜದೊಡನೆ ತೀವ್ರ ಸಂಘರ್ಷಕ್ಕೆ ತೊಡಗಿಕೊಳ್ಳದೆಯೇ ತಮ್ಮ ಬೋಧನೆ ಮತ್ತು ಕ್ರಿಯೆಗಳ ಮೂಲಕವಾಗಿ ಅವರ ಮನಸ್ಸನ್ನು ಗೆದ್ದು ಪರಿವರ್ತಿಸಿದ, ಆ ಮೂಲಕ ಸಮಾನತೆಯನ್ನು ಮತ್ತು ಸಮನ್ವಯಶೀಲತೆಯನ್ನು ಹುಟ್ಟು ಹಾಕಿದ ಅಸಾಧಾರಣ ಸುಧಾರಕರು ಅವಕಾಶ ವಂಚಿತರಲ್ಲಿ, ಜಾತಿಯ ಅಮಾನುಷ ಕ್ರೌರ್ಯಕ್ಕೆ ಒಳಗಾಗಿ ನರಳಿದವರಲ್ಲಿ, ಅನಕ್ಷರತೆ, ಅಜ್ಞಾನಗಳಲ್ಲಿ ಮುಳುಗಿದವರಲ್ಲಿ, ಸ್ವಪ್ರಜ್ಞೆಯನ್ನು ಜಾಗೃತಗೊಳಿಸಿ, ವಿಶೇಷವಾಗಿ ಕೇರಳದ ದಲಿತರ ಉನ್ನತಿಗಾಗಿ ಜೀವನವಿಡೀ ಶ್ರಮಿಸಿ ಕೃತಕೃತ್ಯರಾಗಿ ಸರ್ವರ ಗೌರವ, ಆದರಗಳಿಗೆ ಪಾತ್ರರಾಗಿ ಜೀವಿತ ಕಾಲದಲ್ಲಿಯೇ ದಂತಕತೆಯಾದವರು ಶ್ರೀ ನಾರಾಯಣ ಗುರು. ಅವರ ಜೀವನದ ವಿವಿಧ ಸಂದರ್ಭಗಳು, ಸಾಮಾನ್ಯ ಜನರ ಉತ್ಥಾನಕ್ಕಾಗಿ ಅವರು ಹಮ್ಮಿಕೊಂಡ ಕಾರ್ಯಕ್ರಮಗಳು, ಕೇರಳ ಮಾತ್ರವಲ್ಲದೇ ಅಸಮಾನತೆಯ ದಳ್ಳುರಿಯಲ್ಲಿ ಬೇಯುತ್ತಿರುವ ಹಿಂದುಳಿದ ಮತ್ತು ದಲಿತ ವರ್ಗಗಳ ಜೀವನಕ್ಕೆ ಪ್ರಾಣವಾಯುವಾದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ.

ಇಂತಹ ಅಸಾಮಾನ್ಯ ಚಿಂತಕರ, ಸಮಾಜ ಪರಿವರ್ತನೆಕಾರರ ಜೀವನ ಮತ್ತು ದರ್ಶನಗಳನ್ನು ಈ ಕೃತಿ ಒಳಗೊಂಡಿದೆ. ಅಪರೂಪವೆನಿಸಿದ ಇಂತಹ ಆದರ್ಶ ಪುರುಷರ ಬದುಕು ಮತ್ತು ಚಿಂತನೆಗಳನ್ನು ಈ ಕೃತಿಯ ಮೂಲಕ ಕನ್ನಡಿಗರಿಗೆ ಒದಗಿಸಿಕೊಟ್ಟಿರುವ ಶ್ರೀ ಕೆ. ಕೆ. ನಾಯರ್ ಮತ್ತು ಮೋಹನ್ ಕೋಟ್ಯಾನ್ ಇವರಿಗೆ, ಈ ಮಾಲೆಯ ಸಂಪಾದಕರಾದ ಪ್ರೊ॥ ಎಂ. ಎಚ್. ಕೃಷ್ಣಯ್ಯ ಮತ್ತು ಪ್ರೊ॥ ಸಿ. ವೀರಣ್ಣ ಅವರಿಗೆ, ಇದನ್ನು ಪ್ರಕಟಿಸಲು ಅನುಮತಿಸಿದ ಪ್ರಾಧಿಕಾರದ ಸದಸ್ಯ ಬಳಗಕ್ಕೆ, ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ 'ಸಮೃದ್ಧ ಆಫ್‌ಸೆಟ್ ಪ್ರಿಂಟರ್ಸ್' ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಯ ನಮನಗಳು.

ದಿನಾಂಕ : 29-9-2000
ಸ್ಥಳ : ಬೆಂಗಳೂರು

**ಡಾ॥ ಎಚ್. ಜೆ. ಲಕ್ಕಪ್ಪಗೌಡ**
ಅಧ್ಯಕ್ಷರು

# ಎರಡು ಮಾತು

'ಕನ್ನಡ ಪುಸ್ತಕ ಪ್ರಾಧಿಕಾರ'ದ ಮಾನ್ಯ ಅಧ್ಯಕ್ಷ ಡಾ|| ಎಚ್. ಜೆ. ಲಕ್ಕಪ್ಪಗೌಡ ಅವರು ಪತ್ರ ಬರೆದು 'ಜಾಗತಿಕ ಚಿಂತಕರು' ಪುಸ್ತಕ ಮಾಲಿಕೆಯಲ್ಲಿ ಪ್ರಕಟಿಸಲು 'ನಾರಾಯಣ ಗುರು' ಕುರಿತು ಕೃತಿ ರಚಿಸಿಕೊಡಬೇಕೆಂದು ನನ್ನನ್ನು ಕೇಳಿಕೊಂಡಾಗ ಅದನ್ನೊಪ್ಪಲು ನಾನು ಬಹಳಷ್ಟು ಅಳುಕಿದ್ದೆ.

ನಾರಾಯಣಗುರುಗಳ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಹಾಗೂ ಗುರುಗಳ ಮತ್ತು ಗುರುಗಳಿಗೆ ಸಂಬಂಧಿಸಿದ ಹಲವಾರು ಸಾಹಿತ್ಯ ಕೃತಿಗಳನ್ನು ಸ್ವಂತ ಮಾಡಿಕೊಂಡಿರುವ ಪ್ರೊ|| ಮೋಹನ್ ಕೋಟ್ಯಾನ್ ಅವರು ನನಗೆ **'ನಾರಾಯಣ ಗುರು'** ಪುಸ್ತಕ ರಚನೆಗೆ ಸೂಕ್ತ ನೆರವು ನೀಡುವ ಆಶ್ವಾಸನೆಯಿತ್ತ ಬಳಿಕವೇ ನಾನು ಅಧ್ಯಕ್ಷರ ಕೇಳಿಕೆಯನ್ನು ಒಪ್ಪಿಕೊಂಡಿದ್ದೆ. ಅವರ ಆಶ್ವಾಸನೆಯ ಫಲಶ್ರುತಿ ಈ ಕಿರು ಕೃತಿ.

ಈ ಅವಕಾಶವನ್ನು ನಮಗೆ ಒದಗಿಸಿರುವ ಡಾ|| ಲಕ್ಕಪ್ಪಗೌಡರಿಗೆ ಹಾಗೂ ಸಂಬಂಧಪಟ್ಟ ಎಲ್ಲರಿಗೆ ನನ್ನ ಹಾರ್ದಿಕ ಕೃತಜ್ಞತೆಗಳು.

**ಕೆ. ಕೆ. ನಾಯರ್**
ಮಣಿಪಾಲ
2-9-2000

# ಸಂಪಾದಕರ ಮಾತು

ಮಾನವ ಸಮಾಜ ಚಲನಶೀಲವಾದುದು. ಮಾನವನ ಸಾಮಾಜಿಕ ವ್ಯವಸ್ಥೆಯ ಅಂತರ್ ಸಂಘರ್ಷದ ಮೂಲಕ ಈ ಚಲನಶೀಲತೆ ನಿರಂತರವಾಗಿ ಇರುತ್ತದೆ. ಚರಿತ್ರೆಯ ಚಕ್ರ ಎಂದೂ ಹಿಂದಕ್ಕೆ ಹೋಗುವುದಾಗಲೀ, ಪುನರಾವರ್ತನೆ ಆಗುವುದಾಗಲೀ ಸಾಧ್ಯವಾಗಿಲ್ಲ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿಕೊಂಡು ಆಯಾ ಕಾಲಗಳಲ್ಲಿ ಹೊಸ ಹೊಸ ವಿಚಾರಧಾರೆಗಳು ಸಮಾಜದಲ್ಲಿ ಬದಲಾವಣೆಗೊಳ್ಳುತ್ತವೆ. ಸಮುದಾಯದ ಮಾತು ಒಬ್ಬ 'ಪ್ರತಿಭಾವಂತ' ನ ನುಡಿಯಾಗಿ ಹೊರಬಂದು ಸಮಾಜದ ಚಲನೆಗೆ ಅನುವು ಮಾಡುತ್ತದೆ.

ಜಗತ್ತಿನಲ್ಲಿ ಕಾಲಕಾಲಕ್ಕೆ ತಮ್ಮ ವಿಚಾರಗಳಿಂದ ಮಹಾನ್ ದಾರ್ಶನಿಕರೆಂದು ಹೆಸರು ಪಡೆದ ಅನೇಕ ಮಹಾನುಭಾವರ ವೈಚಾರಿಕ ವೈವಿಧ್ಯಗಳನ್ನು ಕನ್ನಡದ ಓದುಗರಿಗೆ ಪರಿಚಯಿಸಬೇಕೆಂಬುದೇ "ಜಾಗತಿಕ ಚಿಂತಕರ ಮಾಲೆ" ಯ ಉದ್ದೇಶ. ಬದಲಾಗುತ್ತಿರುವ ಸಂದರ್ಭದಲ್ಲಿ ದೇಶಭಾಷೆಗಳನ್ನು ದಾಟಿ ಆಧುನಿಕ ಸಂವಹನ ಮಾಧ್ಯಮಗಳು ಜಗತ್ತನ್ನು ಒಂದು ಪುಟ್ಟ ಸಂಸಾರವನ್ನಾಗಿ ಮಾಡುತ್ತಿರುವಾಗ, ನಮ್ಮ ಜನ ಬೇರೆ ಬೇರೆ ದೇಶ ಭಾಷೆಗಳಲ್ಲಿ ಪ್ರಸಿದ್ಧರಾದ, ಸಮಾಜದ ಬೆಳವಣಿಗೆಗೆ, ಬದಲಾವಣೆಗೆ ಕಾರಣೀಭೂತರಾದ ಚಿಂತಕರ ಚಿಂತನೆಗಳನ್ನು ಪರಿಚಯಿಸಿಕೊಳ್ಳಲೆಂದು ಈ ಪುಸ್ತಕಗಳನ್ನು ಹೊರತರಲಾಗುತ್ತಿದೆ.

ಈ ಮಾಲೆಯಲ್ಲಿ ಬರುವ ಎಲ್ಲಾ ಚಿಂತಕರೂ ಪ್ರಗತಿಪರರು, ಸಮಾಜದ ಬದಲಾವಣೆಗೆ ಪ್ರೇರೇಪಿಸಿದವರು ಎಂದು ಹೇಳುತ್ತಿಲ್ಲ. ಆದರೆ ಇವರೆಲ್ಲರೂ ತಮ್ಮ ಆಲೋಚನೆಗಳಿಂದ ತಮ್ಮ ಕಾಲದಲ್ಲಿ ಮತ್ತು ಈಗಲೂ ಸಮಾಜದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ ಸಮರ್ಥರು ಎಂಬುದನ್ನು ನಾವು ಮರೆಯುವಂತಿಲ್ಲ. ಅಲ್ಲದೆ ಇವರಲ್ಲಿ ಕೆಲವರು ಅವರವರ ಕಾಲದಲ್ಲಿ ಪ್ರಸ್ತುತವಾದಂತೆ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಮೊದಲಿನ ಮಹತ್ವವನ್ನು ಕಳೆದುಕೊಂಡಿರಬಹುದು. ಆದರೂ ವಿಚಾರಗಳ ವಿವಿಧ ಮಗ್ಗಲುಗಳ ಪರಿಚಯ ನಮಗೆ ಆಗುವುದು ಅಗತ್ಯವೆಂದು ಭಾವಿಸಿ ಅವರನ್ನು ಈ ಮಾಲೆಗೆ ಸೇರಿಸಲಾಗಿದೆ.

ಕನ್ನಡ ಸಾರಸ್ವತ ಮತ್ತು ತಾತ್ವಿಕ ಲೋಕದಲ್ಲಿ 'ತಾಜಾ ಚಿಂತಕರ' ಅಭಾವವಿದೆಯೆಂಬುದು ಕಹಿಯಾದರೂ ಸತ್ಯವಾದ ವಿಚಾರವೇ. ಆದುದರಿಂದ ಬೇರೆ ಬೇರೆ ಜನಾಂಗಗಳ ಪ್ರಖರಮತಿಗಳ ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವುದು ಕನ್ನಡಿಗ ವಿಚಾರವಂತರಿಗೆ ಅತ್ಯಗತ್ಯವಾದದ್ದು. ಈ ಮಾಲೆಯ ಕೃತಿಗಳ ಓದುವಿಕೆಯಿಂದ ಕನ್ನಡಿಗರಿಗೆ ಸ್ವಲ್ಪವಾದರೂ ವಿಭಿನ್ನ ವೈಚಾರಿಕ ಜಗತ್ತಿನ ಪರಿಚಯವಾದರೆ ಕನ್ನಡ ಪುಸ್ತಕ ಪ್ರಾಧಿಕಾರ ಕೈಗೊಂಡ ಈ ಯೋಜನೆ ಸಾರ್ಥಕವಾಯಿತೆಂದು ನಾವು ಭಾವಿಸುತ್ತೇವೆ.

ದಿನಾಂಕ : 29-9-2000
ಸ್ಥಳ : ಬೆಂಗಳೂರು

**ಡಾ|| ಸಿ. ವೀರಣ್ಣ**
**ಪ್ರೊ|| ಎಂ. ಎಚ್. ಕೃಷ್ಣಯ್ಯ**

## ಸಮಾಜ ಸುಧಾರಕ

# ನಾರಾಯಣ ಗುರು

ಧಾರ್ಮಿಕ ನಂಬಿಕೆ ಮತ್ತು ಬದುಕು ಭಾರತೀಯರ ಜನಜೀವನದಲ್ಲಿ ಬೇರ್ಪಡಿಸಲಾಗದಂತೆ ಬೆಸೆದು ರೂಪಿಸಲ್ಪಟ್ಟ ಸಾಂಸ್ಕೃತಿಕ ಮಹೋನ್ನತಿಯೇ ಇಲ್ಲಿನ ವೈಶಿಷ್ಟ್ಯ. ವಿವಿಧತೆಯಲ್ಲಿ ಏಕತೆಯೇ ಇಲ್ಲಿನ ಸಂಸ್ಕೃತಿಯ ಜೀವಾಳ. ಇಡೀ ವಿಶ್ವಸಮುದಾಯದ ಚಿಂತನೆಯಾದ "ಕೃಣ್ವಂತೋ ವಿಶ್ವಮಾರ್ಯಂ" ಎಂಬುದೇ ಇಲ್ಲಿನ ಆಧ್ಯಾತ್ಮ ತತ್ವಸಾರ. ಹೀಗೆ ಸಾವಿರಾರು ವರ್ಷಗಳಿಂದ ಏಕಪ್ರಕಾರವಾಗಿ ಹರಿಯುತ್ತಿರುವ ಸಾಮರಸ್ಯ ಸಹಜೀವನದ, ಧಾರ್ಮಿಕ ಹಿನ್ನೆಲೆಯ, ಭಾರತೀಯರ ಸಮಾಜ ಜೀವನದಲ್ಲಿ ಆಗಾಗ್ಗೆ ಮುಂಚೂಣಿಯಲ್ಲಿದ್ದ ಹಲವರ ಅಜ್ಞಾನ-ಸ್ವಾರ್ಥದಿಂದಾಗಿ ಧರ್ಮ ಮತ್ತು ದೇವರ ಹೆಸರಿನಲ್ಲಿ ವಂಚನೆಗಳು ನಡೆಯುತ್ತಿತ್ತು. ಪರಿಣಾಮವಾಗಿ ಮೂಢನಂಬಿಕೆಗಳು, ಕಂದಾಚಾರಗಳು, ಅಂಧಾಚರಣೆಗಳು ಅತಿಯಾಗಿ ಬದುಕೇ ದುಸ್ತರವಾಗುತಿತ್ತು. ಇಂತಹ ಸಮಯದಲ್ಲಿ ಇಲ್ಲಿನ ಏರುಪೇರಾದ ಸಮಾಜಕ್ಕೆ ನವಚೈತನ್ಯ ತುಂಬಬಲ್ಲ, ಎಲ್ಲರೂ ಅಭಿಮಾನ ಪಡಬಲ್ಲ, ಅದಮ್ಯ ಚೈತನ್ಯದ ವಿಭೂತಿ ಪುರುಷರು, ಸಮಾಜ ಸುಧಾರಕರು ಕಾಲದ ಅವಶ್ಯಕತೆಗೆ ತಕ್ಕಂತೆ ಈ ಭರತಭೂಮಿಯಲ್ಲಿ ಜನ್ಮತಳೆದಿದ್ದಾರೆ. ಧರ್ಮದ ನೈಜ ತಿರುಳನ್ನು ತಿಳಿಸಿ, ಸಮಾಜಕ್ಕೆ ಅರಿವಿನ ಬೆಳಕು ಬೀರಿ ಮಾರ್ಗದರ್ಶನ ಮಾಡಿದ್ದಾರೆ.

ಅಂತಹದೊಂದು ಚೇತನ ಕ್ರಿ. ಶ. 1854 ರ ಸಿಂಹಮಾಸದ ಶತಭಿಷಾ ನಕ್ಷತ್ರದಲ್ಲಿ ಅನಂತಚತುರ್ದಶಿಯ ಶುಭದಿನದಂದು (26-8-1854) ಕೇರಳದ ತಿರುವನಂತಪುರದ ಸಮೀಪ ಚೆಂಬಳಂತಿ ಎಂಬ ಹಳ್ಳಿಯಲ್ಲಿ ಉದಯಿಸಿತು. ಅವರೇ ನಾರಾಯಣ ಗುರುಗಳೆಂದು ಮುಂದಕ್ಕೆ ಪ್ರಖ್ಯಾತರಾದ ಶ್ರೇಷ್ಠ ಸಮಾಜ ಸುಧಾರಕರೂ, ದಾರ್ಶನಿಕರೂ ಆದ ವಿಶ್ವಮಾನ್ಯ ಚಿಂತಕರು.

ಅವರು ಜನಿಸಿ ಒಂದೂವರೆ ಶತಮಾನಗಳು ಸಂದರೂ, ಸಮಾಜ ಸುಧಾರಕರಾಗಿ ಅವರು ಸಾಧಿಸಿದ ಸಫಲತೆ, ಧರ್ಮಸಾಮರಸ್ಯದ ಕುರಿತು ಸಾರಿದ ಸಂದೇಶ, ವಿಶ್ವಮಾನವತೆಯ ಬಗ್ಗೆ ಬೋಧಿಸಿದ ಆಧ್ಯಾತ್ಮ ದರ್ಶನ, ಆದರ್ಶಯೋಗ್ಯವೂ ಆದ ಅವರ ಜೀವನ ಪ್ರತಿಭೆ ಈಗಲೂ ಇನ್ನೆಷ್ಟು ಕಾಲವೂ ಸಮಾಜಕ್ಕೆ ಮಾರ್ಗದರ್ಶಕವಾಗಲಿದೆ.

**ಹಿನ್ನೆಲೆ :** ಹದಿನೇಳರಿಂದ ಹತ್ತೊಂಬತ್ತನೇ ಶತಮಾನದ ಸುಮಾರು ಮುನ್ನೂರು ವರ್ಷಗಳು ಭಾರತದ ಆಧುನಿಕ ಇತಿಹಾಸದ ಮಹತ್ವದ ಕಾಲ. ಸಮುದ್ರಯಾನದ ಮೂಲಕ ಪಶ್ಚಿಮದ ಸಾಹಸೀ ಜನಾಂಗ ಭರತಭೂಮಿಗೆ ಬರುವ ಮೂಲಕ ಅಲ್ಲಿನ ಆಧುನಿಕ ಚಿಂತನೆಯೂ ಬಿರುಗಾಳಿಯಂತೆ ಇಲ್ಲಿ ಸರ್ವತ್ರ ಬೀಸಿತು. ಈ ಕಾಲಾನುಭಾಗದಲ್ಲಿ ನಮ್ಮ ಶಾಸ್ತ್ರಜ್ಞಾನ - ತತ್ವಚಿಂತನೆಗಳ ಮೌಲ್ಯವನ್ನು ಮರೆತುಬಿಟ್ಟ ಜನರ ಸ್ವಾರ್ಥದಿಂದಾಗಿ ನಮ್ಮ ಸಮಾಜಜೀವನದಲ್ಲಿ ಸಾಂಸ್ಕೃತಿಕ ಕುಸಿತದ ದುರಂತ ಕಥೆಯೇ ಒಂದು

ವ್ಯಥೆಯಾಗಿತ್ತು. ಸರ್ವ ಜೀವರಾಶಿಯ ಸೇವೆಯೇ ಈಶ್ವರ ಸೇವೆ ಹಾಗೂ "ಸರ್ವೇ ಜನಾಃ ಸುಖಿನೋ ಭವಂತು" ಎಂಬ ವಿಶ್ವಮಾನ್ಯ ಧೋರಣೆಗಳು ನೆಲ ಕಚ್ಚಿದ್ದವು. ಹತ್ತೊಂಬತ್ತನೇ ಶತಮಾನದ ಕೊನೆಗೆ ಸಮಾಜದಲ್ಲಿ ಅಂಧವಿಶ್ವಾಸ, ಅನಾಚಾರ, ಜಾತೀಯತೆ, ಅಸ್ಪೃಶ್ಯತೆ ಸರ್ವತ್ರ ವ್ಯಾಪಿಸಿತ್ತು.

ಕೇರಳ ರಾಜ್ಯದಲ್ಲಂತೂ ಜಾತಿವೈಪರೀತ್ಯ ಪರಾಕಾಷ್ಠೆಗೆ ಏರಿದ್ದು, ಎಲ್ಲಿ ನೋಡಿದರೂ ಉಚ್ಚ - ನೀಚ ತಾರತಮ್ಯ. ಮೇಲ್ಜಾತಿ - ಕೀಳ್ಜಾತಿ, ಸವರ್ಣೀಯರು - ಅಸ್ಪೃಶ್ಯರು, ದೃಷ್ಟಿಗೆ ಬೀಳಲು ಕೂಡಾ ಅನರ್ಹರೆಂಬ ಒಳಜಾತಿ ಪಂಗಡಗಳ ಸೃಷ್ಟಿ. ದಲಿತರಿಗೆ ಬಾವಿಯನ್ನು ಮುಟ್ಟಲೂ ನಿಷೇಧ; ಕೆರೆಯಲ್ಲಿ ಸ್ನಾನ ಮಾಡಲು ನಿಷೇಧ; ದೇವಸ್ಥಾನ ಪ್ರವೇಶ ನಿಷೇಧ. ಅಸ್ಪೃಶ್ಯರು ನಂಬೂದರಿ ಬ್ರಾಹ್ಮಣರಿಗಿಂತ 32 ಅಡಿ ದೂರದಲ್ಲಿರಬೇಕು, ನಾಯರ್ ಜಾತಿಯವರಿಗಿಂತ 12 ಅಡಿ ದೂರದಲ್ಲಿರಬೇಕೆಂಬ ಸಾಮಾಜಿಕ ನಿಯಮ ನಿರ್ಬಂಧ. ಈ ಕಟ್ಟುಪಾಡುಗಳನ್ನು ಮುರಿದವರು ಕ್ರೂರವಾದ ಶಿಕ್ಷೆಗೆ ಒಳಗಾಗಬೇಕಿತ್ತು. ಜೀತದಾಳುಗಳಂತೆ ಅಸ್ವತಂತ್ರರೂ, ವಿದ್ಯಾಹೀನರೂ ಆಗಿ ಬಾಳಿದ ಈ ಅಸ್ಪೃಶ್ಯ ಜನಾಂಗದ ಬಹುತೇಕ ಹಿರಿಯರು ಸಾಮಾಜಿಕ - ಸಾಂಸ್ಕೃತಿಕ ಹಿಂಸೆಯಿಂದಾಗಿ ಮೃಗೀಯ ಜೀವನದ ಮೂಕವೇದನೆಯನ್ನು ಅನುಭವಿಸುತ್ತಾ ಮಣ್ಣಲ್ಲಿ ಮಣ್ಣಾಗಿಹೋದ ಕರುಣ ಕಥೆ ಕೇರಳದ ಹತ್ತೊಂಬತ್ತನೇ ಶತಮಾನದ ಜನಜೀವನದಲ್ಲಿ ಸರ್ವೇಸಾಮಾನ್ಯವಾಗಿತ್ತು. ಹೀಗೆ ಧಾರ್ಮಿಕ ಕಂದಾಚಾರದ ಶೃಂಖಲೆಯಲ್ಲಿ ಬಂಧಿತ ವಾಗಿದ್ದು ಅಸ್ಪೃಶ್ಯತೆ, ಮೂಢನಂಬಿಕೆ, ಬಡತನ, ಅಜ್ಞಾನ ಹಾಗೂ ಜಾತೀಯತೆ ತಾಂಡವವಾಡುತ್ತಿದ್ದು, ಸಂಪೂರ್ಣ ಕೇರಳವೇ ಒಂದು ಭ್ರಾಂತಾಲಯ ಎಂಬುದಾಗಿ ಸ್ವಾಮಿ ವಿವೇಕಾನಂದರಿಂದ ಕರೆಯಲ್ಪಟ್ಟ ದಿನಗಳವು. ಇಂತಹ ವಿಲಕ್ಷಣ ಸಾಮಾಜಿಕ ಹಿನ್ನೆಲೆಯಲ್ಲಿ ಅಂದಿನ ಕೇರಳದ ಹಿಂದುಳಿದ "ಈಳವ" ಸಮಾಜದಲ್ಲಿ ನಾರಾಯಣ ಗುರು ಜನ್ಮತಳೆದರು.

ಹಿಂದುಳಿದ ಸಮಾಜದಲ್ಲಿ ಹುಟ್ಟು ಪಡೆದರೂ, ಮೇಲು-ಕೀಳಿನ ಅಂತರವನ್ನು ತೊಡೆದು ಹಾಕುವಷ್ಟು "ಬೌದ್ಧಿಕ ಔನ್ನತ್ಯ" ಗಳಿಸಿ, ಅಸಾಧಾರಣವೂ, ಅನುಕರಣೀಯವೂ ಆದ ಸಾರ್ಥಕ್ಯ ಬಾಳನ್ನು ಬಾಳಿದ ಮಹಾನ್ ವ್ಯಕ್ತಿ ನಾರಾಯಣಗುರು. ಹಿಂದುಳಿದ ಜಾತಿಯಲ್ಲಿ ಜನಿಸಿ ದಲಿತರ ಉನ್ನತಿಗಾಗಿ ಜೀವನ ಸರ್ವಸ್ವವನ್ನು ಮುಡಿಪಾಗಿಟ್ಟವರು ಈ ದೇಶದ ಚರಿತ್ರೆಯಲ್ಲಿ ವಿರಳ. ಅದರಲ್ಲೂ ಜಾತಿವೈಪರೀತ್ಯಗಳೂ, ಮೂಢನಂಬಿಕೆಗಳೂ ತಾಂಡವವಾಡುತ್ತಿದ್ದ ನಾಡಿನಲ್ಲಿ ಪ್ರಬಲ ವಿರೋಧಿ ಶಕ್ತಿಗಳಿಗೆ ಎದುರಾಗಿ ಹೋರಾಡಿ, ದುರ್ಬಲರಲ್ಲಿ, ಅಸ್ಪೃಶ್ಯರಲ್ಲಿ, ಅನಕ್ಷರಸ್ಥರಲ್ಲಿ ಜನಜಾಗೃತಿಯನ್ನುಂಟುಮಾಡಿ ನಾರಾಯಣ ಗುರು ಕೃತಕೃತ್ಯರಾದರು.

ಸಮಾಜದಲ್ಲಿ ಸಂಘರ್ಷವಿಲ್ಲದೆ, ಸಮನ್ವಯತೆಯ ಆಧಾರದಲ್ಲಿ ಬಹು ದೊಡ್ಡ ಪರಿವರ್ತನೆಯನ್ನು ಮಾಡಿದ ಸಮಾಜಸುಧಾರಕ ನಾರಾಯಣಗುರು. ಹತ್ತಿಕ್ಕಲ್ಪಟ್ಟ ದೀನದಲಿತ ಜನಕೋಟಿಯನ್ನು ತನ್ನ ಅದ್ವಿತೀಯ ಆತ್ಮಪ್ರಭಾವದಿಂದ ಆತ್ಮಾಭಿಮಾನಿ 7ಗಳನ್ನಾಗಿಯೂ, ಕರ್ಮಕುಶಲರನ್ನಾಗಿಯೂ ರೂಪಿಸುವಾಗ ಅವರು ಭಾರತದ

ಸನಾತನ ಧರ್ಮ ಸಿದ್ಧಾಂತವನ್ನು ತಿರಸ್ಕರಿಸಲಿಲ್ಲ. ಸಮಾಜಸುಧಾರಣೆ ಹಾಗೂ ಮತ ಸುಧಾರಣೆಯನ್ನು ಮಾಡುವಾಗ ಅವರು ಜಾತಿವಾದಿಗಳನ್ನೂ, ಮತಾಂಧರನ್ನೂ, ಉಚ್ಚವರ್ಗದವರನ್ನೂ ದ್ವೇಷಿಸಲಿಲ್ಲ. ಬದಲಾಗಿ ಶತಮಾನಗಳಿಂದ ಜಡತೆ ತುಂಬಿದ ಜನತೆಯನ್ನು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮೇಲೆತ್ತಲು "ಉದ್ಧರೇತಾತ್ಮನಾತ್ಮಾನಂ" ಎಂಬ ಗೀತೋಕ್ತಿಯಂತೆ ಸ್ವತಃ ತಾವೇ ಕಾರ್ಯಪ್ರವೃತ್ತರಾಗುವಂತೆ ಪ್ರೇರೇಪಿಸುವಲ್ಲಿ, ಅದಕ್ಕಾಗಿ ಅವರನ್ನು ಸಜ್ಜುಗೊಳಿಸುವಲ್ಲಿ ಕೃತಕೃತ್ಯರಾದುದು ನಾರಾಯಣ ಗುರುಗಳ ಸಮಾಜ ಸುಧಾರಣೆಯ ವೈಶಿಷ್ಟ್ಯ.

## ಜೀವನ ಕಥನ

ಬಾಲ್ಯದಲ್ಲಿ "ನಾಣು" ಎಂದೇ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ನಾರಾಯಣ ಗುರುಗಳ ತಂದೆ ಮಾಡಾನ್ ಆಶಾನ್ ಹಾಗೂ ತಾಯಿ ಕುಟ್ಟಿಯಮ್ಮ. ಅದೊಂದು ಮಧ್ಯಮ ವರ್ಗದ ಮನೆತನ. ಆಯುರ್ವೇದ ವೈದ್ಯರಾದ ಮಾಡಾನ್ ಆಶಾನ್ ಸಂಸ್ಕೃತ, ತಮಿಳು, ಮಲೆಯಾಳಂ ಭಾಷೆಗಳನ್ನು ತಿಳಿದ ಉಪಾಧ್ಯಾಯರು. ಸುಸಂಸ್ಕೃತ, ಧರ್ಮಭೀರು ದಂಪತಿಗಳಾದ ಇವರು ಊರಿನ ಎಲ್ಲರಿಗೂ ಬೇಕಾದವರಾಗಿದ್ದರು. ಚೆಂಬಳಂತಿಯ "ಶ್ರೀಭದ್ರಾ" ಗುಡಿಯ ಬಳಿ ವಾಸವಾಗಿದ್ದ "ವಯಲ್ವಾರಂ" ಮನೆತನಕ್ಕೆ ಸೇರಿದ ನಾಣುವಿನ ಹಿರಿಯರು ಸತ್ಯವಂತರೂ, ಸಾತ್ವಿಕರೂ ಆಗಿದ್ದು ಜಾತಿಯಲ್ಲಿ ಈಳವರಾಗಿದ್ದರೂ ನೀತಿಯಲ್ಲಿ ನೂಲುಹಾಕಿದ ಬ್ರಾಹ್ಮಣರಂತೆ ಸಂಸ್ಕಾರಯುಕ್ತ ಜೀವನ ನಡೆಸಿದವರು. ನಾಣುವಿಗೆ ರಾಮನ್ ವೈದ್ಯರ್ ಮತ್ತು ಕೃಷ್ಣನ್ ವೈದ್ಯರ್ ಎಂಬ ಸೋದರ ಮಾವಂದಿರು. ಕೃಷ್ಣನ್ ವೈದ್ಯರ್ ವೈದ್ಯಶಾಸ್ತ್ರದಲ್ಲಿ ಮುಖ್ಯವಾಗಿ ನಾಟಿವೈದ್ಯದಲ್ಲಿ ಹೆಚ್ಚಿನ ಪಾಂಡಿತ್ಯವಿದ್ದು ಹಾಗೂ ಅವರು ಜಾತಿಮುಖಂಡರಾಗಿದ್ದು ತನ್ನ ಅಳಿಯನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದರು. ಕುಟ್ಟಿಯಮ್ಮನ ತಂದೆ ತಿರುವಾಂಕೂರು ರಾಜನ ಆಸ್ಥಾನದಲ್ಲಿ ವ್ಯಾಯಾಮ ಶಿಕ್ಷಕ ಮತ್ತು ಆಕೆಯ ಸೋದರಮಾವ ಬ್ರಹ್ಮಚಾರಿಯಾಗಿದ್ದು ಅನೇಕ ಓಲೆಗ್ರಂಥ ಬರೆದ ಪ್ರಸಿದ್ಧ ವಿದ್ವಾಂಸನಾಗಿದ್ದನು. ಸ್ಫುರದ್ರೂಪಿ, ಆಜಾನುಬಾಹು ಗೌರವವರ್ಣದ ಆ ಬ್ರಹ್ಮಚಾರಿ ಅಜ್ಜನಂತೆಯೇ ನಾಣುವಿನ ರೂಪವಿತ್ತೆಂದು ಹೇಳುವರು. ನಾಣು ಹುಟ್ಟುವ ಎರಡು ವರ್ಷಗಳ ಮೊದಲೇ ಆ ಅಜ್ಜ ತೀರಿಹೋಗಿದ್ದು ಆತನ ಜೀವಿತಕಾಲದಲ್ಲಿ ಚೆಂಬಳಂತಿ ಗ್ರಾಮದ ಮಣಿಕಲ್ ಎಂಬಲ್ಲಿ ಭಗವತಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಧಾರ್ಮಿಕ ಹಿನ್ನೆಲೆಯಿದ್ದ ವ್ಯಕ್ತಿಯಾಗಿದ್ದರು. ಇಂತಹ ಸುಸಂಸ್ಕೃತ ಕೌಟುಂಬಿಕರ ಪರಿಸರದಲ್ಲಿ ನಾಣು ತನ್ನ ಬಾಲ್ಯವನ್ನು ಕಳೆದನು.

ಬೆಳೆಯ ಗುಣ ಮೊಳಕೆಯಲ್ಲೇ ಪ್ರಕಟವಾಗುವುದಂತೆ. ಅಂತೆಯೇ ಮುಂದೆ ತನ್ನ ಹೊಸ ಚಿಂತನೆಯಿಂದ ಹಿಂದುಳಿದ ಜನಾಂಗದಲ್ಲಿ ಸಾಂಸ್ಕೃತಿಕ ಪುನರುತ್ಥಾನದ ರೂವಾರಿಯಾಗಿ ಮೂಡಬೇಕಾಗಿದ್ದ ನಾರಾಯಣಗುರು ಬಾಲ್ಯದಲ್ಲೇ ಸತ್ಯಸಂಶೋಧಕನ ಲಕ್ಷಣ ಹಾಗೂ ಚಿಂತನಾಶೀಲ ಪ್ರವೃತ್ತಿ ಪ್ರಕಟಪಡಿಸುತ್ತಿದ್ದರು. ತನಗೆ ಕೊಟ್ಟ

ಕಾರ್ಯಗಳನ್ನು ಅತೀ ಸಮರ್ಥ ರೀತಿಯಲ್ಲಿ ಮಾಡಿ ಮುಗಿಸುವುದು, ಪರಿಸರದಲ್ಲಿರುವ ಪ್ರತಿಯೊಂದನ್ನೂ ಸೂಕ್ಷ್ಮಬುದ್ದಿಯಿಂದ ಅವಲೋಕಿಸುವುದು, ಹಿರಿಯರ ಸ್ವಭಾವಗಳ ಅಸ್ಥಿರತೆ ಮತ್ತು ಅಸ್ಪೃಶ್ಯತೆಗಳ ಆಚರಣೆಯನ್ನು ಒಪ್ಪದಿರುವುದು, ಅಸಹಾಯಕರಲ್ಲಿರುವ ಶುದ್ಧಾಂತಃಕರಣವನ್ನು ಗುರುತಿಸುವುದು ಮೊದಲಾದ ಸತ್ಯಾನ್ವೇಷಣೆಯ ಪರಿಪಾಟ ನಾಣುವಿನ ಜನ್ಮಜಾತ ಗುಣಗಳಾಗಿದ್ದುವು. ತಪ್ಪು ಯಾರೇ ಮಾಡಲಿ, ಅದನ್ನು ಗುರುತಿಸಿ ಅಂಥವರಿಗೆ ಸರಿಯಾದ ರೀತಿಯಲ್ಲಿ ತಿಳಿಸಿ ಹೇಳುವುದು ನಾಣುವಿಗೆ ಬಾಲ್ಯದಿಂದಲೇ ಸ್ವಯಂಸಿದ್ಧಿಸಿತ್ತು. ಈತನು ಬಾಲ್ಯದಿಂದಲೇ ಸ್ವಭಾವತಃ ಅಂತರ್ಮುಖಿ; ಮಿತಭಾಷಿ.

ಒಮ್ಮೆ ಒಬ್ಬರು ವೃದ್ಧರ ಮರಣವಾದಾಗ ಆತನ ಸಂಬಂಧಿಕರು ತೀವ್ರವಾಗಿ ದುಃಖದಿಂದ ಪ್ರಲಾಪಿಸುವುದನ್ನೂ ಮತ್ತು ಕೆಲವು ದಿನಗಳ ನಂತರ ಆ ದುಃಖವನ್ನು ಮರೆತು ಸುಖ - ಸಂತೋಷದಲ್ಲಿರುವುದನ್ನು ಕಂಡು ತನ್ನ ಹಿರಿಯರ ಭಾವನೆಗಳ ಅಸ್ಥಿರತೆಗಾಗಿ ಮನನೊಂದು ನಾಣು ಅಂತರ್ಮುಖಿಯಾಗಿ ಸಮೀಪದ ಕಾಡಿನಲ್ಲಿ ಸಮಯ ಕಳೆದಾಗ ಮನೆಯವರಿಗೆ ಗಾಬರಿ. ಮನೆಯವರು ಹೋಗಿ ಕರೆತಂದು "ಹೀಗೇಕೆ ಮಾಡಿದೆ?" ಎಂದಾಗ "ಮರಣವಾದಾಗ ದುಃಖದಿಂದ ಗೋಳಾಡಿದಿರಿ, ಮರುದಿನವೇ ಅದನ್ನು ಮರೆತು ನೆಗಾಡಿದಿರಿ, ಇದೇನಪ್ಪಾ ಹೀಗೆ" ಎಂದು ನಾಣು ಉತ್ತರಿಸಿದಾಗ ಆತನ ಸ್ಥಿತಪ್ರಜ್ಞತ್ವದ ಅರಿವು ಮನೆಯವರಿಗಾಗಿತ್ತು.

ಅಸ್ಪೃಶ್ಯತೆಯನ್ನು ಬಾಲ್ಯದಿಂದಲೇ ಒಪ್ಪದಿದ್ದ ನಾಣು ಹರಿಜನರನ್ನು ಮುಟ್ಟಿ ಮನೆಯ ಅಡುಗೆ ಕೋಣೆಯಲ್ಲಿದ್ದ ಹೆಂಗಸರನ್ನು ಮುಟ್ಟುವನು. "ಈಗ ಎಲ್ಲಿದೆ ಮೈಲಿಗೆ" । ಎಂದಾಗ ಮನೆಮಂದಿ ನಿರುತ್ತರರಾಗುತ್ತಿದ್ದರು.

ಸಂನ್ಯಾಸಿಯೊಬ್ಬನನ್ನು ಕೆಲವು ಮಕ್ಕಳು ಕಲ್ಲು ಬಿಸಾಡಿ ಕುಚೇಷ್ಟೆ ಮಾಡುತ್ತಿದ್ದಾಗ, ಸಂನ್ಯಾಸಿಯ ಅಸಹಾಯಕತೆಯನ್ನು ಕಂಡು ದು:ಖ ತಡೆಯಲಾರದೆ ನಾಣು ಗಟ್ಟಿಯಾಗಿ ಬೊಬ್ಬಿಟ್ಟು ಅತ್ತಾಗ ಮಕ್ಕಳೆಲ್ಲಾ ತಬ್ಬಿಬ್ಬಾಗಿ ಚದುರಿದರು. ಮಗುವಿನ ಶುದ್ಧಾಂತಃಕರಣವನ್ನು ಕಂಡು ಸನ್ಯಾಸಿ ನಾಣುವನ್ನು ಸಂತೈಸುತ್ತಾನೆ.

ಈಳವ ಜಾತಿಯ ನಾಣುವಿನ ಮನೆಯ ಹಿರಿಯರು. ತಮಗಿಂತ ಕೆಳವರ್ಗದವರಾದ ಪುಲಯ, ಪರಯ ಜನಾಂಗಗಳನ್ನು ಮುಟ್ಟುತ್ತಿರಲಿಲ್ಲ. ಬಾಲಕ ನಾಣುವಿನ ಮನಸ್ಸು ಇದನ್ನು ಪ್ರತಿಭಟಿಸುತಿತ್ತು. ಒಮ್ಮೆ ಬಯಲಿನಿಂದ ಬರುವಾಗ ಪುಲಯರ ಮನೆಯೊಂದರಲ್ಲಿ ಒಲೆಯಲ್ಲಿಟ್ಟಿದ್ದ ಅನ್ನ ಕುದಿದು ಚೆಲ್ಲಿಹೋಗುವುದನ್ನು ಕಂಡ ನಾಣು ಒಳ ಹೊಕ್ಕು ಪಾತ್ರೆಯನ್ನು ಒಲೆಯಿಂದ ಎತ್ತಿ ಕೆಳಗಿಡುತ್ತಾನೆ. ಈ ವಿಷಯ ಮನೆಯವರಿಗೆ ತಿಳಿದು ರಾದ್ಧಾಂತವಾಗುತ್ತದೆ. ಆಗ ನಾಣು ಕೊಟ್ಟ ಉತ್ತರ ಹಿರಿಯರ ಬಾಯಿ ಮುಚ್ಚಿಸಿತು. "ಮನುಷ್ಯರೇ ಆಗಿರುವ ಪುಲಯರನ್ನು ಮುಟ್ಟುವುದರಿಂದ, ಅವರ ಮನೆಗೆ ಹೋಗುವುದರಿಂದ ಏನೂ ಆಗದು. ಆ ಬಡ ಕುಟುಂಬ ಪ್ರತೀ ದಿನವೂ ಕೂಲಿ ಮಾಡಿ ದಿನದ ಸಂಪಾದನೆ ಮಾಡಿ ಉಣ್ಣಬೇಕಾಗಿದೆ. ಆ ದಿನದ ಆಹಾರ ಚೆಲ್ಲಿ ಹೋಗಿದ್ದರೆ ಇಡೀ ಕುಟುಂಬವೇ ಉಪವಾಸವಿರಬೇಕಾಗುತ್ತಿತ್ತು. ಇದನ್ನು ತಪ್ಪಿಸಲು ನಾನು ಅನ್ನದ ಪಾತ್ರೆಯನ್ನು ಎತ್ತಿ ಇಟ್ಟೆ". ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಇದೊಂದು ದಿಟ್ಟ ಹೆಜ್ಜೆ. ಮಹಾಮಾನವತಾವಾದಿ

ಯಾಗಬೇಕಾಗಿದ್ದ ನಾರಾಯಣ ಗುರು ಬಾಲ್ಯದಲ್ಲೇ ಇಂತಹ ಹಲವಾರು ಕಾರ್ಯಗಳನ್ನು ತನ್ನ ಸಹಜಗುಣವೆಂಬಂತೆ ಮಾಡಿ ತೋರಿಸಿದರು.

ನಾಣುವಿನ ಪ್ರಾಥಮಿಕ ವಿದ್ಯಾಭ್ಯಾಸವು 'ಚಂಬಳಂತಿ ಪಿಳ್ಳೆ' ಎಂದೇ ಹೆಸರುವಾಸಿಯಾದ ಜ್ಯೋತಿಷ್ಯರಾದ ಮೂತಪಿಳ್ಳೆ ಆಶಾನ್ ಎಂಬವರ ಬಳಿ ಆಗಿತ್ತು. ಸುಮಾರು ಹತ್ತುವರ್ಷದ ಅವಧಿಯಲ್ಲಿ ಮಲೆಯಾಳಂ ಮತ್ತು ಸಂಸ್ಕೃತವನ್ನು ಕಲಿತು ಅಮರಕೋಶ, ಬಾಲಪ್ರಬೋಧ, ಶ್ರೀಕೃಷ್ಣವಿಲಾಸ ಎಂಬ ಉದ್ಗ್ರಂಥಗಳ ಕಂಠಪಾಠವನ್ನು ಮಾಡಿದ್ದಲ್ಲದೆ ತಮಿಳು ಸಾಹಿತ್ಯದಲ್ಲೂ ಪರಿಣತಿ ಪಡೆದನು. ತಮಿಳಿನ ತಿರುಕ್ಕುರಳ್ ಗ್ರಂಥವನ್ನು ಓದಿ ಜನರಿಗೆ ತಿಳಿಯುವಂತೆ ಅರ್ಥವಿವರಣೆ ಮಾಡುತ್ತಿದ್ದನು. ಒಮ್ಮೆ ತನ್ನ ಮಾವನಾದ ಕೃಷ್ಣವೈದ್ಯರಿಗೆ ಅರ್ಥೈಸಲಾಗದ ಸಂಸ್ಕೃತ ಶ್ಲೋಕವನ್ನು ವಿವರಿಸಿ ಅದರ ಸರಿಯಾದ ಅರ್ಥವನ್ನು ನಾಣು ತಿಳಿಸಿಕೊಟ್ಟಾಗ ಆತನ ಅಸಾಧಾರಣ ಪ್ರತಿಭೆ ಹಾಗೂ ವಿದ್ಯಾಭ್ಯಾಸದಲ್ಲಿನ ಆಸಕ್ತಿ ಕಂಡು ಮಾವನಾದ ಕೃಷ್ಣವೈದ್ಯರು ಆಶ್ಚರ್ಯಪಟ್ಟರು. ಆತನ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕರ್ನಾಗಪಳ್ಳಿಯ ರಾಮನ್ ಪಿಳ್ಳೆ ಆಶಾನ್ ಎಂಬ ಮಹಾ ಸಂಸ್ಕೃತ ಪಂಡಿತರಲ್ಲಿಗೆ ಕಳುಹಿಸಿಕೊಟ್ಟರು. ನಾಣುವಿನ ಜ್ಞಾನದಾಹದ ತೀವ್ರತೆಯನ್ನು ಶ್ರೀಘ್ರವೇ ಗುರುತಿಸಿದ ರಾಮನ್ ಪಿಳ್ಳೆ ಆಶಾನ್, ನಾಣುವಿನ ವಿಶೇಷ ಅಧ್ಯಯನಕ್ಕೆ ಅನುಮತಿ ಮಾಡಿಕೊಟ್ಟರು. ಅಧ್ಯಯನದೊಂದಿಗೆ ನಾಣುವಿನಲ್ಲಿ ಸ್ವಾಭಾವಿಕವಾಗಿ ಬೆಳೆದುಬಂದ ಅಲಿಪ್ತತೆ, ವೈರಾಗ್ಯಬುದ್ಧಿ ಆತನನ್ನು ಆಧ್ಯಾತ್ಮಿಕದೆಡೆ ಬಹಳಷ್ಟು ಆಕರ್ಷಿಸಿತು.

ಇದರಿಂದಾಗಿ ಆತನಿಗೆ ವಿವಾಹಮಾಡಬೇಕೆಂಬ ಹಿರಿಯರ ಪ್ರಯತ್ನ ನಿಷ್ಫಲವಾಯಿತು. ಪೂರ್ವಜನ್ಮದ ಸಂಚಿತ ವಾಸನಾಬಲದಿಂದಲೋ ಎಂಬಂತೆ ಬಂಧುತ್ವದ ಬಂಧನ ಕಳಚಿ ಮಹತ್ತಾದ ಉದ್ದೇಶವನ್ನು ಸಾಧಿಸಲೋಸುಗ ಪರಿವ್ರಾಜಕನಾಗಿ ಭರತಭೂಮಿಯ ಕಾಡು ಬೆಟ್ಟ, ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಸಂಚರಿಸುತ್ತಾ, ಆಧ್ಯಾತ್ಮಸಾಧನೆಯಲ್ಲಿ ಎತ್ತರಕ್ಕೆ ಏರಿದ ಹಲವಾರು ಮಹಾಪುರುಷರ ಸಾನಿಧ್ಯದಿಂದ ತನ್ನ ಜ್ಞಾನತೃಷೆಯನ್ನು ಇಂಗಿಸುವ ಪ್ರಯತ್ನ ಮಾಡಿದನು. ನಾಣು ಭೇಟಿ ಮಾಡಿದ ಹಲವಾರು ಸಿದ್ಧಪುರುಷರಲ್ಲಿ ಇಬ್ಬರು ಮಾತ್ರ ಆತನಲ್ಲಿ ಬಹಳಷ್ಟು ಪ್ರಭಾವ ಬೀರಿದರೆನ್ನಬಹುದು. ಅವರೇ ಚಟ್ಟಂಬಿ ಸ್ವಾಮಿಗಳು ಮತ್ತು ತೈಕಾಟ್ಟು ಅಯ್ಯಾವು ಎಂಬ ಆಧ್ಯಾತ್ಮಿಕ ಪ್ರತಿಭಾವಂತರು. ತೈಕಾಟ್ಟು ಅಯ್ಯಾವು ಎಂಬ ಸಿದ್ಧಪುರುಷನಿಂದ ಯೋಗಪಾಠದ ಕ್ಲಿಷ್ಟ ಸಾಧನೆಗಳನ್ನು ಕಲಿತ ನಾಣುವಿನ ಮನಸದಲ್ಲಿ ಮೋಕ್ಷೇಚ್ಛೆಯು ಪ್ರಬಲವಾಗಿ ಅವರು ತೀವ್ರ ವೈರಾಗಿಯಾದರು. ಅವಧೂತ ಸ್ಥಿತಿಯಲ್ಲಿ ದೇಶದ ಹಲವಾರು ಕಡೆಗಳಲ್ಲಿ ಸಂಚರಿಸಿದರು. ಇದು ಅವರ ಆರು ವರ್ಷಗಳ ತೀವ್ರ ತಪಶ್ಚರ್ಯಕ್ಕೆ ನಾಂದಿಯಾಯಿತು. ಕನ್ಯಾಕುಮಾರಿಯ ಮರುತ್ವಾಮಲೆಯ ಒಂದು ಗುಹೆಯಲ್ಲಿ ತಪಸ್ಸು, ಪೂರ್ಣ ಯೋಗಾನುಷ್ಠಾನ ಸಿದ್ಧಿಗಳಿಸಲು ಸಹಾಯವಾಯಿತು. ಸಿದ್ಧಾರ್ಥನಿಗೆ ಬೋಧಿವೃಕ್ಷದ ಅಡಿಯಲ್ಲಿ ಜ್ಞಾನೋದಯವಾಗಿ ಬುದ್ಧನಾದಂತೆ ನಾಣು ಮರುತ್ವಾಮಲೆಯ ಗುಹೆಯಲ್ಲಿ ಬ್ರಹ್ಮಜ್ಞಾನ ಪಡೆದು ನಾರಾಯಣ ಗುರುಗಳಾದರು.

ನಾರಾಯಣಗುರುವಿಗೆ ಈಗ ಇಪ್ಪತ್ತೆಂಟು ವರ್ಷ. ಜ್ಞಾನೋದಯದೊಂದಿಗೆ ಪರಿವರ್ತಿತನಾದ ನಾರಾಯಣಗುರು, ಕೇರಳದ ಜನಜೀವನದ ಅಧ್ಯಯನ ನಿರತನಾಗಿ ಸುಮಾರು ಎರಡು ವರ್ಷಗಳ ಕಾಲ ಕನ್ಯಾಕುಮಾರಿ, ಕುಳಚ್ಚಲ್, ಕುರಿಕುಳಂ, ಪೂವಾರ್, ಕೋವಳಂ, ತಿರುವನಂತಪುರಂ, ಅಂಚುತೆಂಗು ಮೊದಲಾದ ಊರುಗಳಲ್ಲಿ, ಸಮುದ್ರ ಕಿನಾರೆಯ ಬೆಸ್ತರ ಮಧ್ಯೆ, ಬಡವರೊಡನೆ ಬೆರೆತು ಸ್ವತಃ ಅವರೆಲ್ಲರ ನೋವು-ನಲಿವುಗಳನ್ನು ತಾದಾತ್ಮ್ಯಭಾವದಿಂದ ಅನುಭವಿಸಿದರು. ದಲಿತೋದ್ಧಾರಕನಾಗಿ ತನ್ನ ಕರ್ತವ್ಯವನ್ನು ಪ್ರಾರಂಭಿಸುವ ಮೊದಲು ಆಧ್ಯಾತ್ಮಿಕ ಸಾಧನೆ ಮತ್ತು ದಲಿತರ, ಓಂದುಳಿದವರ ಜನಜೀವನದ ಅಧ್ಯಯನ ಈ ಎರಡೂ ಕ್ಷೇತ್ರಗಳಲ್ಲಿ ಸ್ವತಃ ಪರಿಶ್ರಮಿಸಿ ಪರಿಣತಿ ಪಡೆದ ನಂತರವೇ ತಾನು ಮಾಡಬೇಕಾದ ಕಾರ್ಯದ ಪೂರ್ಣಪ್ರಮಾಣದ ಯೋಜನೆ ಅವರ ಮನಃಪಟಲದಲ್ಲಿ ಸ್ಥಿರಸ್ಥಾಯಿಯಾಯಿತು.

"ಸರ್ವಬಿಟ್ಟ ಸನ್ಯಾಸಿ" ಎಂಬ ಮಾತು ನಾರಾಯಣಗುರುವಿಗೆ ಅನ್ವಯಿಸುವುದಿಲ್ಲ. ಅವರು ಆರು ದುಷ್ಟಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ವರ್ಜಿಸಿ ವಿರಕ್ತರಾಗಿದ್ದರೂ ತನ್ನ ಜೀವನದ ಗುರಿ ದಲಿತೋದ್ಧಾರವೆಂಬುದು ಅವರಿಗೆ ದೃಢವಾಗಿತ್ತು. ಆದುದರಿಂದಲೇ ಹಿಂದೊಮ್ಮೆ ತನ್ನ ಮನೆಯವರು ನಾಣುವಿಗೆ ವಿವಾಹ ಮಾಡಬೇಕೆಂದು ನಿಶ್ಚಯಿಸಿದಾಗ ಆತ ತನ್ನ ಮನೋನಿರ್ಧಾರವನ್ನು ಪ್ರಕಟಿಸಿದ್ದು ಹೀಗೆ, "ಲೋಕದಲ್ಲಿ ಒಬ್ಬೊಬ್ಬರು ಒಂದೊಂದು ಕಾರ್ಯಕ್ಕಾಗಿ ಜನಿಸುವರು. ನನಗೂ ನಿಮಗೂ ಒಂದೊಂದು ಕಾರ್ಯವಿರಬಹುದು. ನೀವು ನಿಮ್ಮದನ್ನು ಮಾಡಿರಿ. ನಾನು ನನ್ನದನ್ನು ನೋಡಿಕೊಳ್ಳುತ್ತೇನೆ." ಇಷ್ಟು ಹೇಳಿ ನಾಣು ಅಂದು ಮನೆ ಬಿಟ್ಟು ಪರಿವ್ರಾಜಕನಾಗಿ ಹೋಗಿದ್ದ. ಅಂದೇ ನಾರಾಯಣ ಗುರುವಿಗೆ ತನ್ನ ಜೀವನದ ಗುರಿ ನಿಶ್ಚಯವಾಗಿತ್ತು. ತನ್ನ ಜೀವನದ ಮಹತ್ಸಾಧನೆಗಾಗಿಯೇ ಅವರು ಜೀವಿತದ ಪ್ರಥಮ ಭಾಗವನ್ನು ಧ್ಯಾನ, ತಪಸ್ಸುಗಳಲ್ಲಿ ವ್ಯಯಿಸಿ, ನಂತರದ ದಿನಗಳನ್ನು ದಲಿತೋದ್ಧಾರಕ್ಕಾಗಿ ಮೀಸಲಾಗಿಟ್ಟರು. ಬುದ್ಧ, ಬಸವ, ಗಾಂಧಿಯಂತೆ "Born With Purpose" ಎಂಬ ಇಂಗ್ಲೀಷ್ ನಾಣ್ನುಡಿಗೆ ಅನುಗುಣವಾಗಿ ನಾರಾಯಣ ಗುರುಗಳ ಜೀವನೋದ್ದೇಶ ನಿಶ್ಚಿತವಾಗಿತ್ತು.

ಅಂದಿನ ಸಾಮಾಜಿಕ ಚೌಕಟ್ಟಿನಲ್ಲಿ ದಲಿತರ ಸಮಸ್ಯೆಗಳಲ್ಲಿ ಪ್ರಾಮುಖ್ಯವಾದುದು -

- ಅಸ್ಪೃಶ್ಯತೆ, ಜಾತೀಯತೆಯ ತೀವ್ರತೆ, ದೇವಸ್ಥಾನ ಪ್ರವೇಶ ನಿಷೇಧ.
- ಅವಿದ್ಯೆಯಿಂದಾಗಿ ಮೂಢನಂಬಿಕೆ, ಕಂದಾಚಾರ, ಅಂಧಾಚಾರಗಳ ಅನುಷ್ಠಾನ.
- ದಲಿತರ ಸಾಂಸ್ಕೃತಿಕ ಪತನದಿಂದಾಗಿ ವಿಘಟಿತ ಸ್ವಸಮಾಜ.
- ತಾಮಸ ಪೂಜಾ ಪದ್ಧತಿ, ಅಮಲು ಪದಾರ್ಥ ಸೇವನೆ, ಕೌಟುಂಬಿಕ ಕಲಹ.
- ಅದ್ದೂರಿಯ ವಿವಾಹ ಪದ್ಧತಿಯಿಂದ ಬಿಡಿಸಲಾಗದ ಸಾಲದ ಹೊರೆ.
- ಒಡೆಯನಿಗಾಗಿ ದುಡಿಯುವ, ಸ್ವಾವಲಂಬನಾ ಜೀವನಕ್ಕೆ ಮಾರಕವಾದ ಜೀತಪದ್ಧತಿ.
- ಮಾನವ ನಿರ್ಮಿತ ಕಷ್ಟಕೋಟಲೆ ಹಾಗೂ ರೋಗ ನಿವಾರಣೆಯಲ್ಲಿ ಸರ್ವತ್ರ

ಅನುಸರಿಸಲ್ಪಡುವ ಮಾಟ - ಮಂತ್ರ - ತಂತ್ರಗಳಿಂದ ಸೃಷ್ಟಿಸಲ್ಪಟ್ಟ ಭಯಭೀತ ವಾತಾವರಣ; ಸಾಮಾಜಿಕ ಶೋಷಣೆ.

ಪ್ರಾಮುಖ್ಯವಾದ ಈ ಸಮಸ್ಯೆಗಳಲ್ಲದೆ ಇದಕ್ಕೆ ಪೂರಕವಾದ ಇತರ ಹಲವಾರು ಕಟ್ಟುಪಾಡುಗಳಿಂದ ದಲಿತರು ಬಂಧಿತರಾಗಿದ್ದರು.

ಹಿಂದೂ ಸಮಾಜದ ಭಾಗವಾಗಿದ್ದರೂ, ಅತೀ ಹಿಂದುಳಿದು ಅಸ್ಪೃಶ್ಯರಾಗಿರುವ ಜನಕೋಟಿಯ ಉದ್ಧಾರಕ್ಕಾಗಿ ನಾರಾಯಣಗುರು ತನ್ನ ಕಾರ್ಯವನ್ನು 1888 ರಲ್ಲಿ ತಿರುವನಂತಪುರದಿಂದ ಹದಿಮೂರು ಮೈಲು ದೂರದ ಅರವಿಪುರದಿಂದ ಪ್ರಾರಂಭಿಸಿದರು. ಮೊಟ್ಟಮೊದಲು ದಲಿತರಿಗೆ ದೇವಸ್ಥಾನ ನಿರ್ಮಾಣದ ಮೂಲಕ ಅವರ ಸಾಂಸ್ಕೃತಿಕ ಪುನರುತ್ಥಾನಕ್ಕೆ ನಾಂದಿ ಹಾಡಿದರು. ದೇವಸ್ಥಾನಗಳು ಜಾತಿ - ಬೇಧಗಳನ್ನು ರಕ್ಷಿಸುವ ಕೋಟೆಗಳಂತಿರುವ ಅಂದಿನ ಕಾಲದಲ್ಲಿ "ನಿಮಗೆ ದೇವಸ್ಥಾನದ ಹತ್ತಿರ ಹೋಗಲು ಧೈರ್ಯವಿಲ್ಲದಿದ್ದರೆ ದೇವಸ್ಥಾನವನ್ನೇ ನಿಮ್ಮ ಬಳಿಗೆ ತಂದುಕೊಡುತ್ತೇನೆ" ಎಂದು ಅಭಯ ವಚನವನ್ನಿತ್ತು ನಾರಾಯಣಗುರು ಕ್ಷೇತ್ರ ನಿರ್ಮಾಣ ಕಾರ್ಯದಲ್ಲಿ ಉದ್ಯುಕ್ತರಾದರು.

## "ಅರವಿಪುರಂ"ನಲ್ಲಿ ಚಿಮ್ಮಿದ ಅರಿವಿನ ಕಾರಂಜಿ

ಅಗಸ್ತ್ಯಕೂಟ ಪರ್ವತದಲ್ಲಿ ಹುಟ್ಟಿದ ನಯ್ಯಾರು ಎಂಬ ನದಿ ಸುಮಾರು 20 ಮೈಲು ದಕ್ಷಿಣಕ್ಕೆ ಹರಿದು ಬರುವ ನಿರ್ಜನ ಪ್ರದೇಶದಲ್ಲಿ ದಟ್ಟಾರಣ್ಯವಿತ್ತು. ಈ ಪ್ರದೇಶಕ್ಕೆ "ಶಂಕರಕುಂಡ"ವೆಂಬ ಹೆಸರಿತ್ತು. ನಾರಾಯಣ ಗುರು ಇಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ದಲಿತರಿಗೆ ದೇವಸ್ಥಾನ ನಿರ್ಮಿಸಿದ ನಂತರ ಇದು 'ಅರವಿಪುರಂ' ಎಂಬ ಹೆಸರಿನಿಂದ ಪ್ರಖ್ಯಾತವಾಯಿತು. ಮಲೆಯಾಳಂ ಭಾಷೆಯಲ್ಲಿ "ಅರವಿ" ಅಂದರೆ ತೊರೆ, "ಪುರಂ" ಅಂದರೆ ತೀರ. ಶಿವಲಿಂಗ ಪ್ರತಿಷ್ಠಾಪನೆಯಿಂದ ಅರಿವಿನ ಕಾರಂಜಿ ಚಿಮ್ಮಿತು ಇಲ್ಲಿ. ಈ ಪ್ರದೇಶ "ಅರವಿಪುರಂ" ಎಂಬ ಪುಣ್ಯಕ್ಷೇತ್ರವಾಯಿತು.

ನಾರಾಯಣ ಗುರು ಅರವಿಪುರದ ಅರಣ್ಯದಲ್ಲಿ ತಪಸ್ಸನ್ನು ಆಚರಿಸುತ್ತಿದ್ದು ಅವರ ಖ್ಯಾತಿ ಸುತ್ತ ಮುತ್ತ ಎಲ್ಲಾ ಪಸರಿಸಿದ ಕಾಲವದು. ಶ್ರೀಮಂತರು ಬಡವರೆನ್ನದೆ, ಜಾತಿ ವಿಜಾತಿ ಎನ್ನದೆ ಊರು ಪರವೂರಿನಿಂದ ಗಂಡಸರು ಹೆಂಗಸರು ನಿತ್ಯ ಬರುತ್ತಿದ್ದರು. ಅಲ್ಲಿಗೆ ಹೋಗಿ ಬಂದವರು ಸ್ವಾಮಿಗೆ ದೂರಶ್ರವಣ ಮತ್ತು ಪರರ ಮನೋಗತವನ್ನು ಅರಿಯುವ ಸಿದ್ಧಿ ಇವೆ ಎಂದು ವಿವರಿಸಿದಾಗ ಅದು ನಿಜವೆಂದು ನಂಬಿದವರು ಕೆಲವರಾದರೆ, ಅದು ಸುಳ್ಳೆಂದು ಅಪಹಾಸ್ಯ ಮಾಡಿದವರು ಇನ್ನು ಕೆಲವರು. ನಂಬಿದವರಲ್ಲಿ ಕೆಲವರು ಕುತೂಹಲದಿಂದ ಹೋಗಿ ದರ್ಶನ ಪಡೆದು ಬಂದರು. ಸ್ವಾಮಿಗಳಿಗೆ ಹಣ್ಣು ಹಂಪಲು ತರುತ್ತಿದ್ದರು. ಹೀಗೆ ಆ ಸ್ಥಳವು ಹೆಚ್ಚು ಕಾಲ ನಿರ್ಜನ ಪ್ರದೇಶವಾಗಿ ಉಳಿಯಲಿಲ್ಲ. ಸಾವಿರಾರು ಜನರು ಅದೊಂದು ಪುಣ್ಯಕ್ಷೇತ್ರವೆಂದು ಪ್ರಯಾಣ ಮಾಡಿ ಬಂದು ನದಿಯಲ್ಲಿ ಮಿಂದು ಸ್ವಾಮಿಯ ದರ್ಶನ ಮಾಡಿಕೊಂಡು ಹೋಗುತ್ತಿದ್ದರು. ಅಲ್ಲಿ ನಿತ್ಯ ಭಜನೆ, ಕೀರ್ತನೆ ಹಾಗೂ ಶ್ರೀಮಂತರಿಂದ ಅನ್ನಸಂತರ್ಪಣೆಯು

ಸ್ವಪ್ರೇರಣೆಯಿಂದ ನಡೆದು ನಾರಾಯಣ ಗುರುಗಳ ಸಾನ್ನಿಧ್ಯದಿಂದ ಅರವಿಪುರಂ ಒಂದು ಪುಣ್ಯಕ್ಷೇತ್ರವಾಗಿ ಪರಿವರ್ತಿಸಿತ್ತು.

ಇದೇ ಸಂದರ್ಭ 1888 ನೇ ವರ್ಷದ ಶಿವರಾತ್ರಿ ಸಮೀಪಿಸಿತು. ಅಲ್ಲೊಂದು ಆರಾಧನಾ ಸ್ಥಳವಾಗಬೇಕೆಂದು ನಾರಾಯಣಗುರು ಇಚ್ಛೆಯನ್ನು ಪ್ರಕಟಪಡಿಸಿದಾಗ ಜನರಲ್ಲಿ ವಿದ್ಯುತ್‌ಸಂಚಾರವಾದಂತಾಯಿತು. ಮಧ್ಯರಾತ್ರಿ ಸಮಯಕ್ಕೆ ನಾರಾಯಣ ಗುರು ನದಿಯಲ್ಲಿ ಸ್ನಾನ ತೀರಿಸಿಕೊಂಡು ಬಂದವರು ಲಿಂಗಾಕೃತಿಯ ಕಲ್ಲನ್ನು ನದಿಯಿಂದ ಹೆಕ್ಕಿ, ಕೈಯಲ್ಲಿ ಹಿಡಿದು ಸುಮಾರು ಮೂರು ತಾಸು ಧ್ಯಾನಾಸಕ್ತರಾದರು. ತೇಜೋಮಯವಾದ ಅವರ ಮುಖದ ಮೇಲೆ ಅಶ್ರುಧಾರೆಯು ಹರಿಯುತ್ತಿತ್ತು. ಭಕ್ತಿಪರವಶರಾದ ಜನಸ್ತೋಮದಿಂದ ಶಿವಪಂಚಾಕ್ಷರಿ ಮುಗಿಲು ಮುಟ್ಟಲು, ಸುಮಾರು ರಾತ್ರಿ ಮೂರು ಗಂಟೆಯ ಹೊತ್ತಿಗೆ ಸ್ವಾಮಿಗಳು ಲಿಂಗಪ್ರತಿಷ್ಠೆ ಮಾಡಿ ಅಭಿಷೇಕ ಮಾಡಿದರು. ಅದೇ ನಾರಾಯಣಗುರು ಮಾಡಿದ ಪ್ರಾರಂಭದ ಪ್ರತಿಷ್ಠಾಕಾರ್ಯ. ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಇದೊಂದು ಬಹುದೊಡ್ಡ ಕ್ರಾಂತಿಕಾರಿ ಪರಿವರ್ತನೆಗೆ ಪ್ರೇರಣೆ ನೀಡಿದ ಕಾಯಕವಾಗಿತ್ತು. ಈ ಕುರಿತು ಕೇರಳದ ಮಹಾನ್ ಕವಿ ಕುಮಾರನ್ ಆಶಾನ್ ಹೀಗೆ ಬರೆದಿರುವರು.

"ಸ್ವಾಮಿಗಳು ಏನು ಮಾಡಿದರು, ಇದರ ಪ್ರಯೋಜನವೇನು ಎಂದು ತಿಳಿದವರು ವಿರಳ. ಸಾವಿರಾರು ವರ್ಷಗಳಿಂದ ಬೆಳೆದು ಬಂದ ಜಾತೀಯತೆಯೆಂಬ ವೃಕ್ಷದ ಬೇರನ್ನೇ ಕಡಿದು ಬಿಡುವ ಕೊಡಲಿ ಅದು ಎಂದು ಎಷ್ಟು ಜನರಿಗೆ ತಿಳಿದಿದೆ? ಹಿಂದೂಧರ್ಮದಲ್ಲಿ ವೈದಿಕಕರ್ಮಗಳನ್ನು ಮಾಡಲು ಅದರ ಪರಿಜ್ಞಾನವುಳ್ಳ ಬ್ರಾಹ್ಮಣರಿಗೆ ಮಾತ್ರ ಅಧಿಕಾರವಿತ್ತು. ಇತರ ವರ್ಣೀಯರು ಆ ಕರ್ಮಗಳನ್ನು ಬ್ರಾಹ್ಮಣರ ಸಹಾಯದಿಂದಲೇ ಮಾಡಿಸುತ್ತಿದ್ದರು. ಹೀಗಾಗಿ ಬ್ರಾಹ್ಮಣರೆಂದರೆ ಈಶ್ವರ - ಮಾನವರ ನಡುವಿನ ಭೂದೇವರಾಗಿದ್ದರು. ಜನರಲ್ಲಿದ್ದ ಈ ಅಭಿಪ್ರಾಯವು ತಪ್ಪು ಎಂಬ ವಿಷಯ ಅರವಿಪುರದ ಪ್ರತಿಷ್ಠಾಕಾಯಕದಿಂದ ವ್ಯಕ್ತವಾಯಿತು. ವೈದಿಕಜ್ಞಾನ ಮಾತ್ರವಲ್ಲ ಬ್ರಹ್ಮಜ್ಞಾನ ಕೂಡಾ ಯಾವುದೇ ಒಂದು ಜಾತಿಗೆ ಸೇರಿದ ಸೊತ್ತಲ್ಲ." ಕುಮಾರನ್ ಆಶಾನ್ ಹೇಳಿದ ಈ ಮಾತು ಮಾನವನ ಅರಿವಿನ ಒಳಹರಿವನ್ನು ಪ್ರಕಟಪಡಿಸುತ್ತದೆ.

ಈ ವಿಷಯದಲ್ಲಿ ಅಂದು ಜನಜಂಗುಳಿಯಲ್ಲಿ ಖಂಡನೆ - ಮಂಡನೆಗಳು ತುಂಬಾ ನಡೆದುವು. ನಾರಾಯಣಗುರುಗಳ ಯೋಗ್ಯತೆಯನ್ನು ತಿಳಿಯದ ಹಾಗೂ ಅವರ ಉದ್ದೇಶಗಳನ್ನು ಅರಿಯದ ಓರ್ವ ನಂಬೂದರಿ ಬ್ರಾಹ್ಮಣನು ಬಂದು ಅವರನ್ನು ಪರೀಕ್ಷಿಸುವುದಕ್ಕಾಗಿ "ಪ್ರತಿಷ್ಠಾ" ಕಾರ್ಯವು ಬ್ರಾಹ್ಮಣರಿಗಲ್ಲದೆ ಇತರರಿಗೆ ಅದರಲ್ಲಿ ಅಧಿಕಾರವಿದೆಯೇ? ಎಂಬುದಾಗಿ ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ನಾರಾಯಣಗುರು "ಅದಕ್ಕೆ ಅಡ್ಡಿಯೇನು ? ನಾನು ಪ್ರತಿಷ್ಠಾಪನೆ ಗೈದಿರುವುದು ಕೆಳಜಾತಿಯ ಈಳವರ ಶಿವನನ್ನಲ್ಲದೇ ಬ್ರಾಹ್ಮಣರ ಶಿವನನ್ನಲ್ಲವಲ್ಲ?" ಎಂದು ಹೇಳಿದಾಗ ನಂಬೂದರಿ ಬ್ರಾಹ್ಮಣ ನಿರುತ್ತರನಾದ.

ಒಬ್ಬನು ಅನ್ಯರ ದೋಷಗಳನ್ನು ತೋರಿಸಿ ಅವರಿಗೆ ಬುದ್ಧಿ ಹೇಳುವ ಬದಲು ತನ್ನ ತಪ್ಪುಗಳನ್ನು ತಿಳಿದು ಅದನ್ನು ಸರಿಪಡಿಸಬೇಕು. ತನ್ನ ಕಾಲ ಮೇಲೆ ತಾನು

ನಿಲ್ಲಬೇಕು. ಸ್ವಾಭಿಮಾನ, ಧೈರ್ಯದಿಂದ ಕೆಲಸ ಮಾಡಬೇಕು ಎಂಬುದನ್ನು ನಾರಾಯಣಗುರು ಕಾರ್ಯರೂಪದಲ್ಲಿ ಮಾಡಿ ತೋರಿಸಿದರು. ಇದರಿಂದಾಗಿ ಜನಸಾಮಾನ್ಯರಿಗೆ ಅವರ ಮೇಲೆ ಹೆಚ್ಚಿನ ವಿಶ್ವಾಸವೂ, ಭಕ್ತಿಯೂ ಉಂಟಾಯಿತು. ಅರವಿಪುರಂ ಕ್ಷೇತ್ರದಲ್ಲಿ ಪ್ರಾಣಪ್ರತಿಷ್ಠೆ ಮಾಡಿದ ನಾರಾಯಣಗುರು ನಿಮ್ನ ವರ್ಗದ ಜನರ ಅಭ್ಯುದಯಕ್ಕಾಗಿ ಆತ್ಮಶಕ್ತಿಯನ್ನು ಪ್ರಕಾಶಿಸಿ ಮತ ಸುಧಾರಣೆ, ಸಮಾಜ ಸುಧಾರಣೆಯ ಕಾರ್ಯವನ್ನು ವಿಶಿಷ್ಠರೀತಿಯಲ್ಲಿ ಮಾಡಿದರು. ದಯಾನಂದಸರಸ್ವತಿ ಹಾಗೂ ರಾಜಾರಾಮ ಮೋಹನರಾಯ್ ಇವರ ಮತಸುಧಾರಣಾ ಕಾರ್ಯ ಕೇವಲ ವಿದ್ಯಾವಂತ ಜನರಿಗೆ ಮೀಸಲಾಗಿದ್ದು, ವಿವೇಕಾನಂದರು ಸಾರಿದ ಹಿಂದುಮತತತ್ವಗಳು ಇಂಗ್ಲೀಷ್ ಭಾಷೆಯಲ್ಲಿ ಪ್ರಚಾರವಾಗಿದ್ದರೆ, ವಿದ್ಯಾಶೂನ್ಯರಾದ ನಿಮ್ನ ವರ್ಗದ ಜನರ ಸುಧಾರಣೆಗಾಗಿ ಸಾವಧಾನವಾದರೂ ರಚನಾತ್ಮಕವಾದ ಮಾರ್ಗವನ್ನು ತೋರಿಸಿಕೊಟ್ಟವರು ನಾರಾಯಣ ಗುರು. ದಲಿತರ ಏಳಿಗೆಯೇ ಅವರ ಜೀವನೋದ್ದೇಶವಾಗಿತ್ತು.

ಅರವಿಪುರದಲ್ಲಿ ಶಿವನ ಪ್ರತಿಷ್ಠೆಯಾದ ಬಳಿಕ ಅಲ್ಲಿ ಕ್ರಮೇಣ ಗರ್ಭಗುಡಿ, ಮಂಟಪ, ಒಂದು ಸಂನ್ಯಾಸಿಮಠ, ಒಂದು ವಿದ್ಯಾಲಯವನ್ನು ಸ್ಥಾಪಿಸಲಾಯಿತು. ಬರಬರುತ್ತಾ ಅರವಿಪುರಂ ಕ್ಷೇತ್ರ ಅಭಿವೃದ್ಧಿ ಹೊಂದಿತು. ಇದೇ ಸಂದರ್ಭದಲ್ಲಿ ನಾರಾಯಣಗುರುಗಳು ಅರವಿಪುರಂ ಕ್ಷೇತ್ರ ಹಾಗೂ ಧಾರ್ಮಿಕ ಸೊತ್ತುಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳಲು "ಪಾವಟ್ಟು ಯೋಗಂ" ಎಂಬ ಸಂಘವನ್ನು ಸ್ಥಾಪಿಸಿದರು. ಈ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ ಗುರುಗಳು ಶಾಲೆಯೊಂದಿಗೆ ನೇಯ್ಗೆ ಕೈಗಾರಿಕೆಯನ್ನೂ ಸ್ಥಾಪಿಸಲು ಪ್ರೇರಣೆ ನೀಡಿದರು.

ನಾರಾಯಣ ಗುರುಗಳ ಕಥನಕಾರರು ಹೇಳುತ್ತಾರೆ - ಧರ್ಮ ರಕ್ಷಣೆಗಾಗಿ, ಅಧರ್ಮದ ನಿವಾರಣೆಗಾಗಿ ನಾರಾಯಣ ಗುರು ನಿತ್ಯ ಶ್ರಮಿಸಿದರು. ಸಾಂಪ್ರದಾಯವಾದಿಗಳು ನಿರಂತರ ಕೊಡುತ್ತಿದ್ದ ಉಪಟಳಗಳನ್ನೂ, ನಿಂದೆಯನ್ನೂ ಸಹಿಸಿಕೊಂಡು, ಸರಕಾರದ ಬೆಂಬಲವಿಲ್ಲದೆ, ಕಾನೂನು ಕಾಯಿದೆಗಳ ಸಹಾಯವಿಲ್ಲದೆ, ನಿಷ್ಠೆ - ನಿರ್ಧಾರ - ಅಚಲವಿಶ್ವಾಸ, ಸತ್ಯ - ಅಹಿಂಸೆಗಳ ನೆರವಿನಿಂದ ಅಸ್ಪೃಶ್ಯತೆಯ ನಿವಾರಣೆಗಾಗಿ ಸತತ ಹೋರಾಡಿದರು. ಮಾನವರಿಗೆಲ್ಲಾ "ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಎಂಬ ತತ್ವವನ್ನು ನಿರಂತರ ಪ್ರತಿಪಾದಿಸಿದರು. ದೀನದಲಿತರಿಗಾಗಿ ವಿದ್ಯಾಸಂಸ್ಥೆ, ದೇವಸ್ಥಾನ, ಆಸ್ಪತ್ರೆಗಳನ್ನು ಸ್ಥಾಪಿಸುವಲ್ಲಿ ಪ್ರೇರಕ ಶಕ್ತಿಯಾಗಿ ಸಮಾಜಸುಧಾರಣೆಯಲ್ಲಿ ಉದ್ಯುಕ್ತರಾದರು.

ಮತಸುಧಾರಣೆ ಮತ್ತು ಸಮಾಜಸುಧಾರಣೆಯ ಯೋಜಿತ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಗುರುಗಳು ಬಯಸಿದ ಪ್ರಯುಕ್ತ 1903 ಜನವರಿ 4 ನೇ ತಾರೀಕಿನಂದು "ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ (SNDP) ಅಸ್ತಿತ್ವಕ್ಕೆ ಬಂತು. ಆಗ ತಾನೇ ಕಲ್ಕತ್ತಾದಿಂದ ವಿದ್ಯಾಭ್ಯಾಸ ಮುಗಿಸಿಬಂದ ತನ್ನ ಶಿಷ್ಯ ಕುಮಾರಾನ್ ಆಶಾನ್ ಅವರನ್ನು ಈ ಸಂಸ್ಥೆಯ ಕಾರ್ಯದರ್ಶಿಯಾಗಿ ಗುರುಗಳು ನೇಮಕಮಾಡಿದರು. ಕುಮಾರಾನ್ ಆಶಾನ್ ಅಮೋಘ ಕವಿತಾ ಸಾಮರ್ಥ್ಯವುಳ್ಳವನೂ, ಪ್ರತಿಭಾವಂತನೂ ಆಗಿದ್ದು

ಮುಂದೆ ಆತನು ಕೇರಳದ ಮಹಾನ್‌ಕವಿ ಎಂದು ಹೆಸರನ್ನು ಪಡೆಯುತ್ತಾನೆ. ನಾರಾಯಣ ಗುರುಗಳ ಸಮಾಜಸುಧಾರಣೆಯ ಎಲ್ಲಾ ಕಾರ್ಯಗಳಿಗೂ ಸಾಹಿತ್ಯ ಪ್ರಬುದ್ಧತೆಯ ಮೆರಗನ್ನು ನೀಡಿ ಪ್ರಖ್ಯಾತನಾದವನು ಕುಮಾರಾನ್ ಆಶಾನ್.

## ಶಿವಗಿರಿಯಿಂದ ಪಸರಿಸಿದ ಅರುಣೋದಯದ ಹೊಸಬೆಳಕು

ಅರವಿಪುರಂ ಕ್ಷೇತ್ರವನ್ನು ಒಂದು ಸುವ್ಯವಸ್ಥಿತ ಆಡಳಿತಕ್ಕೊಳಪಡಿಸಿದ ನಂತರ ನಾರಾಯಣಗುರು ಕೇರಳದ ವರ್ಕಲದಲ್ಲಿ ಶಿವಗಿರಿ ಎಂಬ ರಮಣೀಯವಾದ ಬೆಟ್ಟದಲ್ಲಿ ವಾಸಿಸಿ ಅದನ್ನು ತನ್ನ ಆಶ್ರಮಕ್ಕಾಗಿ ಆರಿಸಿಕೊಂಡರು. ಮಹಾತ್ಮಾ ಗಾಂಧಿಯವರಿಗಿಂತಲೂ ಮೊದಲು ನಾರಾಯಣ ಗುರುಗಳು ಮದ್ಯವರ್ಜನೆ, ಅಸ್ಪೃಶ್ಯ ನಿವಾರಣೆ, ಪ್ರಾಣಿಬಲಿ ನಿಷೇಧಗಳು ಸಮಾಜಸುಧಾರಣೆಗೆ ಅಗತ್ಯವೆಂದು ಮನಗಂಡು, ಈ ದಿಶೆಯಲ್ಲಿ ಕಾರ್ಯ ಪ್ರವೃತ್ತರಾಗಲು ಶಿವಗಿರಿಯನ್ನು ಕೇಂದ್ರವಾಗಿರಿಸಿಕೊಂಡರು.

ಪ್ರಾಕೃತಿಕ ಸೌಂದರ್ಯದಿಂದ ರಮಣೀಯವಾದ ಶಿವಗಿರಿ ಬೆಟ್ಟದಲ್ಲಿ ಶ್ರೀಗುರುಗಳು ಒಂದು ಮಠವನ್ನು ಸ್ಥಾಪಿಸಿದ್ದಾರೆ. ಬಡಜನರ ಮಕ್ಕಳಿಗಾಗಿ ಒಂದು ಪಾಠಶಾಲೆ, ಹಗಲು ಹೊತ್ತು ಬರಲಾಗದವರಿಗೆ ಅಲ್ಲೇ ಒಂದು ರಾತ್ರಿ ಶಾಲೆ, ಒಂದು ಇಂಗ್ಲೀಷ್ ಒಂದು ಸಂಸ್ಕೃತ ಶಾಲೆ ಹಾಗೂ ಶಾರದಾಮಾತೆಯ ದೇವಸ್ಥಾನವನ್ನು ಸ್ಥಾಪಿಸಲಾಯಿತು. ಇಲ್ಲಿನ ಶಾರದಾ ದೇವಸ್ಥಾನದ ಸರಸ್ವತೀ ವಿಗ್ರಹವು ಪಂಚಲೋಹದಿಂದ ತಯಾರಿಸಲ್ಪಟ್ಟಿದೆ. ಗಿಳಿ, ಪುಸ್ತಕ ಹಿಡಿದು ವರ ಮತ್ತು ಅಭಯ ಕೊಡುತ್ತಿರುವ ನಾಲ್ಕು ಕೈಗಳಿಂದ ಕೂಡಿದ ಮೂರ್ತಿಯು ಮನೋಹರವಾಗಿದೆ. ಈ ದೇವಸ್ಥಾನದ ಪ್ರತಿಷ್ಠಾಪನೆಯಂದು "SNDP ಯೋಗಂ" ಇದರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪತ್ರಿಕಾ ಸಂಪಾದಕ ಸಿ. ಕೃಷ್ಣನ್ ಅವರ ಪ್ರಾರಂಭದ ಭಾಷಣ -" ಈ ಕ್ಷೇತ್ರ ಸ್ಥಾಪನೆಯು ದಲಿತರ, ಹಿಂದುಳಿದವರ, ಅಸ್ಪೃಶ್ಯರ ಭಾವೀ ಶ್ರೇಯಸ್ಸಿಗೆ ಒಂದು ಶೃಂಗೇರಿಯಾಗಿದೆ. ಎಲ್ಲ ಕಡೆಗಳಲ್ಲಿರುವ ಈ ಜನರ ಜೀವನಕ್ಕೂ, ಜ್ಞಾನಕ್ಕೂ, ಸಂಘಟನೆಗೂ, ವಿವಿಧ ಅಭಿವೃದ್ಧಿಗಳಿಗೂ ಇದು ಕೇಂದ್ರವಾಗಿದ್ದು ಈಶ್ವರಾನುಗ್ರಹಕ್ಕಾಗಿ ಉತ್ಕಂಠಿತರಾದ ಜನರಿಗೆ ಈ ಶಿವಗಿರಿಯು ಒಂದು ಪವಿತ್ರ ಗಿರಿಯಾಗಿದೆ" - ಎಂದ .ಮಾತು ಚರಿತ್ರಾರ್ಹ ಹಾಗೂ ಸ್ಮರಣೀಯ.

ಶಿವಗಿರಿಯಿಂದ ಶ್ರೀಗುರುಗಳ ಮೂಲಕ ಪಸರಿಸಿದ ಪುನರುತ್ಥಾನದ ಹೊಸಬೆಳಕು ದಕ್ಷಿಣ ಹಿಂದುಸ್ಥಾನದ ಹಿಂದುಳಿದ ಜನಾಂಗದಲ್ಲಿ ಉತ್ಥಾನದ ಪಥದೆಡೆಗೆ ಸಾಗಬೇಕೆಂಬ ಪ್ರೇರಣೆ ನೀಡುವುದರ ಜೊತೆಗೆ ಈ ಜನಕೋಟಿಯನ್ನು ಪುಳಕಿತಗೊಳಿಸಿತು.

ಸುಮಾರು ಒಂದೂವರೆ ಶತಮಾನದ ಹಿಂದೆ ನಾರಾಯಣ ಗುರುಗಳ ಜೀವಿತ ಕಾಲದ ಸಾಮಾಜಿಕ ಪರಿಸ್ಥಿತಿ ಇಂದು ಬಹಳಷ್ಟು ಪರಿವರ್ತನೆಗೊಂಡಿದೆ. ಅಸ್ಪೃಶ್ಯತೆ, ದೇವಸ್ಥಾನ ಪ್ರವೇಶ ನಿಷೇಧ ಇಂದು ಸಮಸ್ಯೆಯಾಗಿ ಉಳಿದಿಲ್ಲ. ಕಾಲದ ಪರಿಭ್ರಮಣೆಯೊಂದಿಗೆ ಸಾಮಾಜಿಕ ಸಮಸ್ಯೆಗಳೂ ಬದಲಾಗುವುವು; ಆದರೆ ಅಂದು ನಮ್ಮ ಜನಜೀವನವನ್ನು ತೀವ್ರವಾಗಿ ಬಾಧಿಸುತ್ತಿದ್ದ ಸಮಸ್ಯೆಗಳಿಗೆ ನಾರಾಯಣಗುರು

ಸಕಾಲಿಕವಾಗಿ ಮತ್ತು ಇತ್ಯಾತ್ಮಕವಾಗಿ ಸ್ಪಂದಿಸಿದ ರೀತಿಯಲ್ಲಿ ಅವರ ಹೊಸ ಚಿಂತನೆಯ ಮೂಲಸೆಲೆಯನ್ನು ಕಾಣಲು ಸಾಧ್ಯ. ಈ ದೃಷ್ಟಿಯಲ್ಲಿ ಅವರು ಕೈಗೊಂಡ ದಲಿತೋದ್ಧಾರದ ಹಾಗೂ ಸಮಾಜಸುಧಾರಣೆಯ ವಿವಿಧ ಮಜಲುಗಳು ಅಧ್ಯಯನಯೋಗ್ಯ. ಮುಂದಿನ ಜನಾಂಗಕ್ಕೆ ಇದು ಪ್ರೇರಣಾದಾಯಕ.

## ದೇವಸ್ಥಾನ ಸ್ಥಾಪನೆ ಮೂಲಕ ದಲಿತರ ಸಾಂಸ್ಕೃತಿಕ ಪುನರುತ್ಥಾನ

ಅರವಿಪುರದಲ್ಲಿ ಶಿವಲಿಂಗ ಪ್ರತಿಷ್ಠಾಪನೆಗೈದು ನಾರಾಯಣಗುರು ದಲಿತರ ಸಾಂಸ್ಕೃತಿಕ ಪುನರುತ್ಥಾನದ ಭೀಮಹೆಜ್ಜೆಯನ್ನಿಟ್ಟರು. ಮುಂದೆ ಹಲವಾರು ದೇವ ಮಂದಿರಗಳನ್ನು ಕೇರಳದಾದ್ಯಂತ, ತಮಿಳುನಾಡು ಹಾಗೂ ಕರ್ನಾಟಕ ಕರಾವಳಿಯ ಮಂಗಳೂರಲ್ಲೂ ಸ್ಥಾಪಿಸಿ, ಹಿಂದುಳಿದವರ ಧಾರ್ಮಿಕ, ಸಾಮಾಜಿಕ ಉನ್ನತಿಗೆ ಕಾರಣರಾದರು. ತಾನು ಪ್ರತಿಷ್ಠಾಪಿಸಿದ ದೇವ ಮಂದಿರಗಳ ಮುಖಾಂತರ ನಾರಾಯಣಗುರು ತನ್ನ ಆದರ್ಶವನ್ನು ಪ್ರಕಟಿಸಿದ್ದಾರೆ. ನಿಮ್ನ ವರ್ಗದವರಿಗೆ ಅವರದೇ ದೇವಸ್ಥಾನಗಳನ್ನು ಸ್ಥಾಪಿಸಿಕೊಟ್ಟವರು ಭಾರತದಲ್ಲಿ ಅವರೊಬ್ಬರೇ. ಇತರರು ಮೇಲ್ಜಾತಿಯವರ ದೇವಸ್ಥಾನಗಳಿಗೆ ನಿಮ್ನ ವರ್ಗದವರ ಪ್ರವೇಶಕ್ಕಾಗಿ ಪ್ರಯತ್ನಪಟ್ಟು ಆಂದೋಲನ ಮಾಡುತ್ತಿರುವಾಗ ನಾರಾಯಣಗುರು ಆ ರಾಜಕೀಯ ಗೊಂದಲಗಳಿಂದ ದೂರವಿದ್ದು ಹಿಂದುಳಿದವರು, ದಲಿತರು ಹೆಮ್ಮೆ ಪಡುವಂತೆ, ಅವರಿಗೆ ಆತ್ಮವಿಶ್ವಾಸ ಹುಟ್ಟುವಂತೆ ಬೇರೆಯೇ ದೇವಮಂದಿರಗಳನ್ನು ನಿರ್ಮಿಸಿದರು.

ದೇವಸ್ಥಾನ ಸುಧಾರಣೆಯ ಚಳವಳಿಯಲ್ಲಿ ತಲ್ಲೀನರಾದ ನಾರಾಯಣಗುರು ಹಿಂದುಗಳು ತಮ್ಮ ದೇವಮಂದಿರಗಳನ್ನು ಸರ್ವರಿಗೂ ಪೂಜಿಸಲು ಅನುಕೂಲವಾಗುವಂತೆ ತೆರೆದಿಡಲು ಪ್ರೇರೇಪಿಸಿದರು. ಅವರ ಪ್ರಯತ್ನದಿಂದಾಗಿ ಹಲವಾರು ದೇವಾಲಯಗಳು ಜ್ಞಾನದೇಗುಲಗಳಾಗಿ ಪರಿವರ್ತಿಸಲ್ಪಟ್ಟು; ಸಾರ್ವಜನಿಕ ಜ್ಞಾನಾರ್ಜನೆಯ ಕೇಂದ್ರಗಳಾದವು. ದೇವಸ್ಥಾನದ ಪರಿಸರದಲ್ಲಿ ಸ್ವಚ್ಛತೆಗೆ ಬಹಳಷ್ಟು ಒತ್ತುನೀಡಿದ ನಾರಾಯಣಗುರು ತಾನು ಪ್ರತಿಷ್ಠಾಪಿಸಿದ ದೇವಸ್ಥಾನಗಳಲ್ಲಿ ಪೂಜೆ, ಉತ್ಸವಗಳು ಆಡಂಬರವಿಲ್ಲದೆ ನಡೆಯುವಂತೆ ಆದೇಶಿಸಿದರು. ಭಕ್ತಿ, ಜ್ಞಾನಗಳಿಗೆ ಈ ದೇವಾಲಯಗಳಲ್ಲಿ ಪ್ರಾಮುಖ್ಯತೆ ನೀಡಲಾಯಿತು.

ಅರವಿಪುರಂನಲ್ಲಿ 1888 ರಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ ಆ ಮೂಲಕ ಅಂದಿನವರೆಗೆ ಯಾರೂ ಕಲ್ಪಿಸಲು ಸಾಧ್ಯವಾಗದಂತಹ ಧಾರ್ಮಿಕ ಕ್ರಾಂತಿಯನ್ನು ಮಾಡಿದ ನಾರಾಯಣಗುರು ಮುಂದಿನ ನಲವತ್ತು ವರ್ಷಗಳಲ್ಲಿ ನೂರಕ್ಕಿಂತಲೂ ಹೆಚ್ಚು ದೇವಮಂದಿರಗಳ ಸ್ಥಾಪನೆಗೆ ಕಾರಣೀಭೂತರಾದರು. ಅವರು ಸ್ಥಾಪಿಸಿದ ದೇವಮಂದಿರಗಳಲ್ಲಿ ಪ್ರಾಮುಖ್ಯವಾದವುಗಳು-

* ವೃಕ್ಕಂ ಎಂಬಲ್ಲಿನ 1889 ರಲ್ಲಿ ಸ್ಥಾಪಿಸಿದ ಈಶ್ವರ ದೇವಸ್ಥಾನ.
  ಈ ದೇವಸ್ಥಾನ ಮೂಲಕ ಅಲ್ಲಿನ ಸಮಾಜದಲ್ಲಿನ ದುರ್ವ್ಯವಹಾರಗಳನ್ನು ತಡೆಯುವ ಸಾಂಸ್ಕೃತಿಕ, ಸಾಮಾಜಿಕ ಏಳಿಗೆಯ ಪ್ರಯತ್ನ.

* ತ್ರಿಶೂರು ಜಿಲ್ಲೆಯ ಕಾರಮುಕ್ಕ ಎಂಬಲ್ಲಿ ಕಾಳಕಂಠೇಶ್ವರ ಕ್ಷೇತ್ರ ನಿರ್ಮಾಣ ಇಲ್ಲಿನ ಶಿವಲಿಂಗದ ಪ್ರಭಾವಳಿಯ ಮೇಲೆ "ಸತ್ಯ, ಧರ್ಮ, ದಯೆ, ಶಾಂತಿ" ಎಂಬ ನುಡಿಮುತ್ತುಗಳನ್ನು ಕೆತ್ತಿಸಿದರು. ಕಾರಮುಕ್ಕದಲ್ಲಿ ಆಚರಣೆಯಲ್ಲಿದ್ದ ಭೂತಾರಾಧನೆ, ಪ್ರಾಣಿಬಲಿ, ಮದ್ಯನೈವೇದ್ಯಗಳನ್ನು ವರ್ಜಿಸುವಂತೆ ಅಲ್ಲಿನ ಜನಸಮುದಾಯಕ್ಕೆ ಸರಿಯಾದ ತಿಳುವಳಿಕೆ ನೀಡಿ, ಸಾತ್ವಿಕಪೂಜೆ ನಡೆಸಲು ಮನ ಒಲಿಸಿದರು.
* ಅಜೆಂಗೊ ಮತ್ತು ಪೆರುಂಗೊತ್ತು ಎಂಬಲ್ಲಿ ದೇವಸ್ಥಾನ ಸ್ಥಾಪನೆ.
* ತಿರುವನಂತಪುರದ ಮುಟ್ಟಕಾಡು ಕುನ್ನುಂಪಾರ ಕ್ಷೇತ್ರದಲ್ಲಿ ಶ್ರೀ ಸುಬ್ರಹ್ಮಣ್ಯ ಪ್ರತಿಷ್ಠೆ.
* ಕೋಜಿಕೋಡ್‌ನಲ್ಲಿ ಶ್ರೀಕಂಠೇಶ್ವರ ಕ್ಷೇತ್ರ; ಕಣ್ಣಾನೂರಿನಲ್ಲಿ ಶ್ರೀ ಸುಂದರೇಶ್ವರ ಕ್ಷೇತ್ರ; ಮಂಗಳೂರಿನ ಕುದ್ರೋಳಿಯಲ್ಲಿ ಶ್ರೀಗೋಕರ್ಣನಾಥ ಕ್ಷೇತ್ರದಲ್ಲಿ ಪಂಚಾಯತನ ಮೂರ್ತಿಗಳ ಪ್ರತಿಷ್ಠಾಪನೆ.
* ವರ್ಕಲದ ಶಿವಗಿರಿಯಲ್ಲಿ 1904ರಲ್ಲಿ ವಾಸ್ತವ್ಯ ಮಾಡಿದ ಶ್ರೀ ಗುರು ಅಲ್ಲಿ ಶ್ರೀ ಶಾರದಾ ಪ್ರತಿಷ್ಠಾಪನೆ ಮಾಡಿದರು.
* ತಮಿಳುನಾಡಿನ ಕನ್ನಕುಡಿಯಲ್ಲಿ ಗಣಪತಿ ದೇವಸ್ಥಾನದ ಪುನರ್‌ನಿರ್ಮಾಣ.
* ತಿರುವನಂತಪುರದ ಉತ್ತರ ಭಾಗದಲ್ಲಿ ಕುಳತ್ತೂರು ಕೋಲತ್ತುಕರ ಎಂಬಲ್ಲಿ ಒಂದು ಭಗವತಿ ಕ್ಷೇತ್ರದಲ್ಲಿ ನಡೆಯುತ್ತಿದ್ದ ಪ್ರಾಣಿಬಲಿಯನ್ನು ನಿಲ್ಲಿಸಿಬಿಟ್ಟು ಸ್ವಾಮಿಯವರು ಅಲ್ಲಿ ಶಿವಪ್ರತಿಷ್ಠೆ ಮಾಡಿದರು.
* ಚಿರಯಿನ್ ಕೀಳ್, ವಕ್ಕತ್, ದೇವೇಶ್ವರಂ ಎಂಬ ಊರುಗಳಲ್ಲಿ ಒಂದೊಂದು ಕ್ಷೇತ್ರ ನಿರ್ಮಾಣ.
* ಮೂತಕುನ್ನ ಎಂಬಲ್ಲಿ ಶಿವಕ್ಷೇತ್ರದ ಮೂರ್ತಿ ಪ್ರತಿಷ್ಠೆ.
* ಕೊಚ್ಚಿಯ ಪಳ್ಳಿಪುರಂ ಎಂಬಲ್ಲಿ ವಿಜ್ಞಾನವರ್ಧಿನಿ ಸಂಘದ ವತಿಯಿಂದ ಸ್ವಾಮಿಜಿಯವರು ಒಂದು ದೇವಸ್ಥಾನ ಪ್ರತಿಷ್ಠೆ ಮಾಡಿದರು.
* ತಲಚ್ಚೇರಿಯಲ್ಲಿ ಜಗನ್ನಾಥ ದೇವಾಲಯದ ಸ್ಥಾಪನೆಯೊಂದಿಗೆ ಹರಿಜನರಿಗೆ ಪ್ರವೇಶ ನಿರ್ಧಾರ.
* ನಾರಾಯಣಗುರುಗಳು ಮೆಳುವೇಳಿ ಆನಂದ ಭೂತೇಶ್ವರ ಕ್ಷೇತ್ರಕ್ಕೆ ಹೋಗುವ ಮಾರ್ಗದಲ್ಲಿ ವಿಶ್ವಕರ್ಮರಿಗಾಗಿ ಒಂದು ದೇವಸ್ಥಾನ ಸ್ಥಾಪಿಸಿಕೊಟ್ಟರು.
* ಪಾಲ್ಘಾಟಿನಲ್ಲಿ ಶಿವಕ್ಷೇತ್ರ ನಿರ್ಮಾಣ.
* ಆಲಪ್ಪಿಯ ಬಳಿ ವಕ್ಕಂ ಎಂಬಲ್ಲಿ ಸುಬ್ರಹ್ಮಣ್ಯ ದೇವಾಲಯ ನಿರ್ಮಾಣ.
* ಕಳವಂತ್ತೋಡು ಎಂಬಲ್ಲಿ 1927ರ ಜೂನ್ 31ರಂದು ಶಕ್ತೀಶ್ವರ ಕ್ಷೇತ್ರವನ್ನು ಸ್ಥಾಪಿಸಿದರು. ಅಲ್ಲಿ ದೊಡ್ಡ ನಿಲುವುಗನ್ನಡಿಯನ್ನು ಪ್ರತಿಷ್ಠಾಪಿಸಿ ಅದರ ಮೇಲೆ "ಓಂ ಶಾಂತಿ" ಎಂದು ಬರೆಸಿ "ಪ್ರಣವ ಪ್ರತಿಷ್ಠೆ"ಯನ್ನು ಮಾಡಿದರು. (ಅನಂತರ

ನಾರಾಯಣಗುರುಗಳ ಶಿಷ್ಯರಾದ ಬೋಧಾನಂದರು ಆ ಕನ್ನಡಿಯ ಬಳಿಯಲ್ಲೇ ಶ್ರೀ ಶಕ್ತೀಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿದರು).

* ಚಿರಯನ್ ಕೀಳ್ ಎಂಬ ಹಳ್ಳಿಯಲ್ಲಿದ್ದ ಸುಬ್ರಹ್ಮಣ್ಯ ಕ್ಷೇತ್ರದ ಜೀರ್ಣೋದ್ಧಾರದೊಂದಿಗೆ ಮರುಪ್ರತಿಷ್ಠೆ ಮಾಡುವ ಸಂದರ್ಭದಲ್ಲಿ ಶ್ರೀ ಗುರುಗಳು ಬಾಲಕ ಕುಮಾರಾನ್ ಆಶಾನನ್ನು ಮೊದಲಾಗಿ ಕಂಡರು. ಆತನ ಬುದ್ದಿಶಕ್ತಿ, ಕವಿತಾ ಸಾಮರ್ಥ್ಯವನ್ನು ಗುರುತಿಸಿ ಆತನನ್ನು ತನ್ನೊಡನೆ ಕರೆದುಕೊಂಡು ಹೋಗುತ್ತಾರೆ.

ಹೀಗೆ ನೂರಾರು ಕ್ಷೇತ್ರಗಳ ನಿರ್ಮಾಣವನ್ನು ಶ್ರೀ ಗುರು ಮಾಡಿದರು. ದೇವಾಲಯಗಳನ್ನು ಸ್ಥಾಪಿಸಿ ಸರ್ವರಿಗೂ ದೇವದರ್ಶನ ಆರಾಧನಾ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟದ್ದು ಅವರ ಸಾಧಿಸಿದ ಮೊದಲ ಕಾರ್ಯ. ಜಾತಿಭೇದ, ಮತಭೇದ, ಈಶ್ವರ ಭೇದಗಳು ಸಮಾಜದಲ್ಲಿ ಉಂಟೆಂದು ಹೇಳಿ ಅನರ್ಥಕಾರಿ ನೀಚಕರ್ಮಗಳನ್ನು ಮಾಡಿಕೊಂಡು ಹೋಗುತ್ತಿದ್ದ ಭಾರತೀಯರನ್ನು ಅಜ್ಞಾನದ ಕತ್ತಲೆಯಿಂದ ಉದ್ಧರಿಸುವ ಮಹಾತ್ಕಾರ್ಯವನ್ನು ಶ್ರೀ ಗುರು ಮಾಡಿದರು. ಕ್ಷೇತ್ರ ನಿರ್ಮಾಣದೊಂದಿಗೆ ದಲಿತರ ಸಾಂಸ್ಕೃತಿಕ ಪುನರುತ್ಥಾನಕ್ಕಾಗಿ ಶ್ರಮಿಸಿದ ನಾರಾಯಣಗುರು ಧರ್ಮ ಕರ್ಮ ಸಮನ್ವಯಕ್ಕೆ ಮಹತ್ವವಿತ್ತಿದ್ದಾರೆ. "ಗುರುಕೊಟ್ಟ ಜೋಳಿಗೆ ಎಂದು ಗೂಟಕ್ಕೆ ತೂಗುಹಾಕಿದರೆ ಭಿಕ್ಷೆ ದೊರೆಯುವುದಿಲ್ಲ"ವೆಂಬಂತೆ ಕ್ಷೇತ್ರ ನಿರ್ಮಾಣವಾದೊಡನೆ ದೇವರ ಹೆಸರಿನಲ್ಲಿ ಹರಕೆ ಸಲ್ಲಿಸಿ ದೇವರಿಗೆ ತನ್ನ ಜವಾಬ್ದಾರಿಯನ್ನು ಒಪ್ಪಿಸಿ ನೆಮ್ಮದಿಯಿಂದಿರುವವರನ್ನು ಅವರು ಸಹಿಸಲಿಲ್ಲ. ಈ ಅಂಧಶ್ರದ್ಧೆಯು ಅವರಿಗೆ ಒಪ್ಪಿಗೆಯಾಗಿರಲಿಲ್ಲ. ದೇವರಲ್ಲಿ ಭಕ್ತಿ ವಿಶ್ವಾಸವಿಟ್ಟು, ಶ್ರದ್ಧೆಯಿಂದ ಕ್ರಿಯಾಶೀಲರಾಗಿ, ಸಾಂಸ್ಕೃತಿಕ ಉತ್ಥಾನದ ಪಥದೆಡೆ ಸ್ವಯಂ ಕಾರ್ಯತತ್ಪರರಾದರೆ ಸಫಲರಾಗಲು ಸಾಧ್ಯವಿದೆ ಎಂದು ಅವರು ತನ್ನ ಜಿವಿತವಿಡೀ ಸಾಧಿಸಿ ತೋರಿಸಿದ್ದಾರೆ. ಈ ದಾರಿಯಲ್ಲಿ ನಡೆಯುವವರಿಗೆ ಅವರೊಂದು ದೊಡ್ಡ ಪ್ರೇರಣೆಯಾದುದರಿಂದಲೇ ಅವರ ಜೀವಿತ ಕಾಲದ ದಲಿತ ಸಮಾಜ ಕೇವಲ ಐವತ್ತು ವರ್ಷಗಳಲ್ಲಿ ಹಿಂದೆಂದೂ ಕಾಣದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮುನ್ನಡೆಯನ್ನು ಕಂಡಿತು. The great cultural leap ಎಂಬಂತೆ ಸಾಂಸ್ಕೃತಿಕ ಉತ್ಥಾನದ ಭೀಮನೆಗೆತ ದಲಿತ ಸಮಾಜದಿಂದ ಸಾಧ್ಯವಾಯಿತು.

ನಾರಾಯಣ ಗುರು ಅವರು ನಾಸ್ತಿಕ ಸಮಾಜ ಸುಧಾರಕರಾಗಿರಲಿಲ್ಲ. ಅವರಲ್ಲಿ ಅಚಲವಾದ ದೈವಭಕ್ತಿ ಇದ್ದೂ ಅವರು ಸಂಪ್ರದಾಯ ಶರಣರಾಗಿರಲಿಲ್ಲ. ಸತ್‌ಸಂಪ್ರದಾಯವು ಕಾಲದ ಗುಣದೊಂದಿಗೆ ಪರಿವರ್ತಿಸಲ್ಪಡಬೇಕು; ಅದು ಹರಿವ ನೀರಿನಂತೆ ತನ್ನ ಸ್ವಚ್ಛತೆಯನ್ನು ಉಳಿಸಿಕೊಳ್ಳಬೇಕು; ಅದು ಕಾಲಧರ್ಮಕ್ಕೆ ಹೊಂದಿಕೊಂಡು ನಿರಂತರ ಚೈತನ್ಯದಾಯಿಯಾಗಿರಬೇಕು ಎಂದು ಅವರು ತೋರಿಸಿಕೊಟ್ಟರು.

ಹಲವಾರು ದೇವಮಂದಿರಗಳ ಸ್ಥಾಪನೆ, ವಿಗ್ರಹ ಪ್ರತಿಷ್ಠಾಪನೆಗೈದ ಶ್ರೀ ಗುರು ಭಾರತೀಯ ಸಮಾಜದ ಅಂತಃಸತ್ವದಲ್ಲಿ ಅಡಕವಾಗಿರುವ ಧಾರ್ಮಿಕ ನಂಬಿಕೆ, ಭಕ್ತಿ ಭಾವಗಳನ್ನು ಸತ್ಕಾರ್ಯಕ್ಕೆ ಬಳಸುತ್ತಾ ದಲಿತ ಸಮಾಜದ ಪುನರುತ್ಥಾನ ಸಾಧಿಸಿದರೂ ಅವರ ದೂರದೃಷ್ಟಿ, ಮುನ್ನೋಟ ಅನನ್ಯವಾಗಿತ್ತು ಎಂಬುದು ಅವರ ಜೀವನ

ಚರಿತ್ರೆಯಿಂದಲೂ, ಸ್ತೋತ್ರ ಕೃತಿಗಳಿಂದಲೂ, ದರ್ಶನಮಾಲಾ ಮತ್ತು ಆತ್ಮೋಪದೇಶ ಶತಕಂ ಎಂಬ ಅವರು ಬರೆದ ಆಧ್ಯಾತ್ಮಿಕ ಗ್ರಂಥಗಳಿಂದಲೂ, ಅವರು ನೀಡಿದ ಹಿತೋಪದೇಶಗಳಿಂದಲೂ ನಿಚ್ಚಳವಾಗುತ್ತದೆ. ದೇವಸ್ಥಾನ ಸ್ಥಾಪನೆಯ ಕುರಿತಂತೆ ಶ್ರೀ ಗುರುಗಳ ಚಿಂತನೆಯ ಮೂಲಸೆಲೆ ಏನು ? ಈ ಬಗೆಗಿನ ಅವರ ಅನನ್ಯ ದೂರದೃಷ್ಟಿ ಹೇಗಿತ್ತು ಎಂಬುದನ್ನು ಅವರ ನಿರಂತರ ಚಟುವಟಿಕೆಗಳಿಂದ ಗುರುತಿಸಬಹುದಾಗಿದೆ.

ಅವರು ಮಾಡಿದ ಹಲವಾರು ಕ್ಷೇತ್ರ ಪ್ರತಿಷ್ಠೆಗಳಲ್ಲಿ ಶಿವನಿಗೆ ಹೆಚ್ಚು ಮಹತ್ವ ಕಲ್ಪಿಸಿರುವುದಾಗಿ ಕಂಡುಬರುತ್ತದೆ. ಹೀಗಿದ್ದೂ ಅವರ ಅರವತ್ತನೇ ವರ್ಷದ ಹುಟ್ಟುಹಬ್ಬದಾಚರಣೆಯ ದಿನ ಅವರನ್ನು ಕಾಣಲು ಬಂದ ಭಕ್ತರ ಗುಂಪೊಂದು ತಮ್ಮ ಊರಿನಲ್ಲೂ ಒಂದು ದೇವರ ವಿಗ್ರಹ ಪ್ರತಿಷ್ಠಾಪನೆ ಮಾಡಿಕೊಡಬೇಕೆಂದು ಕೇಳಿದಾಗ ಕುಶಲ ಮಾತುಕತೆಗಳ ಮಧ್ಯೆ ಅಲ್ಲಿಗೆ ಬಂದವರು ತಾಮಸ ಪೂಜಾ ಪದ್ಧತಿಯನ್ನು ಅನುಸರಿಸುವ ಕ್ಷೇತ್ರವೊಂದರ ಆಡಳಿತಾಧಿಕಾರಿಗಳೆಂದು ಗುರು ಅರಿತುಕೊಂಡರು. ಅವರ ಆರಾಧನಾ ಕ್ಷೇತ್ರದಲ್ಲಿ ಪ್ರಾಣಿಬಲಿ ನಿಲ್ಲಿಸುತ್ತಿಲ್ಲ ಯಾಕೆ ? ಎಂದು ಗುರು ಪ್ರಶ್ನಿಸಿದಾಗ, ಬಂದವರು ಗೊಂದಲಕ್ಕೊಳಗಾದರು. ಅವರಲ್ಲಿ ಒಬ್ಬಾತ ಹೇಳಿದ -

"ಹಿಂಸೆ ನಿಲ್ಲಿಸುವುದರಲ್ಲಿ ನಮಗೆ ವಿರೋಧವಿಲ್ಲ"

ಗುರು : "ಹಾಗಾದರೆ ಯಾರಿಗೆ ವಿರೋಧ"

ಭಕ್ತ : "ದೇವಸ್ಥಾನದ ಪದಾಧಿಕಾರಿಗಳಿಗೆ. ಎಷ್ಟು ಹೇಳಿದರೂ ಅವರು ಒಪ್ಪುತ್ತಾ ಇಲ್ಲ"

ಗುರು : "ನೀವು ಕೋಳಿ ಮೊದಲಾದುವನ್ನು ಕೊಡದಿದ್ದರಾಯಿತಲ್ಲ. ದೇಗುಲದ ಪದಾಧಿಕಾರಿಗಳಿಗೆ ಒಪ್ಪುವಿಕೆ, ಒಪ್ಪದಿರುವಿಕೆಗಳಾವುದೂ ಇರುವುದಿಲ್ಲ. ಅವರು ಕಂಬಗಳು ತಾನೆ ?

ಭಕ್ತ : ಕೋಳಿಗೆ ಬದಲು ಏನನ್ನು ಬಲಿ ಕೊಡುವುದೋ ಗೊತ್ತಿಲ್ಲ.

ಇದನ್ನು ಕೇಳಿದಾಗ ಅಲ್ಲೇ ಹತ್ತಿರ ನಿಂತಿದ್ದ ಆಶ್ರಮವಾಸಿಯೊಬ್ಬಾತ ಉತ್ತರಿಸುತ್ತಾನೆ, "ಉತ್ತಮವಾದ ಸಾತ್ವಿಕ ಪೂಜೆಗೆ ಕುಂಬಳಕಾಯಿ ಬಳಸುವ ಕ್ರಮವಿದೆ. ಅದನ್ನು ಬಳಸುವುದು ಒಳ್ಳೆಯದಲ್ಲವೆ ?"

ಆಗ ಗುರು ನಿರ್ಲಿಪ್ತವಾಗಿ ಹೇಳಿದರು "ಕೋಳಿಯನ್ನು ಕಡಿಯುವವನ ಮಗನನ್ನು ಬಲಿ ಕೊಟ್ಟರೆ ಏನು ತೊಂದರೆ ?"

ಸಂಭಾಷಣೆ ಹೀಗೆ ಸಾಗುತ್ತಿರುವ ಹೊತ್ತಿಗೆ ಹೊಸತಾಗಿ ಕೆಲವು ಸಂದರ್ಶಕರು ಬಂದದ್ದರಿಂದ ಮೇಲಿನ ಮಾತು ಅಷ್ಟರಲ್ಲೇ ಕೊನೆಗೊಂಡಿತು. ಈಗ ಬಂದವರೂ ತಮ್ಮ ಊರಿನಲ್ಲಿ ಹೊಸತಾಗಿ ನಿರ್ಮಿಸಲಾದ ಒಂದು ದೇಗುಲದಲ್ಲಿ ಪ್ರತಿಷ್ಠಾ ಕಾರ್ಯವನ್ನು ಗುರುಗಳೇ ನಿರ್ವಹಿಸಬೇಕೆಂದು ಗುರು ಸನ್ನಿಧಿಯಲ್ಲಿ ಭಿನ್ನವಿಸಿದರು.

ಗುರು : "ದೇಗುಲದಲ್ಲಿ ಯಾವುದನ್ನು ಪ್ರತಿಷ್ಠಾಪನೆ ಮಾಡಬೇಕು ?"

ಸಂದರ್ಶಕರಲ್ಲಿ ಒಬ್ಬಾತ : "ಶಿವನೊ, ಸುಬ್ರಹ್ಮಣ್ಯನೊ, ದೇವಿಯೊ ತಾವು ನಿರ್ಧರಿಸುವ ಯಾವುದೂ ಆಗಬಹುದು".

ಗುರು : "ಕತ್ತಲೆ ತುಂಬಿ, ಬಾವಲಿಯ ದುರ್ವಾಸನೆ ಹಬ್ಬಿಸುವ ದೇಗುಲದಿಂದ ಏನಾದರೂ ಪ್ರಯೋಜನವಿದೆಯೇ ?"

ಅದಕ್ಕೆ ಉತ್ತರಿಸಿದ್ದು ಹತ್ತಿರ ನಿಂತುಕೊಂಡಿದ್ದ ಆಶ್ರಮವಾಸಿ ಒಬ್ಬಾತ, "ದೇಗುಲಗಳಿಗೆ ಭಕ್ತರು ಮಿಂದು ಶುಚಿಯಾಗಿ ಬರುತ್ತಾರೆ".

ಗುರು : "ಅದು ಸರಿಯೇ. ದೇಗುಲದ ಒಳಗೆ ಎಲ್ಲೆಡೆಯೂ ಚೊಕ್ಕವಾಗಿರಬೇಕು. ವಿಗ್ರಹ ಪ್ರತಿಷ್ಠೆಗೆ ಬದಲಿ ಮಧ್ಯದಲ್ಲೊಂದು ದೀಪ ತೂಗುಹಾಕಿದರೂ ಸಾಕು. ಸಾಲದೇನೂ ? (ಸಂದರ್ಶಕನ ಕಡೆಗೆ ನೋಡುತ್ತಾ) ನಿಮಗೇನನಿಸುತ್ತದೆ ?

ಸಂದರ್ಶಕ : "ಆದರೆ ಅದರಿಂದ ಜನರಿಗೆ ತೃಪ್ತಿಯಾಗುವುದಿಲ್ಲ. ಅವರಿಗೆ ಒಂದು ಆರಾಧನಾ ಮೂರ್ತಿ ಬೇಕೇ ಬೇಕಾಗುತ್ತದೆ.

ಗುರು : "ಹಾಗಾದರೆ ದೀಪದ ಸುತ್ತಲೂ ಮಹಾತ್ಮರುಗಳ ಪಟಗಳನ್ನಿರಿಸಿದರೆ ಸಾಕಲ್ಲ. ಶಿವನೂ, ರಾಮನೂ ಮತ್ತಿತರರೂ ಅವರವರ ಕಾಲದ ಜನನಾಯಕರಾಗಿದ್ದರೆಂದೇ ನಮ್ಮ ಅಭಿಮತ. ಕಾಡಿನಲ್ಲಿ ನೆಲಸಿದ್ದ ಕೆಲವು ಪಂಗಡಗಳಲ್ಲಿ ದೇಹಬಲದಿಂದಲೂ, ಗುಣ ನಡತೆಯಿಂದಲೂ ಗಣ್ಯನಾಗಿದ್ದ ಒಬ್ಬಾತನಾಗಿರಬಹುದು ಶಿವ. ಬಹಳ ಪರಾಕ್ರಮಿಯೂ, ಉಪಕಾರಿಯೂ ಆಗಿದ್ದುದರಿಂದ ಜನರು ಹೊಗಳಿ, ಕ್ರಮೇಣ ಎಲ್ಲ ಗುಣಗಳೂ ತುಂಬಿಕೊಂಡ ದೇವನನ್ನಾಗಿಸಿದರು".

ಹೀಗೆಲ್ಲಾ ಅಭಿಪ್ರಾಯ ಹೇಳಿದರೂ ಸಂದರ್ಶಕರ ಬೇಡಿಕೆಯಂತೆ ಪ್ರತಿಷ್ಠಾಕಾರ್ಯ ನಿರ್ವಹಿಸುವುದಾಗಿ ಕೊನೆಯಲ್ಲಿ ಗುರು ಒಪ್ಪಿಕೊಂಡರು. ಸಂದರ್ಶಕರಿಗೂ, ಜನರಿಗೂ ಪ್ರತಿಷ್ಠೆ ಬೇಕೇ ಬೇಕಿತ್ತಲ್ಲ. ಅಂದು ಹಾಗೆ ಸಂದರ್ಶಕರೊಡನೆ ಕುಶಲ ಹೇಳುತ್ತಲೇ, ದಲಿತರಿಗೆ ದೇವಸ್ಥಾನ ಪ್ರವೇಶದ ತನ್ನ ಆಶಯವನ್ನು ಪ್ರಕಟಪಡಿಸಿದರು. ಇದರ ಪರಿಣಾಮವಾಗಿ ಮರುದಿನ ಗುರುಗಳು ತ್ರಿಶೂರು ಕೂರ್ಕಂಚೇರಿಯಲ್ಲಿರುವ ಈಳವರ ಗುಡಿಯಲ್ಲಿ ಪ್ರತಿಷ್ಠಾ ಕಾರ್ಯ ನಿರ್ವಹಿಸಿದಾಗ ಆ ಗುಡಿಯಲ್ಲಿ ಬಡಗಿ, ಕಮ್ಮಾರ, ಅಕ್ಕಸಾಲಿ ಮೊದಲಾದವರಿಗೆ ಮುಕ್ತ ಪ್ರವೇಶವನ್ನೂ, ಹೊಲೆಯರು, ಪರಯರು ಮೊದಲಾದ ಅಸ್ಪೃಶ್ಯ ಜನಾಂಗದವರಿಗೆ ದೇವಸ್ಥಾನದ "ಬಲಿ ಮಾಡಿನ" ತನಕ ಹೋಗಲು ಸ್ವಾತಂತ್ರ್ಯವನ್ನು ಗುಡಿಯ ಪದಾಧಿಕಾರಿಗಳು ನೀಡಿದರು. "ಇದು ಒಳ್ಳೆಯ ಆರಂಭ. ನಿಧಾನವಾಗಿ ಎಲ್ಲರಿಗೂ ಒಳಗೆ ಪ್ರವೇಶಿಸಬಹುದಾದ ಅವಕಾಶ ದೊರೆಯುತ್ತದೆ" ಎಂದು ಗುರುಗಳು ಹೇಳಿದರು.

ನಾರಾಯಣಗುರು ದೇವಾಲಯಗಳನ್ನು ಪ್ರತಿಷ್ಠಾಪಿಸುವಾಗ ಅಲ್ಲಿನ ಪೂಜೆ ಪುರಸ್ಕಾರಗಳಿಗಿಂತಲೂ ಹೆಚ್ಚಿನ ಮಹತ್ವ ಧ್ಯಾನಾದಿಗಳಿಗೆ ಕಲ್ಪಿಸಿದ್ದರೆಂಬುದನ್ನು ಅವರ ಶಾರದಾ ಮಠ, ಅದ್ವೈತಾಶ್ರಮದಲ್ಲಿರುವ ಕ್ಷೇತ್ರಗಳಿಂದ ತಿಳಿಯಬಹುದು. ಕೆಲವು ಕ್ಷೇತ್ರಗಳಲ್ಲಿ ದೇವಮೂರ್ತಿಗಳ ಬದಲು ಇತರ ಪ್ರತಿಷ್ಠಾ ಕಾರ್ಯ ಮಾಡಲು ನಾರಾಯಣ ಗುರುಗಳಂತಹ ವಿಭೂತಿ ಪುರುಷರಿಗೆ ಮಾತ್ರ ಸಾಧ್ಯವಾಯಿತು. ಜನರು ಅದನ್ನು ಸ್ವೀಕರಿಸಿದರು.

* ಮುರಿಕ್ಕಂಪುಳ ಗುಡಿಯಲ್ಲಿ ಶ್ರೀ ಗುರು ಪ್ರತಿಷ್ಠಾಪಿಸಿದ್ದು "ಸತ್ಯಂ, ಶಿವಂ, ದಯೆ, ಸ್ನೇಹ" ಎಂಬ ನಾಲ್ಕು ಶಬ್ದಗಳನ್ನು.
* ಕಳವಂತ್ರೋಡು ಎಂಬಲ್ಲಿ ಶಕ್ತೀಶ್ವರ ಕ್ಷೇತ್ರ ರಚಿಸಿ ಅಲ್ಲಿ ಪ್ರತಿಷ್ಠಾಪಿಸಿದ್ದು "ಓಂ ಶಾಂತಿ" ಎಂಬ ಪ್ರಣವ ಮಂತ್ರವನ್ನು ಬರೆದ ನಿಲುವುಗನ್ನಡಿಯನ್ನು.
* ತ್ರಿಶೂರಿನ ಕರೆಮುಕ್ಕ ಗುಡಿಯಲ್ಲಿ ಪ್ರತಿಷ್ಠಾಪಿಸಿದ್ದು ನಂದಾದೀಪವನ್ನು. ಇವುಗಳಲ್ಲಿ ಕೊನೆಯ ಎರಡೂ ಅನುಕ್ರಮವಾಗಿ "ತತ್ವಮಸಿ" ಹಾಗೂ "ತಮಸೋಮಾ ಜ್ಯೋತಿರ್ಗಮಯ" ಎಂಬ ಮಂತ್ರಗಳ ಪ್ರತ್ಯಕ್ಷ ಭಾಷ್ಯಗಳೇ.

ಕ್ಷೇತ್ರ ಪ್ರತಿಷ್ಠಾಪನೆಯೊಂದಿಗೆ ಶ್ರೀಗುರು ಬಯಸಿದ್ದು ದಲಿತರನ್ನು ಕತ್ತಲಿಂದ ಬೆಳಕಿನೆಡೆಗೆ ಒಯ್ಯಬಹುದಾದ ಸಾಂಸ್ಕೃತಿಕ ಉತ್ಥಾನ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಭಗವಾನ್ ಬುದ್ಧ ಮಾನವ ಜನಾಂಗವನ್ನು ಬೌದ್ಧಿಕಸ್ತರದಲ್ಲಿ ನಾಲ್ಕು ವರ್ಗಗಳಾಗಿ ಗುರುತಿಸುತ್ತಾನೆ.

* ಕತ್ತಲಿನಿಂದ ಬೆಳಕಿನ ಕಡೆಗೆ ಸಾಗಬಯಸುವವರು ಕೆಲವರು.
* ಬೆಳಕಿನಲ್ಲಿ ಈಗಾಗಲೇ ಇದ್ದರೂ ಇನ್ನೂ ಪ್ರಖರ ಬೆಳಕಿನೆಡೆಗೆ ಹೋಗ ಬಯಸುವವರು.
* ಬೆಳಕಿನಲ್ಲಿದ್ದರೂ ಕತ್ತಲೆಯ ಅಂಧಕಾರದೆಡೆಗೆ ಹೋಗುವಲ್ಲಿ ತೃಪ್ತಿ ಹೊಂದುವವರು.
* ಕತ್ತಲಲ್ಲೇ ಇದ್ದು ಇನ್ನೂ ತೀವ್ರತಮ ಅಂಧಕಾರದೆಡೆಗೆ ತಮಗೆ ಅರಿವಿಲ್ಲದೆ ಸಾಗುವವರು.

ಈ ನಾಲ್ಕು ವರ್ಗದ ಬೌದ್ಧಿಕ ಸ್ತರದ ಮಂದಿಯಲ್ಲಿ ನಿನ್ನನ್ನು ನೀನು ಗುರುತಿಸಿ ಕೊಂಡು ಉತ್ಕ್ರಾಂತಿಯ ಕಡೆಗೆ ಸಾಗಬೇಕು. ಅದಕ್ಕಾಗಿ ಜ್ಞಾನಿಯಾಗಲು ನಿನ್ನ ಆತ್ಮವನ್ನು ದೀಪದ ತರಹ ಬಳಸಿಕೊಳ್ಳಬೇಕು - "ಆತ್ಮ ದೀಪೋಭವ" ಎಂದನು. ಇದನ್ನೇ ಭಾರತದ ಆಧ್ಯಾತ್ಮ ತತ್ವಚಿಂತನೆಯಲ್ಲಿ "ಆತ್ಮ ದೇವೋಭವ" ಎಂದು ತಿಳಿಸುತ್ತಾ ಜ್ಞಾನದೀಪದಲ್ಲಿ ಬೆಳಗಿದ ಆತ್ಮದೈವತ್ವದ ಕಡೆಗೆ ಸಾಗುವುದರೊಂದಿಗೆ ವ್ಯಕ್ತಿಯ ಪೂರ್ಣ ವಿಕಾಸವನ್ನು ತಿಳಿಸುವ,

**"ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣ ಮುದಚ್ಯತೇ |**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇದಾವ ಶಿಷ್ಯತೇ ||"**

ಎಂಬ ಸನಾತನ ಧರ್ಮದ ಸಾರಸತ್ಯವೇ ಶ್ರೀ ಗುರುಗಳು ಹಮ್ಮಿಕೊಂಡಿದ್ದ ಕ್ಷೇತ್ರ ರಚನೆ ಮತ್ತು ಆ ಮೂಲಕ ಅಸ್ಪೃಶ್ಯರ ಬೌದ್ಧಿಕ ಉನ್ನತಿ, ಸಾಂಸ್ಕೃತಿಕ ಪುನರುತ್ಥಾನದ ಮೂಲಸೆಲೆ. ಇದರಿಂದಾಗಿ ಶತಮಾನಗಳಿಂದ ಅವಕಾಶವಂಚಿತ ಜನಾಂಗಕ್ಕೆ ವಿಕಾಸದ ಅವಕಾಶ ಲಭ್ಯವಾಯಿತು.

ದೇವಸ್ಥಾನ ಸ್ಥಾಪನೆಯನ್ನು ಮಾಡುತ್ತಿರುವ ಪ್ರಾರಂಭಿಕ ಹಂತದಲ್ಲಿ ಶ್ರೀ ಗುರುವಿನ ಸಾಂಸ್ಕೃತಿಕ ಪುನರುತ್ಥಾನದ ದೂರಗಾಮಿ ಯೋಜನೆಯನ್ನು ಅರ್ಥೈಸಲಾಗದ ಮಂದಿಯಿಂದ ಬಹಳಷ್ಟು ವಿರೋಧದೊಂದಿಗೆ ತಿರಸ್ಕಾರದ ಮಾತುಗಳು ಕೇಳಿಬಂದವು. ಕೆಲವು ಪುರೋಹಿತರು ಶ್ರೀ ಗುರುವನ್ನು "ಮೋಕ್ಷದ್ವಾರವನ್ನು ಕಲ್ಲು ಹಲಗೆಯಿಂದ ಮುಚ್ಚುವವನು" ಎಂದು ಹಾಸ್ಯ ಮಾಡಿದರೆ, ಇನ್ನೂ ಕೆಲವು ಕ್ಷೇತ್ರಾಧಿಪತಿಗಳು "ಸರ್ವೆಕಲ್ಲು

ಹಾಕುವವನು" ಎಂಬ ಶಿರೋನಾಮೆಗಳನ್ನು ಕೊಟ್ಟು ಸ್ವಾಮಿಗಳನ್ನು ಪತ್ರಿಕೆಗಳಲ್ಲಿ ದೂಷಣೆ ಮಾಡಿ ಲೇಖನ ಪ್ರಕಟಿಸುತ್ತಿದ್ದರು. ಅದೇ ಸಮಯದಲ್ಲಿ ಹಲವಾರು ಪುರೋಗಾಮಿ ವಿಚಾರವಂತರು ನಾರಾಯಣ ಗುರುಗಳ ಕಾರ್ಯಗಳನ್ನು ಮೆಚ್ಚಿ ಹೊಗಳಿ ಅಭಿನಂದನಾ ಪತ್ರಗಳನ್ನು ಬರೆಯುತ್ತಿದ್ದರು. ಆದರೆ ಸ್ವಾಮಿಯವರಿಗೆ ಈ ಹೊಗಳಿಕೆ ತೆಗಳಿಕೆಗಳನ್ನು ಸಮಚಿತ್ತದಿಂದ ನೋಡುವ "ಸ್ಥಿತ ಪ್ರಜ್ಞತ್ವ" ಇದ್ದುದು ಮಾತ್ರವಲ್ಲದೆ ಅವರ ಗುರಿ ಸ್ಪಷ್ಟವಾಗಿತ್ತು.

ಪ್ರಬಲ ಸುಳಿಯಿಂದೊಡಗೂಡಿದ ಪ್ರವಾಹದ ವಿರುದ್ಧವಾಗಿ ಈಜುವುದು ಸುಲಭಸಾಧ್ಯವಿಲ್ಲ. ಅದರಲ್ಲೂ ಅನೇಕ ದುಷ್ಟಶಕ್ತಿಗಳು ಸಂಘಟಿಸಿ ಎದುರು ನಿಂತರೆ ಆತ್ಮಸ್ಥೈರ್ಯ ಹಾಗೂ ಅದಮ್ಯ ಚೈತನ್ಯಗಳಿಂದಾಗಿಯೇ ಅವುಗಳನ್ನು ಮೆಟ್ಟಿನಿಲ್ಲಬೇಕು. ಶ್ರೀ ಗುರುವಿನ ಜೀವನ ಚರಿತ್ರೆಯನ್ನು ಅವಲೋಕಿಸಿದರೆ ಈ ಅವಳಿ ವರಗುಣಗಳಿಂದಲೆ ಅವರು ತನ್ನ ಕಾರ್ಯಸಿದ್ಧಿ ಪಡೆದರು ಎಂದು ತಿಳಿದುಬರುತ್ತದೆ.

## ತಾಮಸ ಪೂಜಾ ಪದ್ಧತಿಯಿಂದ ಸಾತ್ವಿಕ ಆರಾಧನೆಯ ಕಡೆಗೆ

ನಾರಾಯಣಗುರು 1888 ರಲ್ಲಿ ಅರವಿಪುರಂನಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದಾಗ ಅಲ್ಲಿ ಒಂದು ಅನುಷ್ಟುಪ್ ಪದ್ಯವನ್ನು ಮಲೆಯಾಳಂ ಭಾಷೆಯಲ್ಲಿ ಬರೆದಿರಿಸಿದ್ದರು. ಅದರ ಭಾವಾರ್ಥ ಹೀಗಿದೆ -

**ಜಾತಿಭೇದ ಮತದ್ವೇಷ**
**ಒಂದೂ ಇಲ್ಲದೆ ಸರ್ವರೂ ||**
**ಸೋದರತ್ವದಿ ಬಾಳುವ**
**ಮಾದರಿ ಸ್ಥಾನವು ಇದು ||**

ಇದು ಸಹೋದರತ್ವದ, ಸಹಬಾಳ್ವೆಯ, ಸಾಮರಸ್ಯದ ಅರ್ಥವನ್ನು ತಿಳಿಸುವುದು. ಅಂದಿನ ಕಾಲದ ದೇವಸ್ಥಾನಗಳೆಲ್ಲವೂ ಇದಕ್ಕೆ ತದ್ವಿರುದ್ಧವೇ ಇದ್ದು ಜಾತಿಭೇದ, ಮತದ್ವೇಷಾದಿಗಳು ತುಂಬಿಕೊಂಡಿವೆ ಎಂಬ ಧ್ವನಿಯೂ ಇದರಲ್ಲಿದೆ. ಅಂದಿನವರೆಗೂ ದೇಗುಲ ಪ್ರವೇಶಕ್ಕೆ ಹಾತೊರೆಯುತ್ತಲೇ ಇದ್ದು, ಅದರ ಸನಿಹಕ್ಕೆ ಕೂಡಾ ಪ್ರವೇಶಿಸುವ ಹಕ್ಕಿನಿಂದ ವಂಚಿತರಾಗಿದ್ದ ಅವರ್ಣೀಯರ ಸಲುವಾಗಿಯೇ ನಾರಾಯಣಗುರು ದೇವಪ್ರತಿಷ್ಠಾಪನೆ ಮತ್ತು ದೇಗುಲ ಸ್ಥಾಪನೆಗಳಿಗೆ ನಾಂದಿ ಹಾಕಿದ್ದರು. ಹಾಗೆ ಮಾಡುವಾಗ ಅದಕ್ಕೂ ಹಿಂದೆ ಅವರ್ಣೀಯರು ಆರಾಧಿಸುತ್ತಿದ್ದ ಭೂತರಾಧನೆಯಲ್ಲಿ ಮುತ್ತಪ್ಪನ್, ಚಾತನ್, ಚಾಮುಂಡಿ ಮಾಡಾನ್, ಚುಡಲಮಾಡಾನ್, ಪೂತತ್ತಾನ್, ಇಶಕ್ಕಿ, ಕರಿಂಕಾಳಿ ಮೊದಲಾದ ಪ್ರಾಕೃತ ಕ್ಷುದ್ರ ದೇವತೆಗಳಿದ್ದವು. ಇದರ ಬದಲು ಶಿವ, ವಿಷ್ಣು, ಸರಸ್ವತಿ ಮುಂತಾದ ಸಾತ್ವಿಕ ಶಕ್ತಿಗಳನ್ನೇ ನಾರಾಯಣಗುರು ಪ್ರತಿಷ್ಠಾಪನೆ ಮಾಡಿದ್ದು ಉದ್ದೇಶಪೂರ್ವಕವೇ ಆಗಿತ್ತು. ಆಗ ಅನುಷ್ಠಾನದಲ್ಲಿದ್ದ ಪ್ರಾಕೃತ ಆರಾಧನಾ ಸಂಪ್ರದಾಯಗಳಾದ ಪ್ರಾಣಿಬಲಿ, ಮದ್ಯನೈವೇದ್ಯ, ಪೋಲಿಹಾಡು ಮೊದಲಾದವುಗಳಿಗೆ

ನಾರಾಯಣಗುರು ಕ್ಷೇತ್ರರಚನೆಯ ಮೂಲಕ ವಿದಾಯ ಹೇಳಿದ್ದರು. ತಾಮಸ ಪೂಜಾ ಪದ್ಧತಿಯಿಂದ ಸಾತ್ವಿಕ ಆರಾಧನಾ ಕ್ರಮದೆಡೆ ಅವರ್ಣೀಯರ ಮನಪರಿವರ್ತನೆಯ ಉದ್ದೇಶವೂ ದೇಗುಲ ರಚನೆಯ ಹಿಂದೆ ಇತ್ತು ಎಂಬುದು ನಿರ್ವಿವಾದ. ಶತಮಾನಗಳಿಂದ ಜ್ಞಾನದಿಂದ ವಂಚಿತರಾಗಿ ಕತ್ತಲಿನ ಕೂಪದಲ್ಲೇ ತೃಪ್ತಿಕಾಣುತ್ತಿದ್ದ ಜನಸಮುದಾಯಕ್ಕೆ ಎಚ್ಚರವನ್ನು ನೀಡಿ, ಅರಿವಿನ ಒಳಹರಿವನ್ನು ಹರಿಸಿ ಬೆಳಕಿನೆಡೆಗೆ ಒಯ್ಯುವಲ್ಲಿ ಶ್ರೀಗುರುವಿನ ಕ್ಷೇತ್ರ ಪ್ರತಿಷ್ಠಾಪನೆ ಸಫಲವಾಯಿತು.

ಆದರೆ ಇಂತಹ ಒಂದು ಪರಿವರ್ತನೆಯನ್ನು ದಲಿತರಲ್ಲಿ, ಅಸ್ಪೃಶ್ಯರಲ್ಲಿ ತರುವುದು ನಾರಾಯಣಗುರುಗಳಂತಹ ಆಧ್ಯಾತ್ಮ ಪುರುಷರಿಗೂ ಅಷ್ಟೊಂದು ಸುಲಭ ಸಾಧ್ಯವಾಗಿರಲಿಲ್ಲ. ಇದಕ್ಕಾಗಿ ಅವರು ದಲಿತರ ಮನವೊಲಿಸಲು, ಧೈರ್ಯ ತುಂಬಲು ಬಹಳ ಪ್ರಯತ್ನ ಪಡಬೇಕಾಯಿತು. ತಾನು ಹುಟ್ಟಿದ ಮನೆಯ ಅನತಿದೂರದಲ್ಲಿ ಒಂದು ಕಾರಣೀಕ ದೈವದ ಗುಡಿ ಇತ್ತು. ಅಲ್ಲಿ ಆರಾಧಿಸಲ್ಪಡುವ ಸ್ತ್ರೀದೇವತೆಯ ಮೂರ್ತಿಯು ನೋಡಲು ಭಯಾನಕವಾಗಿತ್ತು. ಅಲ್ಲಿ ನಡೆಯುವ ವಾರ್ಷಿಕ ಉತ್ಸವವು ವಿಜೃಂಭಣೆಯಿಂದ ನಡೆಯುತ್ತಿದ್ದು ಅಧಮಪೂಜೆ, ಅಸುರಕ್ರಿಯೆಯಾದ ಪ್ರಾಣಿಬಲಿ, ಮದ್ಯಸೇವನೆ ನಡೆಯುತ್ತಿದ್ದು ಇಡೀ ವಾತಾವರಣವೇ ಅಂದು ಬೀಭತ್ಸದಿಂದ ಕೂಡಿರುತ್ತಿತ್ತು. ಭಕ್ತಿಗಿಂತಲೂ ಭಯವೇ ಪ್ರಧಾನವಾದ ಈ ಜನಸಮುದಾಯದ ಮನ ಒಲಿಸಿ ಶ್ರೀಗುರು ಒಂದು ವಾರ್ಷಿಕ ಉತ್ಸವದಂದು ಆ ಮೂರ್ತಿಯನ್ನು ಸ್ಥಾನಪಲ್ಲಟಗೊಳಿಸಿ ಅಲ್ಲಿ ಗಣೇಶನ ವಿಗ್ರಹ ಪ್ರತಿಷ್ಠಾಪನೆ ಮಾಡುವುದರೊಂದಿಗೆ ಸಾತ್ವಿಕ ಪೂಜೆಗೆ ಅನುವು ಮಾಡಿಕೊಟ್ಟರು. ಮೂಲವಿಗ್ರಹದ ಸ್ಥಾನಪಲ್ಲಟದಿಂದ ಮನೋವಿಪ್ಲವವಾಗಬಹುದೆಂದು ಭಯಭೀತರಾಗಿದ್ದ ಮುಗ್ಧಜನಸಮುದಾಯ ಮುಂದೆ ಏನೊಂದು ಸಾಮಾಜಿಕ ವಿಘ್ನ ಕಂಡುಬಾರದ ಕಾರಣ ನಾರಾಯಣಗುರುವಿನ ಬಗ್ಗೆ ಅತ್ಯಂತ ಗೌರವವನ್ನು ತೋರಿದರು. ಈ ಘಟನೆಯ ನಂತರ ಗುರುವಿನ, "ತಾಮಸ ಪೂಜಾಪದ್ಧತಿಯಿಂದ ಸಾತ್ವಿಕ ಆರಾಧನೆಯ ಕಡೆಗೆ" ಜನಮನವನ್ನು ಒಲಿಸುವ ಪ್ರಕ್ರಿಯೆ ಯಶಸ್ವಿಯಾಗುವಂತಾಯಿತು.

ಕೊಚ್ಚಿಯಲ್ಲಿ ಪರವೂರು ಎಂಬಲ್ಲಿಂದ ಅರವಿಪುರಂ ಪ್ರದೇಶದ ನೈಯಾಟಿಂಕರಂವರೆಗೆ ಪ್ರಾಣಿಬಲಿಗೆ ಪ್ರಾಧಾನ್ಯವಿದ್ದ ದೈವ ಕ್ಷೇತ್ರಗಳನ್ನು ಸ್ವಾಮಿಯವರ ಆಜ್ಞಾನುಸಾರ ಪರಿವರ್ತನೆ ಗೊಳಿಸಲಾಯಿತು. ಹಳೆಯ ದೈವ ದೇವತೆಗಳ ಗುಡಿಗಳನ್ನು ಜನರು ತೊರೆದು ಅವುಗಳ ಬದಲಿಗೆ ಶಿವಕ್ಷೇತ್ರಗಳ ನಿರ್ಮಾಣಕ್ಕೆ ಉತ್ಸುಕರಾದರು. ಅಂಧ ವಿಶ್ವಾಸದಲ್ಲಿ ಮುಳುಗಿ ಭಯಭೀತರಾದುದರಿಂದಲೇ ಈ ಜನರೆಲ್ಲ ಹಿಂದೆ ಅಧಮಾರಾಧನೆ ಮಾಡುತ್ತಿದ್ದರು. ವಿದ್ಯಾಭ್ಯಾಸವುಳ್ಳವರು ಕೂಡಾ ತಮ್ಮಲ್ಲಿ ಅಧ್ಯಾತ್ಮಜ್ಞಾನ ಎಳ್ಳಷ್ಟು ಇಲ್ಲದ ಕಾರಣ ಅವರೆಲ್ಲಾ ಪ್ರಾಣಿಬಲಿಯಂತಹ ಹಿಂಸಾಚಾರದ ಆರಾಧನೆಗೆ ಒಪ್ಪುತ್ತಿದ್ದರು. ಅದನ್ನು ತ್ಯಜಿಸಲು ಅವರು ಭಯಪಡುತ್ತಿದ್ದರು. ಆದರೆ ನಾರಾಯಣಗುರುಗಳ ಅಧ್ಯಾತ್ಮಿಕ ಔನ್ನತ್ಯ, ಮಾತಿಗಿಂತ ಕೃತಿಗೆ ಕೊಡುವ ಮಹತ್ವ, ಅವರ ಪರಿಶುದ್ಧ ನಡತೆ, ಹಾಗೂ ಗುರುಗಳ ಆತ್ಮ ಇತರರ ಆತ್ಮದೊಂದಿಗೆ ಸೇರಿಕೊಂಡಂತೆ ಇದ್ದ ತಾದಾತ್ಮ್ಯಭಾವ ನಿರಕ್ಷರ ಕುಕ್ಷಿಗಳಿಗೂ ಅನುಭವಕ್ಕೆ ಬಂದ ಪ್ರಯುಕ್ತ, ಸ್ವಭಾವಜನ್ಯ ಚಳವಳಿಯ

ರೂಪದಲ್ಲಿ (Spontaneous Revolution) ಗುರುಗಳ ಉದ್ದೇಶಕ್ಕೆ ಪೂರಕವಾಗಿ ಜನರು ವರ್ತಿಸತೊಡಗಿದರು. ಕೀಳು ದೈವಗಳನ್ನು ಪೂಜಿಸುತ್ತಿದ್ದ ಗುಡಿಗಳು ಕ್ರಮೇಣ ದೇವರ ಮಂದಿರಗಳಾದವು.

ಆರಾಧನೆಯಲ್ಲಿ ತಾಮಸ ಪೂಜಾಪದ್ಧತಿಯ ವರ್ಜ್ಯ ಹಾಗೂ ಪ್ರಾಣಿಬಲಿಯ ನಿಷೇಧದ ಬಗ್ಗೆ ನಾರಾಯಣಗುರು ತನ್ನ "ದೈವಚಿಂತನ" ಎಂಬ ಕೃತಿಯಲ್ಲಿ ವಿಶದವಾಗಿ ವಿವರಿಸಿದ್ದಾರೆ. ಇದರ ಕೊನೆಯ ಭಾಗದಲ್ಲಿ "ದೇವರು ಮನುಷ್ಯರ ಉಪಯೋಗಕ್ಕಾಗಿಯೇ ಪ್ರಾಣಿಗಳನ್ನು ಸೃಷ್ಟಿಸಿರುವನು ಎಂಬ ಕಲ್ಪನೆ ಅವುಗಳ ಕ್ಷೀರಾದಿಗಳ ಕುರಿತಾಗಿದ್ದರೆ ಸಮಂಜಸವಾಗುತ್ತಿತ್ತು. ಆಗ ಅಚರ ಪದಾರ್ಥಗಳಾದ ಧಾನ್ಯ ಮೊದಲಾದವುಗಳನ್ನು ಸಂಪೂರ್ಣ ಮನುಷ್ಯರ ಉಪಯೋಗಕ್ಕಾಗಿಯೇ ದೇವರು ಸೃಷ್ಟಿಸಿರುವನೆಂದೂ, ಪಶುಗಳನ್ನು ಕ್ಷೀರಾದಿಗಳ ಉಪಯೋಗಕ್ಕಾಗಿಯೇ ಹೊರತು ಇತರ ಉದ್ದೇಶದಿಂದ ಸೃಷ್ಟಿಸಿದ್ದಲ್ಲವೆಂದೂ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ, ಪ್ರಾಣಿಗಳನ್ನು ತಿಂದರೇನೇ ಮನುಷ್ಯತ್ವ ಸಿದ್ಧಿಸುವುದು ಎಂದಾದರೆ ವ್ಯಾಘ್ರಾದಿಗಳಾದ ಕ್ರೂರ ಜಂತುಗಳಲ್ಲೇ ತಾನೆ ಅತಿಮಾನುಷತ್ವ ಸಿದ್ಧಿಸಬೇಕಾದದ್ದು. ಹೀಗಾದರೆ ಕೆಲವು ಜೀವಕಾರುಣ್ಯವಿರುವ ವ್ಯಕ್ತಿಗಳೇ ಮೃಗಗಳಾಗಿರುವರು ಎಂದಲ್ಲವೇ ಸಿದ್ಧವಾಗುವುದು! ಒಳ್ಳೇದು! ಈ ಸಂಗತಿಗಳನ್ನು ದೇವರಲ್ಲಿ ಸ್ಥಾಪಿಸಿ ಹೇಳುವುದಕ್ಕಿಂತಲೂ ಹೆಚ್ಚಿನ ದೈವದೂಷಣೆ ಇನ್ನೊಂದಿದೆಯೇ ?" ಎಂದಿದ್ದಾರೆ ನಾರಾಯಣಗುರು.

ಸಾತ್ವಿಕ ಆರಾಧನೆಯನ್ನು ಅನುಷ್ಠಾನಗೊಳಿಸಿ ನಾರಾಯಣಗುರು ಪ್ರತಿಷ್ಠಾಪಿಸಿದ ದೇವಸ್ಥಾನಗಳಲ್ಲಿ ನಿತ್ಯಪೂಜೆ, ನೈವೇದ್ಯ, ಉತ್ಸವಗಳು ಚೆನ್ನಾಗಿಯೇ ನಡೆಯುತ್ತಿದ್ದವು. ಇವೆಲ್ಲಾ ಸಾಮಾನ್ಯ ಜನರ ಮನಸ್ಸಮಾಧಾನಕ್ಕಾಗಿ ಪ್ರಾರಂಭದ ದೆಸೆಯಲ್ಲಿ ಬೇಕಾಗುತ್ತದೆ. ದೈವಭಕ್ತಿಗೆ ಇದಕ್ಕಿಂತಲೂ ಉತ್ತಮವಾದ ಮಾರ್ಗ ಬೇರೆಯೇ ಇದೆ ಎಂಬುದನ್ನು ವಿಚಾರವಂತರಿಗೆ ನಾರಾಯಣಗುರು ತೋರಿಸಿಕೊಟ್ಟರು. ಇದಕ್ಕಾಗಿ ಶ್ರೀಗುರು ದಲಿತರ ಏಳಿಗೆಗೆ ಮಾಡಿದ ಧರ್ಮಪರಿಷ್ಕಾರದ ಎರಡನೇ ಘಟ್ಟವೆಂದರೆ ಶಿವಗಿರಿಯಲ್ಲಿ ಮಾಡಿದ ಶಾರದಾ ಪ್ರತಿಷ್ಠೆ. ಸವರ್ಣರಲ್ಲಿ ಇರುವಂತೆ ಉತ್ತಮ ಆರಾಧನಾ ಕ್ರಮವನ್ನು ನಿಮ್ನ ಜನರಿಗೂ ಪ್ರತ್ಯಕ್ಷ ತೋರಿಸಿಕೊಡಲಾಯಿತು. ಶಾರದಾ ಆರಾಧನೆಗಾಗಿ ಕೇವಲ ಕರ್ಪೂರಾರತಿ ಮಾತ್ರ ಸಾಕು. ಇತರ ಪೂಜಾ ಪದ್ಧತಿಯಂತೆ ನೈವೇದ್ಯ, ಉತ್ಸವಗಳು ಬೇಡವೆಂದು ಗುರುಗಳು ಆಜ್ಞಾಪಿಸಿದ್ದರು. ಈ ನಿಯಮವು ಈಗಲೂ ಶಿವಗಿರಿಯಲ್ಲಿ ನಡೆಯುತ್ತಿದೆ.

ಅಂದಿನ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ನಾರಾಯಣಗುರು ಪ್ರಾರಂಭಿಸಿದ ದೇವಸ್ಥಾನ ಪ್ರತಿಷ್ಠಾಪನೆಯೊಂದಿಗೆ ದಲಿತರ ಸಾಂಸ್ಕೃತಿಕ ಪುನರುತ್ಥಾನವನ್ನು ಪ್ರಶ್ನಿಸಿ "ತೀರ್ಥಕ್ಷೇತ್ರಗಳು ಈ ಕಾಲಕ್ಕೆ ಅಗತ್ಯವಿಲ್ಲ" ಎಂಬ ಅಭಿಪ್ರಾಯದ ಪತ್ರಿಕಾ ವರದಿಗಳು ಪ್ರಕಟವಾಗುತ್ತಿರುವ ಬಗ್ಗೆ ಸಂಪಾದಕರೊಬ್ಬರು ಗುರುಗಳನ್ನು ಭೇಟಿಯಾಗಿ ವಿಚಾರವೆತ್ತುತ್ತಾರೆ. ಇಲ್ಲಿ ನಡೆದ ಸಂಭಾಷಣೆ "ಧರ್ಮವಾಣಿ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸಂಪಾದಕ : ದೇವಾಲಯಗಳು ಈ ಕಾಲಕ್ಕೆ ಅಗತ್ಯವಿಲ್ಲ ಎಂದು ಹೆಚ್ಚಿನವರ ಅಭಿಪ್ರಾಯ.

ಸ್ವಾಮಿ : ಅವುಗಳು ಅಗತ್ಯವಿಲ್ಲವೆಂದು ಹೇಗೆ ಹೇಳುವುದು ? ಕ್ಷೇತ್ರಗಳು ಶುದ್ಧವಾಗಿರುವಂತೆ ನೋಡಿಕೊಳ್ಳಬೇಕು. ಅಲ್ಲಿಗೆ ಹೋಗುವವರು ಶುಚಿರ್ಭೂತರಾಗಿ, ಒಳ್ಳೆಯ ವಿಚಾರ, ಒಳ್ಳೆಯ ಮಾತುಗಳನ್ನು ಆಡಬೇಕು. ದೇವರ ಸ್ಮರಣೆ ಮಾಡಬೇಕು. ಶುದ್ಧ ವಾಯುವಿನ ವಾತಾವರಣ ಅಲ್ಲಿರಬೇಕು. ಕೆಲವರು ಕ್ಷೇತ್ರದಲ್ಲಿ ಉಪವಾಸ ಮೊದಲಾದ ವ್ರತಗಳನ್ನು ಆಚರಿಸಿ ದೇಹವನ್ನೂ, ಮನಸ್ಸನ್ನೂ ಶುದ್ಧಿಗೊಳಿಸುತ್ತಾರೆ. ಅಲ್ಲಿ ಕೆಲವರ ಸ್ವಾರ್ಥ, ಮೋಹಗಳು ಬಿಟ್ಟು ಹೋಗುತ್ತವೆ. ಕೆಲವರಿಗೆ ಅವರ ಇಷ್ಟಾರ್ಥಗಳು ಸಿದ್ಧಿಸುತ್ತದೆ. ಈ ಪರಿಣಾಮಗಳು ಅವರವರ ವಿಶ್ವಾಸದಂತೆ ಲಭಿಸುತ್ತದೆ. ಇದೆಲ್ಲಾ ಪ್ರಯೋಜನವಲ್ಲವೇ ? ಯಾತ್ರಾ ಸ್ಥಳಗಳನ್ನು ಒಳ್ಳೆಯ ಕ್ಷೇತ್ರದ ಕ್ರಮದಂತೆ ನಡೆಸಿಕೊಂಡು ಹೋಗಬೇಕು.

ಸಂಪಾದಕ : ವಿಗ್ರಹಾರಾಧನೆಯನ್ನು ಜನರು ದೂಷಿಸುತ್ತಾರೆ. ಅದರಿಂದ ಅಂಧವಿಶ್ವಾಸ, ಮೂಢನಂಬಿಕೆಗಳು ವೃದ್ಧಿಸುತ್ತವೆಯಲ್ಲವೆ ?

ಸ್ವಾಮಿ : ಯಾತ್ರಾಕ್ಷೇತ್ರಕ್ಕೆ ಹೋಗುವಾಗ ವಿಗ್ರಹದ ಸ್ಮರಣೆಗೆ ಪ್ರಾಮುಖ್ಯತೆ ನೀಡದೆ ಈಶ್ವರನನ್ನು ಸ್ಮರಿಸಿಕೊಂಡು ಹೋಗುವರು. (ನಗುತ್ತಾ) ನಿಮ್ಮಂಥ ಜನರು ಅವರಿಗೆ ಪರಿಪಾಠ ಮಾಡಿದರೆ ಅವರು ವಿಗ್ರಹಗಳನ್ನು ಸ್ಮರಿಸುವುದಿಲ್ಲ. ಅವರಲ್ಲಿರುವ ತಪ್ಪು ಅಭಿಪ್ರಾಯವನ್ನು ಸರಿಯಾದ ಬೋಧನೆಯಿಂದ ಬಿಡಿಸಬೇಕು. ಎಲ್ಲರೂ ಆರಾಧಿಸುವುದು ಈಶ್ವರನನ್ನೇ, ವಿಗ್ರಹವನ್ನಲ್ಲ. ಜನರಿಗೆ ಒಳ್ಳೆಯ ಭಾವನೆ ಉಂಟಾಗುವಂತೆ ಕ್ಷೇತ್ರದ ಪರಿಸರವನ್ನು ರೂಪಿಸಬೇಕು. ನಾಲ್ಕೂ ಕಡೆ ಒಂದೊಂದು ಉದ್ಯಾನಮಾಡಿ ಒಳ್ಳೆಯ ವೃಕ್ಷಗಳನ್ನು ನೆಟ್ಟು ಅದರ ಬುಡದಲ್ಲಿ ಕಟ್ಟೆಯನ್ನು ರಚಿಸಿ, ಜನರಿಗೆ ಪರಿಶುದ್ಧ ಗಾಳಿ, ನೆರಳು ದೊರಕು ವಂತಿರಬೇಕು. ಎಲ್ಲಾ ಕ್ಷೇತ್ರಗಳಲ್ಲೂ ವಾಚನಾಲಯಗಳಿರಬೇಕು. ಅಲ್ಲಿ ಎಲ್ಲಾ ಬಗೆಯ ಧರ್ಮಗ್ರಂಥಗಳು ದೊರಕಬೇಕು. ಒಂದು ಕಡೆ ಪುಟ್ಟ ಕ್ಷೇತ್ರವೊಂದು ಇದ್ದರೆ ಅದು ಪವಿತ್ರವೂ, ಮನೋಹರವೂ ಆದ ಸ್ಥಳವಾಗುವುದರಿಂದ ಅಲ್ಲಿಗೆ ಜನರು ಬರುತ್ತಾರೆ. ಅವರಿಗೆ ಒಳ್ಳೆಯ ಭಾವನೆಗಳು ಉಂಟಾಗುತ್ತವೆ. ಆದುದರಿಂದ ಕ್ಷೇತ್ರಗಳ ಅಗತ್ಯವಿದೆ. ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಅದನ್ನು ನಡೆಸಿಕೊಂಡು ಹೋಗಬೇಕು.

ಕ್ಷೇತ್ರ ರಚನೆಯೊಂದಿಗೆ ಭಾರತದ ಸನಾತನ ಧರ್ಮ ಸಿದ್ಧಾಂತವನ್ನು ಅನುಸರಿಸಿ ಸಮಾಜ ಸುಧಾರಣೆಯನ್ನು ಹಾಗೂ ಮತ ಸುಧಾರಣೆಯನ್ನು ಮಾಡಲು ಯತ್ನಿಸಿ ಜಾತಿವಾದಿಗಳನ್ನೂ, ಮತಾಂಧರನ್ನೂ ದ್ವೇಷಿಸದೆ, ಹಿಂದುಳಿದವರ ಉದ್ಧಾರಕ್ಕೆ ಪ್ರಯತ್ನಿಸಿದವರು ನಾರಾಯಣ ಗುರು. ಅವರ ಈ ದಿಟ್ಟ ಹೆಜ್ಜೆಯಿಂದಾಗಿ, ಅವಿಶ್ರಾಂತ ಸಾಧನೆಯಿಂದಾಗಿ ಶತಮಾನಗಳಿಂದ ಜಡತೆ ತುಂಬಿದ ಜನಕೋಟಿಯು ಮೂರು -ನಾಲ್ಕು ದಶಕಗಳಲ್ಲಿ ನಾರಾಯಣ ಗುರುಗಳ ನೇತೃತ್ವದಲ್ಲಿ ಗಳಿಸಿದ ಪ್ರಗತಿ ಗಣನೀಯ.

ಧರ್ಮವೀರನಾಗಿಯೂ, ಕರ್ಮವೀರನಾಗಿಯೂ ಇದ್ದು, ಆಡಿದುದನ್ನು ಮಾಡಿ ತೋರಿಸಿದ್ದರಿಂದ ಮಾನವ ಯತ್ನಕ್ಕೆ ಫಲವು ದೊರಕಿಯೇ ದೊರಕುವುದೆಂದು ಮುಂದುವರಿದುದರಿಂದ ಅವರ ದಲಿತೋದ್ಧಾರದ ದೀಕ್ಷೆಯು ಸಫಲವಾಯಿತು. ಮಾನವ ಕಲ್ಯಾಣಕ್ಕಾಗಿ ಪರಿಶ್ರಮಿಸಿದ ನಾರಾಯಣಗುರು ಯಶಶ್ಶರೀರಿಯಾದರು, ಅಜರಾಮರರಾದರು.

ನಾರಾಯಣಗುರುಗಳು ಪ್ರತಿಷ್ಠಾಪಿಸಿದ ದೇವಸ್ಥಾನಗಳಲ್ಲಿ ಪೂಜೆಮಾಡಲು ಕೆಳವರ್ಗದ ಆರಿಸಿದ ಮಂದಿಗೆ ಒಂಬತ್ತು ವರ್ಷ ವೇದ, ಉಪನಿಷತ್ತು, ಮಂತ್ರ, ತಂತ್ರ ಶಾಸ್ತ್ರಗಳಲ್ಲಿ ಕಠಿಣ ತರಬೇತಿ ನೀಡಿದ ಬಳಿಕವೇ ಇವರನ್ನು ಪೂಜೆಗೆ ನೇಮಿಸಲಾಗುತ್ತಿತ್ತು. ಯಾಂತ್ರಿಕವಾಗಿ ಮಂತ್ರವನ್ನು ಗೊಣಗಿ ಪೂಜೆಯ ಶಾಸ್ತ್ರವನ್ನು ಮಾಡುವ ವಿಧಾನಕ್ಕೂ ತರಬೇತಿ ಹೊಂದಿದ ಈ ಹೊಸ ಪೀಳಿಗೆಯ ಪೂಜಾವಿಧಾನಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ದಲಿತವರ್ಗದಿಂದಲೂ ಹೊಸತಾಗಿ ಸಂಸ್ಕಾರಯುಕ್ತ ಜನಾಂಗವೊಂದರ ಉದಯವಾಗಲು ಇದು ನಾಂದಿಯಾಯಿತು.

## ಅಸ್ಪೃಶ್ಯತಾ ನಿವಾರಣೆ, ಮದ್ಯವರ್ಜನೆ - ಚಿಂತನೆ, ಅನುಷ್ಠಾನ

ಹಿಂದುಳಿದ ಜನಾಂಗದವರಿಗೆ ದೇವಸ್ಥಾನ ರಚನೆಯ ಚಳವಳಿ ಪ್ರಾರಂಭ ವಾದಂದಿನಿಂದ ಕೇರಳದಾದ್ಯಂತ ಹಾಗೂ ಅದರ ಆಸುಪಾಸಿನ ಕರಾವಳಿ ಕರ್ನಾಟಕ, ತಮಿಳುನಾಡಿನಲ್ಲಿ ಸುಮಾರು ಐವತ್ತು ವರ್ಷಗಳ ಅವಧಿಯಲ್ಲಿ ವಿಸ್ಮಯಕರ ಪರಿವರ್ತನೆಯು ಕಂಡುಬಂತು. ಇದಕ್ಕೆ ಮೂಲಪ್ರೇರಣೆ ನಾರಾಯಣಗುರು. ಕೆಳಜಾತಿಯವರಲ್ಲಿ, ಅಸ್ಪೃಶ್ಯರಲ್ಲಿ ಆತ್ಮಾಭಿಮಾನಿ ಪ್ರಜ್ಞೆ ಮೂಡಿ, ಸಾಮಾಜಿಕ ಪ್ರಗತಿಯೆಡೆಗೆ ಸಾಗಿದ ರಾಜ್ಯಗಳಲ್ಲಿ ಕೇರಳಕ್ಕೆ ಪ್ರಥಮಸ್ಥಾನ. ಇದೊಂದು ರಕ್ತರಹಿತ ಕ್ರಾಂತಿ. ಅಸ್ಪೃಶ್ಯತಾ ನಿವಾರಣೆಯಲ್ಲಿ ಮೇಲಿನ ಜಾತಿಯವರೇ ಸ್ವಯಂಪ್ರೇರಿತರಾಗಿ ಕೆಳಜಾತಿಯವರ ಚಳವಳಿಯ ಹಿರಿತನ ವಹಿಸುವಷ್ಟು ಮಾನಸಿಕ ಪರಿವರ್ತನೆ ಆಗತೊಡಗಿತು.

"ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಎಂಬ ಸನಾತನ ಸಂದೇಶವನ್ನು ಹೊತ್ತು ನಾರಾಯಣಗುರು ಆಧ್ಯಾತ್ಮಶಕ್ತಿಯ ಮಹಾಯೋಗಿಯಾಗಿ ದಕ್ಷಿಣ ಭಾರತದಲ್ಲಿ ಈ ಶತಮಾನದ ಪ್ರಾರಂಭದಲ್ಲಿ ವಿಚಾರಕ್ರಾಂತಿಯನ್ನು ಅದರಿಂದಾಗಿ ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡಿದ ಪ್ರಯುಕ್ತ ಕೇರಳದಾದ್ಯಂತ ಇಂದು ಅಸ್ಪೃಶ್ಯತಾ ನಿವಾರಣೆ ಸಂಪೂರ್ಣ ಸಾಧ್ಯವಾಗಿದೆ. ಗಾಂಧೀಜಿಯವರು ಅಸ್ಪೃಶ್ಯತೆಯ ವಿರುದ್ಧ ಪೂರ್ಣ ಹೋರಾಟ ಪ್ರಾರಂಭಿಸುವ ಮೊದಲೇ ನಾರಾಯಣಗುರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿ ಯಶಸ್ಸನ್ನು ಪಡೆದ ಪ್ರಯುಕ್ತ ಮಹಾತ್ಮರು ಸ್ವತಃ ಶಿವಗಿರಿಗೆ ಬಂದು ಗುರುಗಳನ್ನು ಭೇಟಿಯಾಗಲು ಅಪೇಕ್ಷಿಸಿದರು.

ಅಸ್ಪೃಶ್ಯತಾ ನಿವಾರಣೆ ಹಾಗೂ ಸಮಾಜ ಸುಧಾರಣೆಯ ಕಾರ್ಯದಲ್ಲಿ ನಾರಾಯಣಗುರುಗಳ ಬೋಧನೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿ ಕೃತಿಗಿಳಿಸಲೆಂದು ಕೇರಳದಲ್ಲಿ ಸ್ಥಾಪಿಸಲಾದ "ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ

(S.N.D.P)" ಎನ್ನುವ ಸಂಸ್ಥೆಯು ಪ್ರಧಾನ ಪಾತ್ರ ವಹಿಸಿದೆ. ದುರ್ಬಲ ಹಾಗೂ ಹಿಂದುಳಿದವರ, ಉಪೇಕ್ಷಿತರ ಹಿತಕ್ಕಾಗಿ ದುಡಿಯುವುದು ಈ ಸಂಸ್ಥೆಯ ಸದಸ್ಯರ ಉದ್ದೇಶವಾಗಿತ್ತು. ಗುರುವಿನ ವಿಶ್ವಮಾನವ ಪ್ರಜ್ಞೆಯನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸವನ್ನು ಉತ್ಸಾಹದಿಂದ ಮಾಡುತ್ತಿರುವ ಈ ಸಂಸ್ಥೆಯಲ್ಲಿ ಹಲವಾರು ಮೇಲ್ವರ್ಗದ ವಿಚಾರವಂತರೂ, ಹಿಂದುಳಿದ ವರ್ಗದ ಈಳವರೂ, ಅಸ್ಪೃಶ್ಯ ಜನಾಂಗದವರೂ ಸೇರಿದ್ದು ನಾರಾಯಣ ಗುರುಗಳ ಮಾರ್ಗದರ್ಶನ ಅವರಿಗೆ ಹೊಸಚಾಲನೆ ನೀಡಿತು; ಸಾಮಾಜಿಕ ಪ್ರಗತಿ ಇಲ್ಲಿ ಸುಲಭವಾಯಿತು. ನಾರಾಯಣಗುರುಗಳ ನಂತರದ ದಿನಗಳಲ್ಲೂ ಜನರೇ ಸ್ವಪ್ರೇರಣೆಯಿಂದ ಮುಂದುವರಿಸಿದ ಈ ಭಾವನಾತ್ಮಕ ಚಳವಳಿಯನ್ನೇ ಸಮಾಜ ಶಾಸ್ತ್ರದಲ್ಲಿ Spontaneous Revolution ಎನ್ನುತ್ತಾರೆ. ಇದರ ಪರಿಣಾಮವಾಗಿ ಕೇರಳದಲ್ಲಿ ಹೊಸ ಜಾಗೃತಿ ಉಂಟಾಗಿ ಅಸ್ಪೃಶ್ಯತೆಯ ಪಿಡುಗು ದೂರವಾಯಿತು. ಅಸ್ಪೃಶ್ಯರು ಬೀದಿಗಳಲ್ಲಿ, ದೇವಸ್ಥಾನದ ಹೊರವಲಯದಲ್ಲಿ ನಿರಾತಂಕವಾಗಿ ಸಂಚರಿಸುವ ಸೌಲಭ್ಯ ದೊರೆಯಿತು. ಶಾಲಾ ಕಾಲೇಜು ಮತ್ತು ವಿದ್ಯಾರ್ಥಿನಿಲಯದಲ್ಲಿ ಅವರಿಗೆ ಪ್ರವೇಶ ದೊರೆಯಿತು. ಕೊನೆಗೆ 1936 ರಷ್ಟರಲ್ಲಿ ದೇವಾಲಯ ಪ್ರವೇಶಕ್ಕೆ ಅವಕಾಶವೂ ದೊರೆಯಿತು. ದೇವಸ್ಥಾನ ಪ್ರವೇಶ ದೊರಕಿಸಿಕೊಡುವಲ್ಲಿ "ವೈಕಂ" ಚಳವಳಿ ಬಹಳಷ್ಟು ಪ್ರಭಾವ ಬೀರಿದೆ. ಈ ಚಳವಳಿಯಲ್ಲಿ ಮೇಲಿನ ಜಾತಿಯವರೇ ಸ್ವಯಂ ಪ್ರೇರಿತರಾಗಿ ಕೆಳಜಾತಿಯವರೊಡನೆ ಸೇರಿಕೊಂಡು ಅಭೂತಪೂರ್ವವಾಗಿ ಈ ಚಳವಳಿಯನ್ನು ಮುಂದುವರಿಸಿದುದು ಕೇರಳದಲ್ಲಿ ಚರಿತ್ರಾರ್ಹವಾಗಿದೆ. ಇದರ ಪರಿಣಾಮವಾಗಿ ತಿರುವಾಂಕೂರು ರಾಜ್ಯದಲ್ಲಿ ಎಲ್ಲ ಜಾತಿಯವರಿಗೂ ದೇವಸ್ಥಾನ ಪ್ರವೇಶ ಸಿಗುವಂತಾಯಿತು. ಇಂತಹ ಪರಿವರ್ತನೆಯನ್ನು ಮಾಡಿದ ಭಾರತದಲ್ಲೇ ಮೊದಲ ರಾಜ್ಯ ತಿರುವಾಂಕೂರು.

ಅಸ್ಪೃಶ್ಯ ನಿವಾರಣೆಯ ಹೋರಾಟಕ್ಕೆ ಯಶಸ್ಸು ಸಿಗಲು ಪ್ರಮುಖ ಕಾರಣ ನಾರಾಯಣಗುರುಗಳ ಸಮಾಜಸುಧಾರಣೆಯಿಂದಾಗಿ ಉಂಟಾದ ಜನರ ಮೂಲಭೂತ ಧೋರಣೆಯಲ್ಲಾದ ಮನಃ ಪರಿವರ್ತನೆ; ಅದರೊಂದಿಗೆ ಹಿಂದುಳಿದವರಲ್ಲಿ, ಅಸ್ಪೃಶ್ಯರಲ್ಲಿ ಉಂಟಾದ ಸಾಂಸ್ಕೃತಿಕ ಪುನುರುತ್ಥಾನ. ಮೇಲ್ವರ್ಗದವರಂತೆ ಇವರು ಶುಚೀರ್ಭೂತರಾಗಿ, ವಾಕ್‌ಶುದ್ಧಿಯಲ್ಲೂ, ನಡವಳಿಕೆಯಲ್ಲೂ ಸುಸಂಸ್ಕೃತರಾದರು. ಆಧುನಿಕ ವಿದ್ಯೆ ಪಡೆದು, ವೈದ್ಯರು, ಸಂಸ್ಕೃತ ವಿದ್ವಾಂಸರು, ಜಮೀನ್ದಾರರು ಮತ್ತು ಶ್ರೀಮಂತರೂ ಆಗಿ ಅಭಿವೃದ್ಧಿ ಹೊಂದಿದ ಹಿಂದುಳಿದ ಜನಾಂಗ ಸ್ವಾಭಾವಿಕವಾಗಿ ಸಮಾಜದಲ್ಲಿ ಸ್ವೀಕರಿಸಲ್ಪಟ್ಟು ಪುರಸ್ಕೃತರಾದರು.

ನಾರಾಯಣಗುರು ತಮ್ಮ ಜೀವನದ ಉದ್ದಕ್ಕೂ ಒಂದು ಸಂದೇಶವಾಗಿಯೇ ಸ್ಮರಣೀಯರಾಗಿದ್ದರು. ಅವರು ಉದಾತ್ತ ಧ್ಯೇಯವನ್ನು ಅನುಸರಿಸಿ ಅದರಲ್ಲಿ ಸಿದ್ಧಿಯನ್ನೂ, ಯಶಸ್ಸನ್ನೂ ಪಡೆದರು. ಹಲವರ ಜೀವನದಲ್ಲಿ ಸಾಧ್ಯವಾಗದ್ದು ಅವರ ಜೀವನದಲ್ಲಿ ಯಶಸ್ವಿಯಾಗಿದೆ. ಗುರುಗಳ ನುಡಿಮುತ್ತುಗಳು ಜನಸಾಮಾನ್ಯರಿಗೆ ಬದುಕಿನ ಕತ್ತಲೆಯಲ್ಲಿ ದಾರಿದೀಪಗಳಾಗಿವೆ. ಅಸ್ಪೃಶ್ಯತಾ ನಿವಾರಣೆಯಲ್ಲಿ ನಾರಾಯಣಗುರು

ನಿಜಕ್ಕೂ ಕೇರಳದಲ್ಲಿ ಪವಾಡ ನಡೆಸಿದ್ದರೆನ್ನಬಹುದು. ಆದುದರಿಂದಲೇ ಕೆಲವೇ ದಶಕಗಳ ಅವಧಿಯಲ್ಲಿ ಅಸ್ಪೃಶ್ಯರು ಕೇರಳದಲ್ಲಿ ಅದ್ಭುತ ಪ್ರಗತಿ ಸಾಧಿಸಿದರು.

ಅಸ್ಪೃಶ್ಯತಾ ನಿವಾರಣೆಯಲ್ಲಿ ಶ್ರೀಗುರುಗಳು ತನ್ನದೇ ವಿಧಾನದಲ್ಲಿ ಮುಂದುವರಿಯುತ್ತಿದ್ದಾಗ ಅದನ್ನು ತೀವ್ರಗತಿಯ ಜನಾಂದೋಲನವಾಗಿಸಿ ರಭಸ ನೀಡುವಲ್ಲಿ ಹಲವಾರು ವಿದ್ಯಾವಂತರೂ, ವಿಚಾರವಂತರೂ ಪ್ರಧಾನಪಾತ್ರ ವಹಿಸಿದ್ದಾರೆ. ಅವರಲ್ಲಿ ಕರೂರ್ ನೀಲಕಂಠನ್ ನಂಬೂದರಿಪಾಡ್, ಕೆ. ಪಿ. ಕೇಶವ ಮೆನೊನ್, ಮನ್ನಾತ್ ಪದ್ಮನಾಭನ್, ಟಿ. ಕೆ. ಮಾಧವನ್, ಕುಮಾರಾನ್ ಆಶಾನ್, ಸಹೋದರನ್ ಅಯ್ಯಪ್ಪನ್, ಡಾ|| ಪಲ್ಪು ಪ್ರಮುಖರು. ಕರೂರೂರ್ ನೀಲಕಂಠನ್ ನಂಬೂದರಿಪಾಡ್‌ರವರಂತಹ ಮೇಲ್ವರ್ಗದ ವಿಚಾರವಂತರು ಅಸ್ಪೃಶ್ಯತಾ ನಿವಾರಣೆಯ ಹೋರಾಟದಲ್ಲಿ ಸೇರಿಕೊಂಡಿರುವುದು ಶ್ರೀಗುರುಗಳಿಂದ ಪ್ರಾರಂಭಿಸಲ್ಪಟ್ಟ ವೈಚಾರಿಕ ಆಂದೋಲನಕ್ಕೆ ಪೂರಕಶಕ್ತಿಯನ್ನು ನೀಡಿದಂತಾಯಿತು.

ಮನ್ನಾತ್ ಪದ್ಮನಾಭನ್ "ನಾಯರ್ ಸರ್ವಿಸ್ ಸೊಸೈಟಿ" ಎಂಬ ಸವರ್ಣೀಯರ ಸಂಘದ ಸ್ಥಾಪಕರು. ಆದರೆ ಕೆಳವರ್ಗದ ಜನರ ನ್ಯಾಯಬದ್ಧ ಹಕ್ಕಿಗಾಗಿ ಈತ ಹೋರಾಡಿ ಸೆರೆಮನೆವಾಸ ಅನುಭವಿಸಿದ್ದು ಮರೆಯಲಾರದ ಘಟನೆ. ಮನ್ನಾತ್ ನೇತೃತ್ವದಲ್ಲಿ ಸವರ್ಣೀಯರ ನಿಯೋಗವೊಂದು ತಿರುವನಂತಪುರಕ್ಕೆ ಹೋಗಿ ಮಹಾರಾಜರನ್ನು ಕಂಡು ಕೆಳವರ್ಗದವರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕಬಾರದು ಎಂದು ಭಿನ್ನವಿಸಿತು.

"ಸಹೋದರ ಸಂಘ" ಸ್ಥಾಪಿಸಿದ್ದ ಅಯ್ಯಪ್ಪನ್ ಕೆಳವರ್ಗದಲ್ಲಿ ಜನಜಾಗೃತಿಮಾಡಿ ಗುರುಗಳ ಕನಸು ನನಸಾಗಲು ಕಾರಣರಾದವರಲ್ಲಿ ಗಣ್ಯರು. ಕೊಚ್ಚಿನ್ ಪ್ರಾಂತದಲ್ಲಿ ಕೆಳವರ್ಗದ ಈಳವ ಜಾತಿಯಲ್ಲಿನ ಮೊತ್ತಮೊದಲ ಪದವೀಧರ ಈ ಅಯ್ಯಪ್ಪನ್. ಅಯ್ಯಪ್ಪನ್ ಹಿಂದುಳಿದವರು ಹಾಗೂ ಅಸ್ಪೃಶ್ಯರೆಲ್ಲ ಪರಸ್ಪರ ಕಲೆತು ಒಂದಾಗಬೇಕು ಎಂದು ಬಯಸಿ ಸಹಭೋಜನ, ಅಂತರ್‌ಜಾತಿ ವಿವಾಹಗಳನ್ನು ಬಲವಾಗಿ ಪ್ರತಿಪಾದಿಸಿದಾತ. ಆದರೆ ಅದನ್ನು ಅನುಷ್ಠಾನಗೊಳಿಸಲು ಕಾರ್ಯಪ್ರವೃತ್ತನಾದಾಗ ಅದನ್ನು ಒಪ್ಪದ ಜನರು ಟೀಕಿಸಿದರು, ಲೇವಡಿಮಾಡಿದರು, ಹೊಡೆದರು. ಅಯ್ಯಪ್ಪನ್ ಜಗ್ಗಲಿಲ್ಲ. ಕೊನೆಗೆ ಕೆಂಜಿಗ ಇರುವೆಯ ಕಿರೀಟಮಾಡಿ ತಲೆಯ ಮೇಲೆ ಇರಿಸಿದರು. ಇದರಿಂದ ನೊಂದುಕೊಂಡ ಅಯ್ಯಪ್ಪನ್ ನೇರ ಗುರುಗಳ ಬಳಿಗೆ ಹೋದರು. ಗುರುಗಳೆಂದರು "ವ್ಯಕ್ತಿಯ ಉಡುಪು, ಆಚಾರ, ಜಾತಿ, ಧರ್ಮ ಯಾವುದೇ ಇರಲಿ ಅವರೆಲ್ಲ ಮಾನವರು. ಆದುದರಿಂದ ಸಹಭೋಜನ ಮತ್ತು ಅಂತರ್ಜಾತಿ ಮದುವೆಗೆ ಅಡ್ಡಿ ಬರಬಾರದು". ಇದು ಇಂದಿಗೂ ಸ್ಮರಣೀಯ ಮಾತುಗಳಾಗಿ ಉಳಿದಿರುವುದು ಮಾತ್ರವಲ್ಲದೆ ಶ್ರೀಗುರು ಎಷ್ಟು ಪ್ರಗತಿಪರರಾಗಿದ್ದರೆಂಬುದನ್ನು ಬಿಂಬಿಸುತ್ತದೆ.

ಟಿ. ಕೆ. ಮಾಧವನ್ ಮಿಂಚಿನ ಚಟುವಟಿಕೆಯ ವ್ಯಕ್ತಿ, ಅಸಾಧಾರಣ ಸಂಘಟಕ. ಮೇಲುವರ್ಗದವರ ದೇವಾಲಯದ ಸುತ್ತಲ ಬೀದಿಗಳಲ್ಲಿ ಮುಕ್ತ ಪ್ರವೇಶಕ್ಕಾಗಿ ಇವರ ಹಿರಿತನದಲ್ಲಿ ಪ್ರಸಿದ್ಧ "ವೈಕಂ" ಚಳವಳಿ ನಡೆಯಿತು ಈ ಸತ್ಯಾಗ್ರಹಕ್ಕೆ ಮಾರ್ಗದರ್ಶನ

ನೀಡಲೆಂದು ಮಾಧವನ್ ಮಹಾತ್ಮಾಗಾಂಧಿಯವರನ್ನು ಕೇರಳಕ್ಕೆ ಕರೆಸಿಕೊಂಡರು. ಗಾಂಧೀಜಿ ನಾರಾಯಣಗುರುಗಳನ್ನು ಭೇಟಿಯಾಗಿದ್ದರು. ಗುರುಗಳ ಸರಳ, ಪ್ರಾಮಾಣಿಕ ವ್ಯಕ್ತಿತ್ವದಿಂದ ಪ್ರಭಾವಿತರೂ ಆಗಿದ್ದರು. ಗಾಂಧೀಜಿಯ ಹರಿಜನೋದ್ಧಾರ ಚಟುವಟಿಕೆ ಇನ್ನಷ್ಟು ತೀವ್ರವಾಗಲು, ಹೆಚ್ಚು ಅರ್ಥಪೂರ್ಣವಾಗಲು ಗುರುಗಳು ಈಗಾಗಲೇ ಪ್ರಾರಂಭಿಸಿದ ಅಸ್ಪೃಶ್ಯತಾ ನಿವಾರಣ ಕಾರ್ಯಕ್ರಮಗಳು ಪ್ರಭಾವ ಬೀರುವಂತಾಯಿತು.

ನಾರಾಯಣಗುರುಗಳಿಗೂ ಕುಮಾರನ್ ಆಶಾನ್‌ರಿಗೂ ಆತ್ಮೀಯವಾದ ಅವಿನಾಭಾವ ಸಂಬಂಧ. ರಾಮಕೃಷ್ಣ ಪರಮಹಂಸರಿಗೆ ವಿವೇಕಾನಂದರಿದ್ದಂತೆ ಗುರುಗಳಿಗೆ ಕುಮಾರನ್ ಆಶಾನ್. ಗುರುಗಳ ತಾತ್ವಿಕ ಚಿಂತನೆ, ಸಮಾಜಸುಧಾರಣೆ, ದಲಿತೋದ್ಧಾರದ ಸರ್ವಚಟುವಟಿಕೆಗಳನ್ನು ಜನಸಮುದಾಯದ ನಡುವೆ ಪರಿಣಾಮಕಾರಿಯಾಗಿ ಮುಟ್ಟಿಸುವಲ್ಲಿ ಕವಿ ಕುಮಾರನ್ ಆಶಾನ್‌ರವರ ಸಾಹಿತ್ಯದ ಪ್ರಭುತ್ವ ಕಾರಣವಾಯಿತು. ಕೇರಳದ ಖ್ಯಾತ ಮೂವರು ಕವಿಗಳಲ್ಲಿ ಕುಮಾರನ್ ಆಶಾನ್ ಒಬ್ಬರಾಗಿದ್ದರು ಎನ್ನುವುದು ಗಮನಾರ್ಹ. ಅವರು ಬರೆದ "ಬುದ್ಧ ಚರಿತಂ" ವಿದ್ವಜ್ಜನತೆಯ ಮನ್ನಣೆ ಗಳಿಸಿದ ಕೃತಿ.

ಎಸ್. ಎನ್. ಡಿ. ಪಿ. ಸಂಸ್ಥೆಯ ಡಾ|| ಪಲ್ಪು ಬಹಳಷ್ಟು ಸಾಮಾಜಿಕ ಕಳಕಳಿಯ ವ್ಯಕ್ತಿ. ಹಿಂದುಳಿದ ಈಳವ ಸಮಾಜದಲ್ಲಿ ಹುಟ್ಟಿ, ವೈದ್ಯನಾಗಿ ಬೆಳೆದಾಗ ತನ್ನ ಸಮಾಜದವರ ಹೀನಸ್ಥಿತಿಗೆ ನೊಂದುಕೊಂಡವರು. ವಿವೇಕಾನಂದರು ಬೆಂಗಳೂರಿಗೆ ಬಂದಾಗ ಅವರನ್ನು ಭೇಟಿಯಾಗಿ ತನ್ನ ಮನದ ಇಂಗಿತವನ್ನು ತಿಳಿಸಿ ಮಾರ್ಗದರ್ಶನವನ್ನು ಅಪೇಕ್ಷಿಸಿದರು. ಆಗ ವಿವೇಕಾನಂದರು - "ನೀವು ನಿಮ್ಮ ಸಮಾಜದ ಅಧ್ಯಾತ್ಮಿಕ ವ್ಯಕ್ತಿಯೊಬರನ್ನು ಹುಡುಕಿ ಅವರ ನೇತೃತ್ವದಲ್ಲಿ ಮುಂದುವರಿಯಿರಿ" ಎಂದು ಹೇಳಿದಾಗ ಡಾ|| ಪಲ್ಪು ಕೇರಳಕ್ಕೆ ಆಗಮಿಸಿ ನಾರಾಯಣಗುರುಗಳ ಮಾರ್ಗದರ್ಶನದಲ್ಲಿ ದಲಿತೋದ್ಧಾರಕ್ಕಾಗಿ ಶ್ರಮಿಸಿದ ವಿಚಾರವಂತರಿವರು. ಡಾ|| ಪಲ್ಪುರವರ ಮಗ ನಟರಾಜನ್ ನಾರಾಯಣಗುರುಗಳ ಶಿಷ್ಯನಾಗಿ ಗುರುಗಳ ಸಂದೇಶವನ್ನು ಕಡಲಿನಾಚೆಗೂ ಕೊಂಡೊಯ್ದ ವ್ಯಕ್ತಿ. ನಟರಾಜ ಗುರು ಎಂದೇ ಪ್ರಖ್ಯಾತರಾದ ಇವರು ಆಸ್ಟ್ರೇಲಿಯಾದಿಂದ ಕೆನಡಾದವರೆಗೆ ನಾರಾಯಣಗುರುಗಳ ಸಂದೇಶವನ್ನು ತಲುಪಿಸಿದ್ದಲ್ಲದೆ ಗುರುಕುಲಗಳನ್ನು ಸ್ಥಾಪಿಸಿದರು. ನಟರಾಜಗುರು ತಾವು ಸ್ವತಃ ದೊಡ್ಡ ಮೇಧಾವಿ ಮಾತ್ರವಲ್ಲದೆ ಸರ್ವಸಮರ್ಪಣಾಭಾವದ ಬುದ್ಧಿಜೀವಗಳ ತಂಡವನ್ನೇ ಹುಟ್ಟುಹಾಕಿದರು.

ಕೇರಳದಲ್ಲಿ ಜಾತೀಯತೆಯ ದಾಂಧಲೆ, ಶ್ರೇಣೀಕೃತ ಸಮಾಜದಲ್ಲಿ ಅಸ್ಪೃಶ್ಯತೆ, ಹಿಂಸಾಪ್ರವೃತ್ತಿಯ ತಾಮಸ ಪೂಜಾಪದ್ಧತಿ, ಮದ್ಯಸೇವನೆ, ಸಮಾಜ ಜೀವನದಲ್ಲಿ ಮೂಢನಂಬಿಕೆ ಕಂದಾಚಾರಗಳ ಹಾವಳಿ ಇದ್ದಾಗ್ಯೂ ಇಲ್ಲಿನ ವಿದ್ಯಾವಂತ ನವಪೀಳಿಗೆಯ ಅಂತರಾತ್ಮದಲ್ಲಿ ಇವುಗಳ ವಿರುದ್ಧ ಸಿಡಿದೇಳಬೇಕೆಂಬ ತವಕವಿತ್ತು. ಅದರೊಂದಿಗೆ ಹಿಂದುಳಿದವರಲ್ಲಿ, ಅಸ್ಪೃಶ್ಯರಲ್ಲಿ, ದಲಿತರಲ್ಲಿ ಅವರಿಗೆ ಅರಿವಿಲ್ಲದೆಯೇ ತಮ್ಮ ಸಮಾಜದ ಉತ್ಥಾನದ ಆಕಾಂಕ್ಷೆ ಸುಪ್ತವಾಗಿದ್ದು ಪರಿವರ್ತನೆಯ ಸಂದರ್ಭಕ್ಕಾಗಿ ಕಾಯುತಿತ್ತು. ಇದನ್ನೇ ಸಮಾಜ ವಿಜ್ಞಾನದಲ್ಲಿ ಗುರುತಿಸಲಾಗಿರುವ ಸಾಮಾಜಿಕ ಸುಷುಪ್ತಿ (Social Unconciousness) ಎನ್ನಲಾಗಿದೆ. ಈ ಸಾಮಾಜಿಕ ಸುಷುಪ್ತಿಯನ್ನು

ಬಡಿದೆಬ್ಬಿಸುವ ಕಾರ್ಯವಾದಾಗ ಅದೊಂದು ಪರಿವರ್ತನೆಯ ಮಹಾಶಕ್ತಿಯಾಗಿ ಮೂಡಿಬರುತ್ತದೆ. ಇಂತಹ ಒಂದು ಮಹಾನ್‌ಕಾರ್ಯವನ್ನು ಶಾಂತರೂಪವಾಗಿ ಕೈಗೂಡಿಸಿದ ಪ್ರೇರಣೆ ನಾರಾಯಣಗುರುಗಳಿಂದ ಸಾಧ್ಯವಾಯಿತು. ವಿದ್ಯಾವಂತರೂ, ನಿರಕ್ಷರಕುಕ್ಷಿಗಳೂ, ಜನಸಾಮಾನ್ಯರೂ ಸರಿಯಾಗಿ ಸ್ಪಂದಿಸಿದರು. ಗುರುಗಳ ಸಾಧನೆ ಸಫಲತೆಯನ್ನು ಕಂಡಿತು.

**ಮದ್ಯ ಸೇವನೆಯ ಮಹಾ ಪಿಡುಗು :-** ದಲಿತರನ್ನು ಅಂಧಕಾರದಲ್ಲಿಡುವಲ್ಲಿ ಅಸ್ಪೃಶ್ಯತೆಯಷ್ಟೇ ಪರಿಣಾಮಕಾರಿಯಾದ ಪಾತ್ರ ವಹಿಸಿದುದು ಅವರಲ್ಲಿನ ಮದ್ಯಸೇವನೆಯ ಮಹಾಪಿಡುಗು. ಆದುದರಿಂದ ಅಸ್ಪೃಶ್ಯ ನಿವಾರಣೆಗೆ ಕೊಟ್ಟಷ್ಟೇ ಪ್ರಾಶಸ್ತ್ಯವನ್ನು ಶ್ರೀಗುರು ಮದ್ಯವರ್ಜನೆಗೂ ನೀಡಿದರು. ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದರು. ಈ ಎರಡು ಸಾಮಾಜಿಕ ಪಿಡುಗುಗಳು ಬೃಹದಾಕಾರದಲ್ಲಿ ದಲಿತರನ್ನು ಭಾದಿಸುತ್ತಿದ್ದರೂ, ನಾರಾಯಣಗುರು ಅದರ ವಿರುದ್ಧ ಹೋರಾಡಲು ವಿಚಲತರಾಗಲಿಲ್ಲ. "ಆನೆಯು ಬಹಳ ದೊಡ್ಡದಾದರೂ ಅದು ಅಂಕುಶಕ್ಕೆ ಒಳಗಾಗುವುದು. ಆದರೆ ಅಂಕುಶ ಆನೆಯಷ್ಟು ದೊಡ್ಡ ಪ್ರಮಾಣದಲ್ಲಿಲ್ಲ. ದೀಪವು ಪ್ರಜ್ವಲಿಸಿದಾಗ ಸಾವಿರಾರು ವರ್ಷ ಆವರಿಸಿದ ಕತ್ತಲೆಯೂ ಅಳಿಯುತ್ತದೆ, ಆದರೂ ಕತ್ತಲೆಯಷ್ಟು ದೀಪ ದೊಡ್ಡದಲ್ಲ. ವಜ್ರಾಯುಧದ ಪೆಟ್ಟಿಗೆ ಬೆಟ್ಟವೂ ಒಡೆದು ಬೀಳುತ್ತದೆ; ಆದರೆ ವಜ್ರಾಯುಧ ಬೆಟ್ಟದಷ್ಟಿಲ್ಲ. ಹಾಗೆಯೇ ತೇಜಸ್ವಿನಿಂದ ಬೆಳಗುವವನೇ ಬಲಯುತನು" - ಎಂಬ ಸುಭಾಷಿತದಂತೆ ನಾರಾಯಣಗುರು ಸ್ವಯಂಪ್ರೇರಣೆಯೇ ದಾರಿದೀಪವಾಗಿ, ಆತ್ಮಬಲವೇ ಸರ್ವಬಲವಾಗಿ ಮುಗ್ಧ ಮಾನವರಲ್ಲಿ ಅಪಾರ ಕರುಣೆಯಿಂದ ಈ ಬೃಹತ್ ಸಮಸ್ಯೆಗಳ ವಿರುದ್ಧ ಹೋರಾಡಲು ಪ್ರಯತ್ನಿಸಿ ಯಶಸ್ಸನ್ನು ಕಂಡರು.

ಕುಡಿತದ ದುರಂತವನ್ನು ಸ್ವತಃ ಕಂಡ ಶ್ರೀ ಗುರು ಮದ್ಯವರ್ಜನೆಗೆ ಕಳಕಳಿಯಿಂದ ವಿನಂತಿಸಿದರು. "ಮದ್ಯದ ಮಡಕೆಗೇಕೆ ಈ ಸನ್ಯಾಸಿ ದೃಷ್ಟಿ ಇಟ್ಟಿದ್ದಾನೆ ? ಎಂದು ಕೆಲವರು ವಿಲಕ್ಷಣವಾಗಿ ಹಾಸ್ಯ ಮಾಡಿದಾಗಲೂ ತನ್ನ ದೃಷ್ಟಿಕೋನವನ್ನು ಬದಲಾಯಿಸದೆ ಇದರ ವಿರುದ್ಧ ಹೋರಾಡಿದರು, ಜನಮನಕ್ಕೆ ತಿಳುವಳಿಕೆ ನೀಡಿದರು. "ಶೇಂದಿ ಇಳಿಸುವುದು ಮಹಾವ್ಯಾಧಿ. ದೇಹದ ಒಂದು ಭಾಗಕ್ಕೆ ಕುಷ್ಟರೋಗ ತಗಲಿದರೆ ಹೇಗೆ ಇಡೀ ದೇಹವೇ ಕೆಡುವುದೋ, ಅದೇ ರೀತಿ ಶೇಂದಿ ಇಳಿಸುವುದರಿಂದ ಸಮಾಜವೇ ಕೆಡುತ್ತದೆ" ಎಂದು ಬೋಧಿಸಿದರು. "ಮದ್ಯವು ವಿಷ. ಅದನ್ನು ಉತ್ಪಾದಿಸಬೇಡಿ, ವಿಕ್ರಯಿಸಬೇಡಿ, ಸೇವಿಸಬೇಡಿ ಎಂದು ಹೇಳಿದರು. "ಮೂರ್ತೆಮಾಡುವ ಕತ್ತಿಯ ಬದಲು ನಾಲ್ಕು ಕ್ಷೌರದ ಕತ್ತಿಯನ್ನು ತಯಾರಿಸಿ ಉದ್ಯೋಗ ಮಾಡಿ ಜೀವಿಸುವುದು ಹೆಂಡ ಇಳಿಸುವುದಕ್ಕಿಂತ ಅಭಿಮಾನಕರವಾಗಿದೆ" ಎಂದು ಕಟುವಾಗಿ ಹೇಳಿದರು. ಈ ಬಗ್ಗೆ ತಿಳಿಸಿಹೇಳುವುದರ ಜೊತೆಗೆ ಜನರನ್ನು ಜಾಗೃತಗೊಳಿಸುವ (Educating the mass) ಕಾರ್ಯಕ್ರಮಗಳನ್ನು ಸರ್ವತ್ರ ಹಮ್ಮಿಕ್ಕೊಂಡರು. ಇದರ ಪರಿಣಾಮವಾಗಿ 1921 ನೇ ಸೆಪ್ಟಂಬರ್ ತಿಂಗಳಲ್ಲಿ ತನ್ನ ಜನ್ಮದಿನದಂದು ಮದ್ಯವರ್ಜನೆಯ ಬಗ್ಗೆ ಚರಿತ್ರಾರ್ಹ ಸಂದೇಶವನ್ನು ನೀಡಿದರು. ಗುರುಗಳ ಅನುಯಾಯಿಗಳು, ಅಸಂಖ್ಯಾತ

ಭಕ್ತರು, ಸಾವಿರಾರು ಅಭಿಮಾನಿಗಳು, ಲಕ್ಷಾಂತರ ಜನಸಾಮಾನ್ಯರು ಈ ದಿಕ್ಕಿನಲ್ಲಿ ಪ್ರೇರಣೆ ಪಡೆದ ಪ್ರಯುಕ್ತ ಕೇರಳದಾದ್ಯಂತ ಹಾಗೂ ಕರ್ನಾಟಕ ಕರಾವಳಿಯ ಹಿಂದುಳಿದ ಜನವರ್ಗ ಮದ್ಯವರ್ಜನೆಯ ಅನುಷ್ಠಾನವನ್ನು ಸ್ವಯಪ್ರೇರಣೆಯಿಂದ ಮಾಡಿದರು. ಈ ಕಾಲಾನುಭಾಗದಲ್ಲಿ ನವಜನಾಂಗದ ಹೊಸಪೀಳಿಗೆಯೊಂದು ಉದಯಿಸಿ ಮದ್ಯಸೇವನೆಯಿಂದ ದಲಿತವರ್ಗ ವಿಮುಖವಾಗುವಲ್ಲಿ ಬಹಳಷ್ಟು ಸಹಕಾರಿಯಾಗಿದೆ.

"ಮನಸ್ಸೇಕಂ, ವಚಸ್ಸೇಕಂ, ಕರ್ಮಣ್ಯೇಕಂ ಮಹಾತ್ಮಾನಂ" ಎಂಬ ಸುಭಾಷಿತದಂತೆ ನಾರಾಯಣಗುರುಗಳು ಮಹಾತ್ಮನ ಗುಣಗಳನ್ನು ಹೊಂದಿದ್ದು ಅಸಾಧ್ಯವೆಂದು ನೆನೆಸಿದುದನ್ನು ಸಾಧಿಸಿ ತೋರಿಸಿದ್ದಾರೆ. ಮಹರ್ಷಿ ಅರವಿಂದರು ಅಂದಂತೆ "ಒಬ್ಬ ಮನುಷ್ಯ ಅಸಾಧ್ಯವಾದುದನ್ನು ಸಾಧಿಸ ಹೊರಟರೆ ಜನತೆಯ ದೃಷ್ಟಿಯಲ್ಲಿ ಆತನೊಬ್ಬ ತಲೆತಿರುಕ. ಆದರೆ ಈ ಅಸಾಧ್ಯವನ್ನು ಸಾಧ್ಯವಾಗಿಸಿದರೆ ಅದೇ ಜನತೆ ಆತನನ್ನು ಮಹಾತ್ಮನೆಂದು ಕರೆಯುತ್ತದೆ."

ಹಿಂದೊಮ್ಮೆ ಚೀನಾದೇಶವು ಬ್ರಿಟಿಷರ ವಸಾಹತು ಆಗಿದ್ದಾಗ ಇಡೀ ಜನಾಂಗವು ಬ್ರಿಟಿಷರ ಕುಮ್ಮಕ್ಕಿನಿಂದ ಅಫೀಮು ಸೇವಿಸುತ್ತಾ ನಿರ್ವೀರ್ಯರಾಗಿ ನಿದ್ರಿಸುತ್ತಿದ್ದಾಗ ಮಾವೋತ್ಸೆತುಂಗನ ನೇತೃತ್ವದಲ್ಲಿ ಅಪೀಮ್‌ಯುದ್ಧ (OPIUM WAR) ಎಂಬ ಜನಾಂಗ ಕ್ರಾಂತಿಯ ಮೂಲಕ ಎಚ್ಚರಗೊಂಡಿದ್ದರು. ಅದೇ ರೀತಿ,

'ತೂಕಡಿಸಿ, ತೂಕಡಿಸಿ, ಬಿದ್ದರೂ
ನಿನ್ನಜ್ಜ, ನನ್ನಜ್ಜ, ಮುತ್ತಜ್ಜ

ಎಂದು ಡಿ. ವಿ. ಜಿ. ಯವರು ತಿಳಿಸಿದಂತೆ, ಅಮಲು ಸೇವನೆಯಿಂದ ನಿದ್ರಿಸುತಿದ್ದ ದಲಿತವರ್ಗ ನಾರಾಯಣಗುರುಗಳ ನೇತೃತ್ವದಲ್ಲಿ ಶಾಂತರೀತಿಯ ಚಳವಳಿಯ ಮೂಲಕ ಎಚ್ಚರಗೊಳ್ಳುವಂತಾದುದು ಶ್ರೀಗುರುಗಳ ಸಮಾಜಸುಧಾರಣೆಯ ಬಹುದೊಡ್ಡ ಪ್ರಶಂಸನೀಯ ಕಾರ್ಯ.

## ಒಂದೇ ಜಾತಿ, ಒಂದೇ ಧರ್ಮ ಒಂದೇ ದೇವರು

ಇಡೀ ಮಾನವ ಜನಾಂಗಕ್ಕೆ ಒಂದೇ ಜಾತಿ, ಒಂದೇ ಧರ್ಮ ಒಂದೇ ದೇವರು ಎಂಬ ಭೋಧನೆಯಿಂದ ಋಗ್ವೇದದ "ಏಕಂ ಸತ್ ವಿಪ್ರಾ ಬಹುಧಾವದಂತಿ" ಎಂಬ ಸನಾತನ ಧರ್ಮದ ವಿಶ್ವಮಾನ್ಯ ಪರಿಚಯವನ್ನು ಜನಸಾಮಾನ್ಯರಿಗೂ ಮಾಡಿಕೊಟ್ಟವರು ನಾರಾಯಣಗುರು.

**"ಜಾತಿ ಮೀಮಾಂಸಾ"** ಎಂಬ ತನ್ನ ಕೃತಿಯಲ್ಲಿ ನಾರಾಯಣಗುರುಗಳು ಆ ಬಗ್ಗೆ ವಿವರವಾಗಿ ತಿಳಿಸಿದ್ದಾರೆ.

**ಒಂದೇ ಜಾತಿ:** ಮಾನವರೆಲ್ಲ ಒಂದೇ ಜಾತಿಗೆ ಸೇರಿದವರು, ಅದುವೆ ಮನುಷ್ಯಜಾತಿ. ಬ್ರಾಹ್ಮಣನಿರಲಿ ಚಂಡಾಲನಿರಲಿ ಅವರೆಲ್ಲಾ ಮನುಷ್ಯರೇ. ಮನುಷ್ಯ ಮನುಷ್ಯರ ನಡುವೆ ವ್ಯತ್ಯಾಸ ಅರ್ಥಹೀನ ಎಂದು ಸಮರ್ಥಿಸಿದರು.

ಈ ತಾತ್ವಿಕ ವಿಚಾರ ಕೇಳಲು ಬಹಳ ಚೆನ್ನಾಗಿದ್ದರೂ ವಾಸ್ತವ ಜಗತ್ತಿನಲ್ಲಿ ಎಷ್ಟು

ಪ್ರಸ್ತುತ ಎಂಬ ವಿಚಾರ ನಮ್ಮನ್ನು ಚಿಂತನೆಗೀಡುಮಾಡುತ್ತಿದೆ. ಭಾರತೀಯ ಸಮಾಜದಲ್ಲಂತೂ ಎಷ್ಟೊಂದು ಜಾತಿಗಳು, ಎಷ್ಟೊಂದು ವ್ಯತ್ಯಾಸಗಳು, ಎಷ್ಟೊಂದು ಭೇದಗಳು. ಆಸೇತು ಹಿಮಾಚಲದವರೆಗೆ ನಮ್ಮದು ಹೇಳಿಕೆಗೆ ಮಾತ್ರ ಜಾತ್ಯತೀತ ಸಮಾಜವೆಂದು ತಿಳಿಯಲಾಗಿದ್ದರೂ ವಾಸ್ತವವಾಗಿ ಜಾತ್ಯಾಧಾರಿತ ಸಮಾಜವಾಗಿದೆ. ಬದುಕಿನ ಹೆಜ್ಜೆ ಹೆಜ್ಜೆಗೂ ಜಾತಿಯ ಕಂದರಗಳು. ಈ ಕಂದರಗಳನ್ನು ದಾಟುತ್ತಾ ನಾರಾಯಣಗುರುಗಳು ಈ ಬೃಹತ್ ಸಮಸ್ಯೆಯನ್ನು ನಿಭಾಯಿಸಿದುದಾದರೂ ಹೇಗೆ ಎಂಬುದು ಜಾಗತಿಕವಾಗಿ ಅಧ್ಯಯನ ಯೋಗ್ಯ.

ನಾರಾಯಣಗುರು ವೈಚಾರಿಕವಾಗಿ ಬಹಳಷ್ಟು ಎತ್ತರಕ್ಕೆ ಏರಿದ ವಿಭೂತಿ ಪುರುಷರು ಅವರ ದೃಷ್ಟಿಯಲ್ಲಿ ಜಾತೀಯತೆ ಇಲ್ಲ; ಅದು ಉಂಟು ಎಂದು ತಿಳಿಯುವುದು ತಪ್ಪು; ಮಾನವರೆಲ್ಲಾ ಒಂದೇ ಜಾತಿ. ಹೀಗಿದ್ದೂ ಅವರು ವಾಸ್ತವತೆಯನ್ನು ಅರಿಯದ ಬರಿಯ ಕನಸುಗಾರರಾಗಿರಲಿಲ್ಲ. ಮಾನವರೆಲ್ಲ ಸಮಾನರು ಎಂದು ಹೇಳಿದರೂ ವಾಸ್ತವತೆ ಇದಕ್ಕಿಂತ ತೀರಾ ಭಿನ್ನವಾಗಿ ಆಚರಣೆಯಲ್ಲಿದೆ ಎಂದು ಅವರಿಗೆ ಗೊತ್ತಿತ್ತು. ಈ ಅಂಧಕಾರವನ್ನು ನೀಗಿಸುವುದಕ್ಕಾಗಿ 'ಒಂದೇ ಜಾತಿ, ಒಂದೇ ಮತ, ಒಂದೇ ದೇವರು' ಎಂಬ ಸನಾತನ ಸಂದೇಶವನ್ನು ಹೊತ್ತು ಈ ಮಹಾಯೋಗಿ ದಕ್ಷಿಣಭಾರತದಲ್ಲಿ ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ವಿಚಾರಕ್ರಾಂತಿಯನ್ನೂ ಅದರಿಂದಾಗಿ ಸಾಮಾಜಿಕ ಕ್ರಾಂತಿಯನ್ನೂ ಉಂಟುಮಾಡಲು ಜನಸಾಮಾನ್ಯರ ಮಧ್ಯೆ ಸದಾ ಓಡಾಡಿದರು.

ಅಸ್ಪೃಶ್ಯರ, ಹಿಂದುಳಿದವರ ಮಧ್ಯೆ ಸದಾ ಇದ್ದು, ಅವರು ದುಃಖ ದುಮ್ಮಾನಗಳಿಗೆ ಸ್ಪಂದಿಸುತ್ತಾ, ಬೌದ್ಧಿಕ ಔನತ್ಯದಿಂದ ಸವರ್ಣೀಯರ ಮನ ಒಲಿಸುತ್ತಾ "ಮನುಜ ಮತ ವಿಶ್ವಪಥ" ಎಂಬ ಘನ ಉದ್ದೇಶವನ್ನು ತನ್ನ ಜೀವನಸಾಧನೆಯಾಗಿ ಮಾಡಿದರು. ಈಗಲೂ ಜಾತೀಯತೆಯಿಂದ ವಿಮುಕ್ತವಾಗದ ಸಮಾಜಗಳು ಒಂದು ಶತಮಾನದ ಹಿಂದೆ ಹೇಗೆ ಇದರಿಂದ ತೊಳಲಾಡುತ್ತಿದ್ದವು ಎಂಬುದನ್ನು ವಿವೇಚಿಸಿದರೆ ನಾರಾಯಣಗುರುಗಳು ತಾನು ಹೆಗಲ ಮೇಲೆ ಹೊತ್ತುಕೊಂಡ "ಧರ್ಮಚಕ್ರ"ದ ಭಾರದ ಅರಿವು ನಮಗಾಗುವುದು.

ದಲಿತವರ್ಗದ ಸಮಾಜೋದ್ಧಾರಕ್ಕಾಗಿ ಮಾರ್ಗವನ್ನು ಹುಡುಕಿ, ಆ ದಾರಿಯಲ್ಲಿ ತಾನೂ ನಡೆದು, ಇತರರಿಗೂ ದಾರಿ ತೋರಿಸಿದಾಗ ತನ್ನ ವರ್ಗದ ಜನರೇ ಜಾತಿವ್ಯಾಮೋಹದಿಂದ ಅವರನ್ನು ನಿರಾಕರಿಸಿದ ಸಂದರ್ಭವೂ ಗುರುಗಳಿಗೆ ಒದಗಿ ಬಂದಿತ್ತು. ಅವರ ಸಮದರ್ಶಿತ್ವದ ರಹಸ್ಯವನ್ನು ತಿಳಿಯುವುದು ಕೆಲವೊಮ್ಮೆ ಅವರ ಶಿಷ್ಯರಿಗೂ ಕಷ್ಟವಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ನಾರಾಯಣಗುರು ವಿಚಲಿತರಾಗಲಿಲ್ಲ. ಆತ್ಮಬಲವೇ ಸರ್ವಬಲವಾಗಿ ತಾನು ನಂಬಿದ ಉದ್ದೇಶಗಳಿಗಾಗಿ ಹೋರಾಡಿದರು.

ಇಂತಹ ಒಂದು ಘಟನೆಯನ್ನು ಇಲ್ಲಿ ಸ್ಮರಿಸುವುದು ಸೂಕ್ತ. ಕೇರಳದ ನೈಯತ್ತಿನ್‌ಕರ ಎಂಬಲ್ಲಿ ದಲಿತರಿಗೂ 'ಸವರ್ಣೀಯರಿಗೂ ನಡೆದ ಜಾತೀಯ ಗಲಭೆ ಅದು. ಶಾಲೆಗಳಲ್ಲಿ ದಲಿತರಿಗೂ, ಅಸ್ಪೃಶ್ಯರಿಗೂ ಓದುವ ಅವಕಾಶ ಇದೆ ಎಂದು

ಸರಕಾರ ಸುತ್ತೋಲೆಯನ್ನು ಕಳಿಸಿದ ಸಂದರ್ಭ. ಒಬ್ಬಿಬ್ಬರು ಸಮಾಜಸುಧಾರಕರು ದಲಿತರಾದ ಹೊಲೆಯರ ಹುಡುಗಿಯರನ್ನು ಶಾಲೆಗೆ ಸೇರಿಸಲು ಒತ್ತಾಯಿಸಿದರು. ನಾಯರ್‌ರವರು ನಡೆಸುವ ಶಾಲೆಗೆ ಹೊಲೆಯರ ಪ್ರವೇಶವೆಂದ ಕೂಡಲೇ ಸವರ್ಣೀಯರು ಸಿಡಿದೆದ್ದರು. ಹೀಗಾದರೆ ಲೋಕ ಉಳಿದೀತೆ ? ಎಂದರು. ಇದು ಸಾಧ್ಯವಿಲ್ಲ ಎಂದು ಬೈದು ಬೆದರಿಸಿದರು. ದಲಿತರಲ್ಲೂ ಧೈರ್ಯವಂತರಾದ ಯುವಕರು ಮುಂದೆ ಬಂದು "ಸರಕಾರ ಕಾನೂನು ಮಾಡಿರುವಾಗ ನಿಮ್ಮದೇನು ಮಹಾ ಬೆದರಿಕೆ ? ಎಂದರು. ಬೆಂಕಿ ಹೊತ್ತಿ ಉರಿಯುವುದರಲ್ಲಿತ್ತು. ಆಶ್ಚರ್ಯವೆಂದರೆ ನಾರಾಯಣಗುರುಗಳು ಹುಟ್ಟಿದ ಈಳವ ಜಾತಿಯವರು ಅಸ್ಪೃಶ್ಯರಾಗಿದ್ದರೂ ಈ ಗಲಭೆಯಲ್ಲಿ ನಾಯರ್ ವರ್ಗದವರೊಡನೆ ಸೇರಿ ದಲಿತರಿಗೆ ವಿರೋಧವಾಗಿ ಹೋರಾಡಲು ನಿಂತರು. ಈ ಸುದ್ದಿ ಗುರುಗಳಿಗೆ ಮುಟ್ಟಿತು. ಅವರು ತುಂಬಾ ನೊಂದುಕೊಂಡರು. ಗುರುಗಳ ಸಂದೇಶವಾದ "ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಇದನ್ನು ಸಮಾಜದಲ್ಲಿ ಹರಡುವುದಕ್ಕಾಗಿಯೇ ಸ್ಥಾಪಿತವಾದ "ಎಸ್. ಎನ್. ಡಿ. ಪಿ" ಎಂಬ ಸಂಸ್ಥೆಯ ಈಳವ ಮುಖ್ಯರನ್ನು ಕರೆಸಿದರು. ಮಾನವೀಯ ಮೌಲ್ಯಗಳನ್ನು ರಕ್ಷಿಸಬೇಕಾದ ಅಗತ್ಯವನ್ನು ವಿವರಿಸಿದರು, "ಮನುಜ ಕುಲವೆಲ್ಲ ಒಂದು ಎನ್ನುವುದು ಘೋಷಣೆಗೆ ಮಾತ್ರ ಯೋಗ್ಯವಾದ, ಭಾಷಣಗಳಲ್ಲಿ ಬಳಸಬಹುದಾದ ಪದವಾಗಿ ಉಳಿಯಬಾರದು. ಅದು ಕಾರ್ಯಗತವಾಗಬೇಕಾದರೆ ನಾವೆಲ್ಲರೂ ದಲಿತರ, ನೊಂದುಬೆಂದವರ ಕಣ್ಣೀರನ್ನು ಒರೆಸಬೇಕು. ದುರ್ಬಲರ ಹಕ್ಕಿನ ಪರವಾಗಿ ನಿಲ್ಲಬೇಕು" ಎಂದರು. ಈಳವ ಹಿರಿಯರಿಗೆ ಇದು ಸರಿಕಾಣಲಿಲ್ಲ ಯಾಕೆಂದರೆ ಹಿಂದಿನಿಂದಲೂ ಬೆಳೆದು ಬಂದ ಅವರೆಲ್ಲರ ನಂಬಿಕೆ ಬಲವಾಗಿ ಬೇರೂರಿತ್ತು. ಆದರೂ ಗುರುಗಳ ಉಪದೇಶ ಪರಿಣಾಮ ಬೀರಿದ ನಿಮಿತ್ತ ವಾತಾವರಣ ತಿಳಿಯಾಯಿತು. ದಲಿತ ಹುಡುಗಿಯರು ಶಾಲೆಗೆ ಹೋಗುವುದನ್ನು ತಡೆಯಲು ಈಳವರು ಮುಂದೆ ಬರಲಿಲ್ಲ. ಯಾವುದನ್ನೂ ಆಜ್ಞಾಪಿಸದೆ, ಮೌಢ್ಯದ ತೆರೆ ಸರಿಸುವ ಮೂಲಕ ಗುರುಗಳು ಹೃದಯ ಪರಿವರ್ತನೆ ಮಾಡುತ್ತಿದ್ದರು.

ಈಳವ ಮುಖಂಡರಿಗೆ ಗುರುಗಳಲ್ಲಿ ಗೌರವ ಇತ್ತು ನಿಜ. ಆದರೆ ಅವರಲ್ಲಿ ಮನುಷ್ಯ ಸಹಜ ದೌರ್ಬಲ್ಯಗಳಿದ್ದವು ಎಂಬುದು ಅಷ್ಟೇ ಸತ್ಯ. ಕಂದಾಚಾರದ ಕೊಳಚೆಯಲ್ಲೇ ಇದ್ದ ಅವರು ದಿನ ಬೆಳಗಾಗುವುದರೊಳಗೆ ಸುಸಂಸ್ಕೃತರೂ ಪ್ರಗತಿಯ ಹರಿಕಾರರೂ ಆಗುವುದು ಸಾಧ್ಯವಿರಲಿಲ್ಲ. ಅದು ನಿಧಾನವಾಗಿ ಅವಿರತ ಪರಿಶ್ರಮದಿಂದ ಆಗಬೇಕಾದ ಕೆಲಸವಾದುದರಿಂದ ನಾರಾಯಣಗುರುಗಳು ಸುದೀರ್ಘವಾಗಿ ಈ ಬಗ್ಗೆ ಪಟ್ಟು ಹಿಡಿದು ಪ್ರಯತ್ನಿಸಿದರು. ಅವರ ಪ್ರಯತ್ನ ವ್ಯರ್ಥವಾಗಲಿಲ್ಲ. ಶಾಲೆಗಳಲ್ಲಿ ಜಾತಿ, ಮತ ಭೇದವಿಲ್ಲದೆ ಎಲ್ಲರೂ ಸಹಮತದಿಂದ ಕೂಡಿ ಬೆರೆಯುವಂತಾಯಿತು. ಇಂತಹುದೇ ಇನ್ನೊಂದು ಘಟನೆಯನ್ನು ಸ್ಮರಿಸಬಹುದು ದಲಿತ. ಕುಟುಂಬಕ್ಕೆ ಸೇರಿದ ಕೆಲ ಹುಡುಗರನ್ನು ಗುರುಗಳು ಅಳ್ವಾಯಿಯಲ್ಲಿ ತಾನು ಸ್ಥಾಪಿಸಿದ ಅದ್ವೈತ ಆಶ್ರಮಕ್ಕೆ ಓದಲು ಸೇರಿಸಿದ್ದ ಸಂದರ್ಭವದು. ಆಶ್ರಮ ವಾಸಿಗಳಿಗೆ ಮತ್ತು ಇತರ ಅತಿಥಿಗಳಿಗೆ ಅಡಿಗೆ ಮಾಡಿ ಬಡಿಸುವ ಕೆಲಸಕ್ಕೂ ಗುರುಗಳು ಈ ಹುಡುಗರನ್ನು ನೇಮಿಸುತ್ತಿದ್ದರು.

ಈಳವ ಮುಖ್ಯರು ಹಾಗೂ ಇತರರು ಆಶ್ರಮಕ್ಕೆ ಬಂದು ಭೋಜನ ಸ್ವೀಕರಿಸುವಾಗ ಅವರಿಗೆ ಬಡಿಸುವವರು ದಲಿತ ಜಾತಿಗೆ ಸೇರಿದವರು ಎಂದು ಉದ್ದೇಶಪೂರ್ವಕವಾಗಿಯೇ ಹೇಳುತ್ತಿದ್ದರು. ಉಣ್ಣುತ್ತಿದ್ದವರಿಗೆ ಪ್ರಾರಂಭದಲ್ಲಿ ಕಸಿವಿಸಿಯಾದರೂ ಅದನ್ನು ಗುರುಗಳ ಮುಂದೆ ತೋರಿಸುವ ಧೈರ್ಯವಿರುತ್ತಿರಲಿಲ್ಲ. ಕಾಲಕ್ರಮೇಣ ಇದು ಸ್ವಾಭಾವಿಕವೆಂಬಂತೆ ಎಲ್ಲರೂ ಸ್ವೀಕರಿಸುವಂತಾಗಿ ಸಂತೋಷದಿಂದ ಊಟವನ್ನು ಮಾಡುತ್ತಿದ್ದರು.

ಇದೇ ಸಮಯದಲ್ಲಿ ತಿರುವನಂತಪುರದ ಸಮೀಪ "ಮುಟ್ಟತರ" ಎನ್ನುವಲ್ಲಿ ಅಸ್ಪೃಶ್ಯರ, ದಲಿತರ, ಹಿಂದುಳಿದವರ ಒಂದು ಸಭೆಯಲ್ಲಿ ನಾರಾಯಣಗುರು ದಲಿತರ ಹುಡುಗರಿಬ್ಬರನ್ನು ತನ್ನ ಬಳಿ ವೇದಿಕೆಯಲ್ಲೇ ಕುಳ್ಳಿರಿಸಿ ನೀಡಿದ ಸಂದೇಶವು ಪರಿಣಾಮ ಕಾರಿಯಾಗಿತ್ತು.

"ಮನುಷ್ಯರೆಲ್ಲ ಒಂದೇ ಜಾತಿ. ಮನುಷ್ಯರಲ್ಲಿ ಅಂತಸ್ತು ವಿದ್ಯೆ, ಹಣದಲ್ಲಿ ವ್ಯತ್ಯಾಸ ಇರಬಹುದು, ಬಣ್ಣದಲ್ಲಿ ವ್ಯತ್ಯಾಸ ಇರಬಹುದು. ಇದರ ಹೊರತು ಮನುಷ್ಯರಲ್ಲಿ ಖಂಡಿತವಾಗಿಯೂ ವ್ಯತ್ಯಾಸವೇ ಇಲ್ಲ. ಹೊಲೆಯರು ಅನ್ನಿಸಿಕೊಂಡವರಲ್ಲಿ ಹಣ ಮತ್ತು ವಿದ್ಯೆ ಇಲ್ಲದೆ ಇರುವುದೇ ಬಹು ದೊಡ್ಡ ಕೊರತೆ. ಈ ಕೊರತೆಯನ್ನು ಸರಿದೂಗಿಸುವುದು ಕಷ್ಟದ ಕೆಲಸವಲ್ಲ. ವಿದ್ಯೆಗೆ ಮಹತ್ವ ಕೊಡಿ, ಅದು ಎಲ್ಲಕ್ಕಿಂತ ಮುಖ್ಯ. ನಿಮ್ಮಲ್ಲಿ ಸಂಪತ್ತು ಇಲ್ಲ ಅಂದುಕೊಳ್ಳಬೇಡಿ. ಆರೋಗ್ಯಪೂರ್ಣ ದೇಹವೇ ದೊಡ್ಡ ಸಂಪತ್ತು. ನೀವು ಗಳಿಸುತ್ತೀರಿ, ಆದರೆ ಮದ್ಯಸೇವನೆಯಿಂದ ಹಣ ಹಾಳು ಮಾಡುತ್ತೀರಿ. ಹಾಗೆ ಮಾಡಬೇಡಿ. ನೀವು ಗಳಿಸಿದುದರಲ್ಲಿ ಸ್ವಲ್ಪವನ್ನು ಉಳಿಸಿದರೂ ಸಾಕು, ನಿಮ್ಮ ಮಕ್ಕಳಿಗೆ ವಿದ್ಯೆಕೊಡಬಹುದು. ಕುಡಿತದ ಚಟ ಬಿಡಿ. ತಿಂಗಳಿಗೊಮ್ಮೆಯಾದರೂ ಒಂದೆಡೆ ಸೇರಿ ಈ ಬಗ್ಗೆ ಚರ್ಚಿಸಿ. ನಾನಂತೂ ನಿಮ್ಮ ಜೊತೆ ಯಾವಾಗಲೂ ಇರಲು ಸಿದ್ಧ".

ಒಮ್ಮೆ ನಾರಾಯಣ ಗುರುಗಳು ಚೆನ್ನೈಗೆ ಹೊರಡುವ ಸಂದರ್ಭ. ಚೆನ್ನೈಯ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಸದಾಶಿವ ಅಯ್ಯರ್ ಮತ್ತು ಕೃಷ್ಣನ್ ಎಂಬುವರು ಗುರುಗಳನ್ನು ಚೆನ್ನೈಗೆ ಭೇಟಿ ಕೊಡಲು ಆಗ್ರಹಿಸಿದ್ದರು. ರೈಲಿನಲ್ಲಿ ಪ್ರಯಾಣ. ಅವರ ಎದುರು ಕುಳಿತವರೊಬ್ಬರು ಬಹಳ ಹೊತ್ತು ವಿಚಿತ್ರರೀತಿಯಲ್ಲಿ ಗುರುಗಳನ್ನೂ ನೋಡುತ್ತಾ ಮಾತಿಗೆ ಮೊದಲಾದರು.

"ತಮ್ಮ ಹೆಸರೇನು ಸ್ವಾಮೀ ?

"ನಾರಾಯಣ."

"ತಮ್ಮ ಜಾತಿ ಯಾವುದು ?"

"ತಮ್ಮ ದೃಷ್ಟಿಯಲ್ಲಿ ನಾನು ಯಾವ ಜಾತಿ?"

"ನೋಡಿದರೆ ಹೇಳುವುದಕ್ಕಾಗದು."

ಸ್ವಾಮಿ ಅರ್ಥಪೂರ್ಣವಾಗಿ ನಕ್ಕು ಹೇಳಿದರು:

"ನೋಡಿ, ನಿರ್ಧರಿಸಲಾಗದುದ್ದನ್ನು ಕೇಳಿ ನಿರ್ಧರಿಸೋದಾದರೂ ಹೇಗೆ ?"

ಚೆನ್ನೈಯಲ್ಲಿ ಪ್ರವಚನದ ಸಂದರ್ಭ. ಈ ಸ್ವಾರಸ್ಯಕರ ಅನುಭವವನ್ನು ವಿವರಿಸುತ್ತಾ ಶ್ರೀಗುರು "ಜಾತಿ ಬಹಳೇನೂ ಇಲ್ಲ, ಇರೋದು ಒಂದೇ ಜಾತಿ; ಅದುವೇ ಮಾನವ

ಜಾತಿ" ಎಂದು ವಿಶದೀಕರಿಸಿದರು. ಪ್ರವಚನ ಮುಂದುವರಿಸುತ್ತಾ, "ಎಲ್ಲ ಮನುಷ್ಯರೂ ಒಂದೇ ಜಾತಿಗೆ ಸೇರಿದವರು. ಇದನ್ನು ರುಜುವಾತು ಮಾಡೋದು ಕಷ್ಟದ ವಿಚಾರ ಅಲ್ಲವೇ ಅಲ್ಲ. ನಾಯಿಗಳನ್ನು ನೋಡಿ. ಅವು ಒಂದು ಇನ್ನೊಂದನ್ನು ಕಂಡಾಗ ತಾವು ಒಂದೇ ಜಾತಿ ಎಂಬ ಗುರುತು ಹಿಡಿಯುತ್ತದೆ. ಇತರ ಯಾವುದೇ ಪ್ರಾಣಿಯನ್ನು ಬೇಕಾದರೂ ನೋಡಿ; ಅವುಗಳಲ್ಲಿ ಬಣ್ಣದಲ್ಲಿ ಎತ್ತರದಲ್ಲಿ ವ್ಯತ್ಯಾಸವಿದ್ದರೂ ಅವೆಲ್ಲಾ ಒಂದೇ ಜಾತಿಗೆ ಸೇರಿದವು ಎಂಬುದನ್ನು ಗುರುತಿಸಿಕೊಳ್ಳುತ್ತವೆ. ಮನುಷ್ಯಪ್ರಾಣಿ ಮಾತ್ರ ಇದಕ್ಕೆ ತದ್ವಿರುದ್ಧ. ಅವನು ಪ್ರಾಣಿಗಳಿಗಿಂತ ಜಾಣನೆಂದು ಭ್ರಮಿಸಿಕೊಳ್ಳುತ್ತಾನಾದರೂ ತಾವೆಲ್ಲ ಒಂದೇ ಜಾತಿ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಸಂಶಯದ ಕಾಟ ಅವನನ್ನು ಕಾಡುತ್ತಿದೆ. ಹೀಗೆ ನಡೆದುದರಿಂದಲೇ ಇತರ ಪ್ರಾಣಿಗಳಿಗಿಂತಲೂ ಮನುಷ್ಯನು ಕೀಳಾಗಿದ್ದಾನೆ."

ಗುರುಗಳು ಬದುಕಿನ ಕುರಿತು ಅತ್ಯಂತ ಅನುಭವಿ ಸಮಾಜವಿಜ್ಞಾನಿಯಂತೆ ಸಮಸ್ಯೆಗಳನ್ನು ಎಳೆಎಳೆಯಾಗಿ ವಿಶ್ಲೇಷಿಸುತ್ತಾ ವಿವರಿಸಿದವರು. ಅವರಿಗೆ ಮಾನವರೆಲ್ಲಾ ಒಂದೇ ಜಾತಿ ಎಂಬ ಬಗ್ಗೆ ಸಂಶಯವೇ ಇರಲಿಲ್ಲ.

ಆಧುನಿಕ ಜಗತ್ತಿನಲ್ಲಿ ಸಂಪರ್ಕ ಮಾಧ್ಯಮದ ಹಾಗೂ ಕಂಪ್ಯೂಟರ್‌ನ ಅತ್ಯದ್ಭುತ ಪ್ರಗತಿಯಿಂದಾಗಿ ಸಂಪೂರ್ಣ ಪ್ರಪಂಚವೇ ಇಂದು "ಗ್ರಾಮಜಗತ್ತು" (Global village) ಆಗಿ ಪರಿವರ್ತಿಸಲ್ಪಡುವ ಈ ಸಂಧಿಕಾಲದಲ್ಲಿ ಮನುಕುಲವೆಲ್ಲಾ ಒಂದೇ, ಮಾನವತೆಯೇ ಮಹಾಧರ್ಮ, ವಿಶ್ವವೇ ಒಂದು ಕುಟುಂಬ ಎಂಬ ವಿಚಾರ ಸರ್ವತ್ರ ಸ್ವೀಕಾರಾರ್ಹವಾಗುತ್ತಿದೆ. ಒಂದು ಶತಮಾನದ ಮೊದಲೇ ಇಂತಹದೊಂದು ದೃಷ್ಟಿಯನ್ನು ಹೊಂದಿದ್ದ ನಾರಾಯಣಗುರು ಓರ್ವ ದೃಷ್ಟಾರ ಮಾತ್ರವಲ್ಲ ಯುಗಪುರುಷರೂ ಆಗಿದ್ದರು. ನಾರಾಯಣಗುರುಗಳ ಬದುಕು ಹಾಗೂ ಸಮಾಜ ಮತ್ತು ಮಾನವಕುಲದ ಬಗೆಗಿನ ಅವರ ಚಿಂತನೆ ಜಗತ್ತಿನ ಮಹಾನ್ ಚಿಂತಕರ ಸಾಲಿಗೆ ಸೇರಿದೆ. ಇದರ ಮೂಲಸೆಲೆ ಆಧ್ಯಾತ್ಮ ತತ್ವಜ್ಞಾನದ ಆಧಾರದಲ್ಲಿ ಮೂಡಿಬಂದಿರುವ ಭಾರತೀಯ ಸಂಸ್ಕೃತಿಯ, ಸನಾತನ ಧರ್ಮದ ನೈಜ ಅನುಷ್ಠಾನ. ವಸುಧೈವ ಕುಟುಂಬಕಂ ಎಂಬ ಭಾರತದ ಋಷಿಮುನಿಗಳ ದೃಷ್ಟಿಕೋನ.

1925ರಲ್ಲಿ ಮಹಾತ್ಮಾ ಗಾಂಧೀಜಿಯವರು ಕೇರಳದ "ವೈಕಂ" ಚಳವಳಿಯ ಸಂದರ್ಭದಲ್ಲಿ ಬಂದಾಗ ನಾರಾಯಣಗುರುಗಳನ್ನು ಶಿವಗಿರಿ ಆಶ್ರಮದಲ್ಲಿ ಭೇಟಿಯಾಗುತ್ತಾರೆ. ಚಕ್ರವರ್ತಿ ರಾಜಗೋಪಾಲಾಚಾರಿ, ದೀನಬಂಧು ಆಂಡ್ರೂಸ್ ಮೊದಲಾದ ದೇಶಭಕ್ತರೂ ಅವರೊಂದಿಗಿದ್ದರು. ನಾರಾಯಣಗುರುಗಳೊಡನೆ ಮಹಾತ್ಮಾಜಿಯ ಸುಧೀರ್ಘ ಸಂಭಾಷಣೆ ಚರಿತ್ರಾರ್ಹವಾಗಿದೆ. ತುಳಿತಕ್ಕೊಳಗಾದ ಲಕ್ಷಾಂತರ ನಿಮ್ನವರ್ಗದ ಜನರನ್ನು ಜಾತಿಯ ಕಟ್ಟುಪಾಡುಗಳಿಂದ ಬಿಡುಗಡೆಗೊಳಿಸುವುದು ರಾಜಕೀಯ ಸ್ವಾತಂತ್ರ್ಯದಷ್ಟೇ ಪ್ರಾಮುಖ್ಯವಾದುದೆಂದು ಗಾಂಧೀಜಿಯವರಿಗೆ ಶ್ರೀಗುರು ಮನವರಿಕೆ ಮಾಡಿದರು. ಈ ಮಾತಿನ ಪ್ರಾಮುಖ್ಯತೆಯನ್ನು ಗಾಂಧೀಜಿಯವರು ದುಂಡುಮೇಜಿನ ಪರಿಷತ್ತಿನ ಸಮಯ ಬ್ರಿಟಿಷರು ತೋರಿಸಿದ ವರ್ತನೆಯಿಂದ ಮನಗಂಡರು. ಅಲ್ಲಿಂದ ಬಂದವರೇ ತನ್ನ ಪತ್ರಿಕೆ "ನವಜೀವನ" ದ ಹೆಸರನ್ನು "ಹರಿಜನ" ಎಂದು ಬದಲಾಯಿಸಿ ನಿಮ್ನ

ಜನಾಂಗಕ್ಕಾಗಿ ಅಹೋರಾತ್ರಿ ದುಡಿದರು. ಈ ಇಬ್ಬರು ಮಹಾಪುರುಷರ ಸಂಭಾಷಣೆಯ ಕೆಲವು ಭಾಗ ಉಲ್ಲೇಖನೀಯ.

ಗಾಂಧೀಜಿ : ಸ್ವಾಮೀಜಿಯವರೇ, ಹಿಂದೂಧರ್ಮ ಗ್ರಂಥಗಳಲ್ಲಿ ಅಸ್ಪೃಶ್ಯತೆಯ ಬಗ್ಗೆ ಉಲ್ಲೇಖವಿದೆಯೇ.

ಸ್ವಾಮೀಜಿ : ಹಿಂದೂಧರ್ಮ ಗ್ರಂಥಗಳಲ್ಲಿ ಆ ಬಗ್ಗೆ ಒಂದು ಸೊಲ್ಲೂ ಇಲ್ಲ.

ಗಾಂಧೀಜಿ : ಹಿಂದೂಧರ್ಮದ ವರ್ಣಾಶ್ರಮ ಕ್ರಮವು ಒಳ್ಳೆಯದಲ್ಲವೆ? ವರ್ಣ ಅಂದರೆ ಜಾತಿಯಲ್ಲ. ಜಾತಿಗೆ ವರ್ಣದ ಸಂಬಂಧವಿಲ್ಲವಲ್ಲ?

ಸ್ವಾಮೀಜಿ : ವರ್ಣ, ಆಶ್ರಮ - ಇದು ಬೇರೆ ಬೇರೆಯೇ. ಸಾಧಾರಣವಾಗಿ ವರ್ಣಾಶ್ರಮ ಹೇಳಿದಾಗ ಜಾತಿಯನ್ನು ಹೇಳಿದಂತಾಗುತ್ತದೆ. ಗುಣಕರ್ಮಗಳ ತಳಹದಿಯಲ್ಲಿ ವರ್ಣಾಶ್ರಮ ಆಗಿರಬಹುದು. ಆದರೆ ಇವುಗಳು ಸ್ಥಾಯಿಯಾಗಿ ನಿಲ್ಲುವುದಿಲ್ಲವಲ್ಲ ? ಅವುಗಳು ಬದಲಾಗುತ್ತಾ ಇರುತ್ತವೆ. ಹಾಗಾದರೆ ವರ್ಣ ನಿರ್ಣಯಿಸುವುದು ಹೇಗೆ? ಜಾತಿ ವರ್ಗೀಕರಣದಿಂದ ಯಾವ ಗುಣವೂ ಇಲ್ಲ. ಅದು ಮನುಷ್ಯನ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ. ಆದರಿಂದ ಬುದ್ಧಿನಾಶವಾಗಿ ಹೋಗುತ್ತದೆ. ಒಬ್ಬನಿಗೆ ಸ್ವಾತಂತ್ರ್ಯವೂ ಬುದ್ಧಿಯೂ ಇಲ್ಲವೆಂದಾದರೆ ಸರ್ವನಾಶವಾದಂತೆ ತಾನೆ !

ಹಿಂದುಧರ್ಮದ ವರ್ಣ ವ್ಯತ್ಯಾಸ ಸಿದ್ಧಾಂತದ ಕುರಿತು ಹೀಗೆ ಗಾಂಧೀಜಿ ಗುರುಗಳೊಡನೆ ಸಂಭಾಷಿಸಿದ್ದರು. ಮನುಷ್ಯರಲ್ಲಿ ಅನೇಕ ಜಾತಿಗಳಿರುವುದು ಪ್ರಕೃತಿ ಸಹಜ ಅಲ್ಲವೇ ? ಎಂದು ಗಾಂಧೀಜಿ ಗುರುಗಳೊಡನೆ ಕೇಳಿದ್ದರು ಉದಾಹರಣೆಗೆ ವೃಕ್ಷವೊಂದರ ಎಲೆಗಳೆಲ್ಲವೂ ಒಂದೇ ರೀತಿ ಇಲ್ಲವಲ್ಲ; ಪ್ರಕೃತಿ ದತ್ತವಾಗಿಯೇ ಅವುಗಳಲ್ಲಿ ದೊಡ್ಡದು ಚಿಕ್ಕದು ಎಂಬ ವ್ಯತ್ಯಾಸಗಳಿವೆಯಲ್ಲ ! ಎಂದೂ ಹೇಳಿದ್ದರು. ಅದಕ್ಕೆ ಸ್ವಾಮಿಗಳು, ಮೇಲು ನೋಟಕ್ಕೆ ಹಾಗೆ ಕಾಣಿಸುವುದಾದರೂ ಆ ಎಲ್ಲಾ ಎಲೆಗಳಲ್ಲಿ ಹರಿಯುವ ರಸಕ್ಕೆ ಒಂದೇ ಗುಣವೇ ಇರುತ್ತದೆ ಎಂದರು.

ಆ ಸಂದರ್ಭದಲ್ಲಿ ಮಹಾತ್ಮಾಜಿಯವರೊಡನೆ ಇದ್ದ ರಾಜಗೋಪಾಲಾಚಾರಿಯವರು ಗುರುಗಳೊಡನೆ "ಓರ್ವ ವ್ಯಕ್ತಿಯನ್ನು ನೋಡಿದಾಗ, ನಮ್ಮ ಸಮಾಜದಲ್ಲಿ, ಆತನ ಜಾತಿಯನ್ನು ಗುರುತಿಸಬಹುದಲ್ಲವೇ ?" ಇಷ್ಟು ಕೇಳಿದ ಕೂಡಲೇ ನಾರಾಯಣಗುರುಗಳು ಶಿವಗಿರಿ ಆಶ್ರಮದಲ್ಲಿದ್ದ ಏಳೆಂಟು ವಿದ್ಯಾರ್ಥಿಗಳನ್ನು ಬರಹೇಳಿದರು. ಸಂಸ್ಕೃತ ಶ್ಲೋಕಗಳನ್ನು ಸ್ಪಷ್ಟವಾಗಿ ಉಚ್ಚರಿಸಬಲ್ಲ, ಯಜ್ಞೋಪವೀತಧಾರಿ, ಸುಸಂಸ್ಕೃತ ವಿದ್ಯಾರ್ಥಿಗಳಲ್ಲಿ "ಇವರು ಯಾವ ಜಾತಿ ಎಂದು ಗುರುತಿಸಬಲ್ಲಿರಾ?" ಎಂದು ಗುರುಗಳು ಕೇಳಿದರು. ರಾಜಗೋಪಾಲಾಚಾರಿಯರಿಗೆ ಅದು ಅಸಾಧ್ಯವಾಯಿತು. ಆಗ ಗುರುಗಳು "ಇವರೆಲ್ಲಾ ನಿಮ್ನ ಜಾತಿಯಲ್ಲಿ ಜನಿಸಿದರೂ ಸುಸಂಸ್ಕೃರಾಗಿ ಬದುಕಬಲ್ಲವರು. ಇದೇ ನಾವು ಮಾಡಬೇಕಾದ ಕಾರ್ಯ" ಎಂದರು.

ಜಾತಿಯ ಬಗ್ಗೆ ತನ್ನ ಭಕ್ತರಿಗೆ ತಿಳಿಸಿ ಹೇಳಿದ ಗುರುಗಳು, ಜಾತಿವರ್ಗೀಕರಣದಿಂದ , ಎಲ್ಲಾ ಬಗೆಯ ಸುಖ ಹೊಂದುವವರು ಜಾತೀಯತೆಯ ಪ್ರೋತ್ಸಾಹಕರ ವಾದವನ್ನು

ಹೂಡುತ್ತಾರೆ. ಮನುಷ್ಯರು ಜೀವಿಸುವುದು ಜಾತಿಗಾಗಿಯೋ ? ಲೋಕದ ಸುಖಕ್ಕಾಗಿಯೋ ? ಅಥವಾ ತಮಗೆ ಬೇಕಾಗಿಯೋ ? ಮನುಷ್ಯರು ಕೆಟ್ಟು ಲೋಕಕ್ಕೆ ಸುಖವಾಗಿ ಪ್ರಯೋಜನವೇನು ? ಜಾತೀಯತೆ ಮನುಷ್ಯನನ್ನು ಕೆಡಿಸುತ್ತದೆ. ಈ ಕಾರಣದಿಂದ ಅದರ ಅವಶ್ಯವಿಲ್ಲ. ಜಾತೀಯತೆ ಇಲ್ಲ; ಅದು ಉಂಟೆಂದು ತಿಳಿಯುವುದು ಮೂಢತನ.

ಕೇರಳದಲ್ಲಿ ಜಾತಿಭೇದವಿಲ್ಲದಂತೆ ಮಾಡುವುದರ ಕುರಿತು ಪ್ರಚಾರ ಕಾರ್ಯಮಾಡುವಂತೆ ಒಂದು ಸನ್ಯಾಸ ಸಂಘ ಅಗತ್ಯವೆಂದು ಸ್ವಾಮಿಯವರು ಮನಗಂಡು "ಶ್ರೀ ನಾರಾಯಣ ಧರ್ಮ ಸಂಘಂ" ಅನ್ನು ಸ್ಥಾಪಿಸಿದರು. ಇದರೊಂದಿಗೆ ಈಗಾಗಲೇ ಸ್ಥಾಪಿಸಲ್ಪಟ್ಟ "ಶ್ರೀ ನಾರಾಯಣ ಧರ್ಮಪರಿಪಾಲನಾ ಯೋಗಂ (SNDP) ಎಂಬ ಸಂಸ್ಥೆಯೂ ಕಾರ್ಯಪ್ರವರ್ತವಾಗಿತ್ತು. ಮತ ಯಾವುದಾದರೇನು, ಮನುಷ್ಯ ಒಳ್ಳೆಯವನಾದರೆ ಸಾಕು. ಹಾಗಿರುವ ಮನುಷ್ಯರು ಒಗ್ಗೂಡಿ ಅವರಲ್ಲಿ ಮೇಲು ಕೀಳುಗಳೆಂಬ ಭೇದವಿಲ್ಲದೆ ಎಲ್ಲಾ ಮತಸ್ಥರೂ ಸೇರಿಕೊಂಡರೆ ಆ ಸಂಸ್ಥೆಗಳು ಕ್ರಮೇಣ ಜಾತಿಯ ಹೆಸರನ್ನೇ ನಾಶಮಾಡಲಿಕ್ಕೇ ಸಾಧ್ಯ. ದೃಢ ಪ್ರತಿಜ್ಞೆಯಿಂದಲೂ, ಅವಿಶ್ರಾಂತ ಉತ್ಸಾಹದಿಂದಲೂ ಈ ಕುರಿತು ಜನಸಂಘಟನೆಯಾಗಲು ಈ ಎರಡೂ ಸಂಸ್ಥೆಗಳು ಕಾರ್ಯಪ್ರವೃತ್ತವಾದವು. ವಿಚಾರವಂತರು ಹೆಚ್ಚಾಗಿ ಬೆಳೆಯಲಿ ಎಂಬ - "Let this tribe increase" - ಇಂಗ್ಲೀಷ್ ನಾಣ್ನುಡಿಯಂತೆ ಶ್ರೀಗುರುಗಳ ಉದ್ದೇಶದ ಸಾಧನೆಗೆ ದುಡಿದ ಹಲವಾರು ಪ್ರತಿಭಾವಂತರ ಫಲವಾಗಿ ಇಂದು ಕೇರಳಾದ್ಯಂತ ಜಾತೀಯತೆ, ಅಸ್ಪೃಶ್ಯತೆ ಸಂಪೂರ್ಣ ತೊಲಗಿದ್ದು ಅಲ್ಲಿನ ಸಮಾಜದಲ್ಲಿ ವಿಚಾರಕ್ರಾಂತಿಯ ನವೋದಯವಾಯಿತು. ಜಾತಿಭೇದ, ಮತಭೇದ, ಈಶ್ವರ ಭೇದಗಳನ್ನು ಒಪ್ಪಿಕೊಂಡು, ಅನರ್ಥಕಾರಿ ಉಚ್ಚ ನೀಚ ಭಾವನೆಯಲ್ಲೇ ಮುಳುಗಿದ್ದ ಭಾರತೀಯರನ್ನು ಅಜ್ಞಾನದ ಕತ್ತಲೆಯಿಂದ ಉದ್ಧರಿಸುವ ಮಹತ್ಕಾರ್ಯವನ್ನು ನಾರಾಯಣಗುರು ಮಾಡಿದರು.

**ಒಂದೇ ಧರ್ಮ** : ನಾರಾಯಣಗುರುಗಳು ಬರೆದ ಕೃತಿ "ಜಾತಿಮೀಮಾಂಸ" ದ ಮೊದಲ ವಾಕ್ಯವೇ "ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು". ಗುರುಗಳು ಧರ್ಮ ಎನ್ನುವುದನ್ನು ಬಹಳ ವಿಶಾಲಾರ್ಥದಲ್ಲಿ ಉಪಯೋಗಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ಮತ ಬೇರೆ ಧರ್ಮ ಬೇರೆ. ಧರ್ಮ ಎನ್ನುವುದು ಇಡಿಯ ಮಾನವ ಕುಲವು ಯಾವ ಆತಂಕವೂ ಇಲ್ಲದೆ ಆಚರಿಸಬಹುದಾದ ವಿಶ್ವಮಾನವ ಧರ್ಮ. ಅದು ಆತ್ಮಜ್ಞಾನವನ್ನು ತಿಳಿದುಕೊಳ್ಳುವ ಸಾಧನವೂ ಹೌದು. ಮತ ಎನ್ನುವುದು ಅನಿಸಿಕೆ ಅಥವಾ ವ್ಯಕ್ತಿಯ ನಂಬಿಕೆ. ಧರ್ಮವೆಂಬುದು ಜಾತಿ - ಮತಗಳಿಂದ ಭಿನ್ನವಾದುದು.

ಒಂದು ಸಂದರ್ಭದಲ್ಲಿ ಶ್ರೀಗುರುಗಳೆಂದರು - "ಎಲ್ಲ ಧರ್ಮಗಳ ಸಂದೇಶವೂ ಒಂದೇ. ನದಿಗಳು ಬೇರೆಯಾಗಿ ಕಂಡರೂ, ಅವು ಸಮುದ್ರ ಸೇರಿದ ಮೇಲೆ ಆ ವ್ಯತ್ಯಾಸ ಎಲ್ಲಿರುತ್ತದೆ. ಧರ್ಮಗಳು ಇರುವುದು ವ್ಯಕ್ತಿಯನ್ನು ಪ್ರಗತಿಯ ದಾರಿಯಲ್ಲಿ ನಡೆಸಲಿಕ್ಕಾಗಿ. ಒಮ್ಮೆ ಸರಿಯಾದ ಮಾರ್ಗ ಗೋಚರಿಸಿದ ಮೇಲೆ ಪ್ರತಿಯೊಬ್ಬನೂ ಅವನಷ್ಟಕ್ಕೆ ಮುಂದುವರಿಯಬಲ್ಲ. ಆತ್ಮಜ್ಞಾನ ಸಿದ್ಧಿಸಿಕೊಂಡವನಿಗೆ ಧರ್ಮದಿಂದ ಏನೂ ಆಗಬೇಕಿಲ್ಲ. ಧರ್ಮ ನಮ್ಮನ್ನು ಗುರಿ ತಲುಪಲು ನೆರವಾಗುವ ತೋರುಗಂಬಗಳು. ಆದರೆ

ಜನಸಾಮಾನ್ಯರಿಗೆ ಧರ್ಮಗ್ರಂಥಗಳ ಅಗತ್ಯ ಉಂಟು. ಆದರೊಡನೆ ಸಾಧು ಸಂತರಿಗೂ ಒಂದು ಕರ್ತವ್ಯವುಂಟು. ಧರ್ಮ ಪ್ರಚಾರಕರು, ಸಾಧುಸಂತರು ಈ ಧರ್ಮ ಗ್ರಂಥಗಳಲ್ಲಿನ ಸಾರಕ್ಕೆ ವಿರುದ್ಧವಾದುದು ಅವುಗಳಲ್ಲಿ ನುಸುಳಿಕೊಳ್ಳದಂತೆ ನೋಡಿಕೊಳ್ಳಬೇಕು.

ಕಾಲದ ಪ್ರವಾಹದಲ್ಲಿ ನುಸುಳಿ ಬಂದಿರಬಹುದಾದ ಅಸಂಗತಗಳನ್ನು ಪ್ರತ್ಯೇಕಿಸಲು ಗೊತ್ತಿರಬೇಕು. ಪ್ರವಾಹಗಳು ಬರುವಾಗ ನಮಗೆ ಬೇಡವಾದ ಎಷ್ಟೊಂದು ವಸ್ತುಗಳು ಅಲ್ಲಿ ಬರುವುದಿಲ್ಲ ? ಅವುಗಳನ್ನೆಲ್ಲಾ ನಾವು ಬಳಸುತ್ತೇವೆಯೇ ?"

ಧರ್ಮ ಧರ್ಮಗಳ ನಡುವಿನ ಹೋರಾಟಕ್ಕೆ ರಾಷ್ಟ್ರ ರಾಷ್ಟ್ರಗಳ ನಡುವಿನ ಯುದ್ಧಕ್ಕೆ ಮುಖ್ಯವಾಗಿ ಒಬ್ಬರು ಇನ್ನೊಬ್ಬರನ್ನು ತಿಳಿದುಕೊಳ್ಳಲು ಅಸಮರ್ಥರಾದುದೇ ಕಾರಣವಾಗಿದೆ. ಧರ್ಮದ ವಿಷಯದಲ್ಲಂತೂ ನಾವು ಜಾಗರೂಕರಾಗಬೇಕಾದ ವಿಚಾರವೊಂದಿದೆ.

"ಧರ್ಮದ ಕುರಿತು ನಮ್ಮ ಭಿನ್ನತೆಗಳನ್ನು ಹೊಡೆದಾಟದಿಂದ ತೀರ್ಮಾನಿಸಲು ಎಂದೂ ಸಾಧ್ಯವಿಲ್ಲ. ಜಾತಿಧರ್ಮಗಳ ಕಲಹವನ್ನು ಕೊನೆಗಾಣಿಸಲು ಒಂದೇ ಒಂದು ದಾರಿ ಇದೆ. ಅದುವೇ ಎಲ್ಲ ಧರ್ಮಗ್ರಂಥಗಳನ್ನೂ ತಿಳಿದುಕೊಳ್ಳಲು ಪ್ರಯತ್ನಿಸುವುದು. ಈ ಕೆಲಸ ಯಾವ ಪೂರ್ವಗ್ರಹವೂ ಇಲ್ಲದೆ ನಡೆಯಬೇಕು. ಹಾಗೆ ಮಾಡಿದಾಗ ಮಾತ್ರ ಧರ್ಮಗಳಲ್ಲಿ ಮೂಲತಃ ಯಾವ ವ್ಯತ್ಯಾಸವೂ ಇಲ್ಲ ಎನ್ನುವ ವಾಸ್ತವ ಸಂಗತಿ ಗೋಚರಿಸಲು ಸಾಧ್ಯ. ನಾನು ಹೇಳುವ ಏಕಮತ ಇದುವೆ ಆಗಿದೆ."

ನಾರಾಯಣಗುರುಗಳು "ಒಂದೇಧರ್ಮ" ಎನ್ನುವುದು ಈ ಅರ್ಥದಲ್ಲಿ. ಎಲ್ಲ ಧರ್ಮಗಳಲ್ಲೂ ಗೋಚರಿಸುವ ಜೀವದ್ರವ ಇದು. ಧರ್ಮಗಳ ಕುರಿತು ಈ ವಿಶಾಲಭಾವನೆಯನ್ನೇ "ವಿಶ್ವಮಾನವ ಧರ್ಮ" ಎಂದು ಅರ್ಥೈಸಬಹುದು.

ಗಾಂಧೀಜಿಯವರು ಆಶ್ರಮಕ್ಕೆ ಬಂದ ಸಂದರ್ಭದಲ್ಲಿ ನಾರಾಯಣಗುರುಗಳೊಡನೆ ಸಂಭಾಷಣೆ ಮಾಡುತ್ತಾ " ಮಾನವ ವ್ಯಕ್ತಿಗಳೆಲ್ಲಾ ಭಿನ್ನಭಿನ್ನರಾಗಿದ್ದಾರೆ; ಈ ಭಿನ್ನತೆ ಇರುವಷ್ಟು ಕಾಲ ಮನುಷ್ಯರ ಮತಗಳೂ ಭಿನ್ನವಾಗಿರುವವು" ಎಂದು ಹೇಳಿದರು. ಆಗ ನಾರಾಯಣಗುರು, "ಇದನ್ನು ನ್ಯಾಯವಾಗಿ ಪರಿಶೋಧಿಸಿದರೆ ಒಬ್ಬೊಬ್ಬನಿಗೆ ಒಂದೊಂದು ಮತವಿರಬಹುದು ಎಂದು ಹೇಳಬಹುದು. ಆದರೆ ಎಲ್ಲಾ ಮತದವರ ವಿಶ್ವಾಸಗಳಲ್ಲಿ ಸಾಮಾನ್ಯ ಲಕ್ಷಣವಾದ ವಿಶ್ವಮಾನವ ಧರ್ಮ ಒಂದೇ ಇರುವುದರಿಂದ ಮನುಷ್ಯರೆಲ್ಲ ಒಂದೇ ಧರ್ಮಕ್ಕೆ ಸೇರಿದವರಾಗಿದ್ದಾರೆ. ಸನಾತನವಾದ ಮಾನವಧರ್ಮ ಅಥವಾ ಸತ್ಯವನ್ನು ಮುಂದಿಟ್ಟುಕೊಳ್ಳದೆ ಯಾವ ಮತವನ್ನೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ."

ಇದೇ ಅಭಿಪ್ರಾಯವನ್ನು ನಾರಾಯಣಗುರು ಸೂಚಿಸಿದರು.

ವಿಶ್ವಮಾನವ ಧರ್ಮದ ತಾತ್ವಿಕ ಚಿಂತನೆಯನ್ನು ಜನಮನದಲ್ಲಿ ಅಚ್ಚಳಿಯದೆ ಮೂಡಿಸುವುದಕ್ಕಾಗಿಯೇ ಅಲ್ವೆಯಲ್ಲಿ 1921ರಲ್ಲಿ ಅಖಿಲ ಕೇರಳ ಸೋದರ ಸಮ್ಮೇಳನವನ್ನೂ, 1927ರಲ್ಲಿ ಸರ್ವಧರ್ಮ ಸಮ್ಮೇಳನವನ್ನೂ ನೆರವೇರಿಸಿರುವುದು ಚರಿತ್ರಾರ್ಹವಾಗಿದೆ. ನಾರಾಯಣಗುರು 1888ರಲ್ಲಿ ಯಾವತ್ತು ಅರವಿಪುರಂನಲ್ಲಿ ಶಿವಲಿಂಗ ಪ್ರತಿಷ್ಠಾಪನೆ ಮಾಡಿದರೋ ಅಂದಿನಿಂದಲೇ ಜಾತಿಮತ ಭೇದವಿಲ್ಲದೆ ಒಗ್ಗೂಡಿದ ಜನರ ಮಧ್ಯೆ

ಸರ್ವಮತ ಸಹೋದರ ಆಂದೋಳನದ ಮೌನಕ್ರಾಂತಿ ಆರಂಭಗೊಂಡಿತ್ತು. 1888ರಲ್ಲಿ ಅನಿಬೆಸೆಂಟರ ಥಿಯೋಸೋಫಿಕಲ್ ಸೊಸೈಟಿ ರೂಪುಗೊಳ್ಳುವ ಹಾಗೂ 1893ರಲ್ಲಿ ಸ್ವಾಮಿ ವಿವೇಕಾನಂದರು ಪಾಲ್ಗೊಂಡಿದ್ದ ಚಿಕಾಗೋ ಸರ್ವಧರ್ಮ ಸಮ್ಮೇಳನ ಜರುಗುವುದಕ್ಕೂ ಮುನ್ನವೇ "ಜಾತಿ ವ್ಯತ್ಯಾಸ ಮತ ದ್ವೇಷಗಳಿಲ್ಲದೆಯೇ ಎಲ್ಲರೂ ಸೋದರತ್ವದಿ ಬಾಳುವ ಮಾದರಿ ತಾಣ" ವಾಗಿ ಅರವಿಪುರಂ ಕ್ಷೇತ್ರ ನಿರ್ಮಾಣದೊಂದಿಗೆ ಸರ್ವಮತ ಸಹೋದರರ ವಿಶ್ವಮಾನ್ಯ ಸಂದೇಶವನ್ನು ನಾರಾಯಣಗುರು ನೀಡಿದ್ದರು.

"ಅಖಿಲ ಕೇರಳ ಸಹೋದರ ಸಮ್ಮೇಳನ" ದಲ್ಲಿ ನಾರಾಯಣಗುರುಗಳ ಚರಿತ್ರಾರ್ಹ ಹೇಳಿಕೆ ಹಾಗೂ ಘೋಷಣೆಗಳನ್ನು ಅವರ ಶಿಷ್ಯರಾದ ನಟರಾಜಗುರು ದಾಖಲಿಸಿದ್ದಾರೆ. ಪ್ರಾಮುಖ್ಯವಾದ ಮೂರು ಕರೆಗಳನ್ನು ಸಮಾಜಕ್ಕೆ ನೀಡಲಾಯಿತು.

* ಪ್ರಪಂಚದ ಎಲ್ಲಾ ಮತಗಳ ಅಭಿಪ್ರಾಯ ಮಾನವ ಕಲ್ಯಾಣ. ಎಲ್ಲಾ ಮತಗಳು ಸತ್ಯ ಮತ್ತು ಮಾನವಕುಲಕ್ಕೆ ನಾವು ಮಾಡಬೇಕಾದ ಕರ್ತವ್ಯಗಳನ್ನು ಸೂಚಿಸುವಲ್ಲಿ ಏಕ ಅಭಿಪ್ರಾಯವನ್ನು ಹೊಂದಿವೆ. ಆದುದರಿಂದ ಅವುಗಳೆಲ್ಲದರ ಉದ್ದೇಶ ಒಂದೇ, ಧ್ಯೇಯ ಒಂದೇ. ಈ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ ಧರ್ಮಕ್ಕೆ ಸೇರಿದವರು, ಅದುವೇ ವಿಶ್ವಮಾನವ ಧರ್ಮ.
* ಮತ ಯಾವುದಾದರೇನು ? ಮನುಷ್ಯ ಒಳ್ಳೆಯವನಾದರೆ ಸಾಕು. ಅನುಸರಿಸುವ ಮತ, ಉಡುವ ಬಟ್ಟೆಗಳು, ಮಾತಾಡುವ ಭಾಷೆ, ಸೇವಿಸುವ ಆಹಾರ ಭಿನ್ನವಾಗಿದ್ದರೂ ಎಲ್ಲರೂ ಮಾನವಕುಲಕ್ಕೆ ಸೇರಿದ ಒಂದೇ ಜಾತಿಯವರಾದುದರಿಂದ ಅಂತರ್‌ಜಾತಿಯ ವಿವಾಹವಾಗುವುದರಲ್ಲಿ ಅಥವಾ ಸಹಭೋಜನ ಮಾಡುವುದರಲ್ಲಿ ಯಾವ ತೊಂದರೆಯೂ ಇಲ್ಲ.
* ಮದ್ಯವು ವಿಷ. ಅದನ್ನು ಉತ್ಪಾದಿಸಬೇಡಿ, ಕುಡಿಯಬೇಡಿ, ಹಂಚಬೇಡಿ.

ಸಮಾಜಕ್ಕೆ ಕೊಟ್ಟ ಈ ಮೂರು ಕರೆಗಳನ್ನು ಸಾಕಾರಗೊಳಿಸವಲ್ಲಿ ಬಹುದೊಡ್ಡ ವಿದ್ಯಾವಂತ ಜನವರ್ಗ ಕೇರಳಾದ್ಯಂತ ಓಡಾಡಿದ ಪ್ರಯುಕ್ತ ಸಮಾಜಸುಧಾರಣೆಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಇದರಿಂದಾಗಿ ಮೂಡಿಬಂದ ಅದ್ಭುತ ಪ್ರತಿಭಾವಂತರೂ, ಚಿರಸ್ಮರಣೀಯರೂ ಆದ ಡಾ|| ಪಲ್ಪು ಉಪೇಕ್ಷಿತ ವರ್ಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಲು ಹೋರಾಟ ಮುಂದುವರಿಸಿದವರಲ್ಲಿ ಪ್ರಮುಖರು.

ಮೂಲೂರು ಪದ್ಮನಾಭ ಪಣಿಕ್ಕರ್ ಎಂಬವರು ಸಂಸ್ಕೃತ ಹಾಗೂ ಪಾಲಿ ಭಾಷೆ ಯಲ್ಲಿ ಪ್ರವೀಣರಾಗಿದ್ದು, ಯುವಕವಿಗಳಿಗೆ, ನ್ಯಾಯವಾದಿಗಳಿಗೆ ಮಾರ್ಗದರ್ಶನ ನೀಡಿದರು.

- ಮಹಾಕವಿ ಕುಮಾರಾನ್ ಆಶಾನ್ ಕೇರಳದ ಮಹಾಕವಿ ಎಂದೇ ಪರಿಗಣಿಸಲ್ಪಟ್ಟು ನಾರಾಯಣಗುರುಗಳ ಪ್ರಿಯಶಿಷ್ಯನಾಗಿದ್ದನು.
- ಟಿ. ಕೆ. ಮಾಧವನ್ ಎಂಬವರು ಸ್ವಾತಂತ್ರ್ಯ ಹೋರಾಟಗಾರರಾಗಿಯೂ, ಪ್ರಖ್ಯಾತ ಸಂಘಟಕರಾಗಿ ಜನಾನುರಾಗಿಗಳಾಗಿದ್ದು ಗುರುಗಳ ಸಂದೇಶದಂತೆ ನಡೆದವರು.
- ಕೆ. ಪಿ. ಕಯ್ಯಾಲಕ್ಕಲ ಎಂಬವರು ಪ್ರಭಾವಶಾಲಿ ಭಾಷಣಗಾರ, ಗುರುಗಳ ಶಿಷ್ಯ.

- ಸಿ. ಜಿ. ಮಾಧವನ್, ಕೆ. ಕುಮಾರನ್, ಎಮ್ ಗೋವಿಂದನ್ ಗುರುಗಳ ಕಾರ್ಯಚಟುವಟಿಕೆಗಳನ್ನು ಯೋಗ್ಯವಾಗಿ ಸಂಯೋಜಿಸುವ ಪ್ರವೀಣರು.
- ಕೆ. ಅಯ್ಯಪ್ಪನ್ ಯುವಕ್ರಾಂತಿಕಾರಿ ಸಾಮಾಜಿಕ ಕಾರ್ಯಕರ್ತ.
- ಸತ್ಯವ್ರತನ್, ಶ್ರೀ ನಾರಾಯಣ ಚೈತನ್ಯ, ಭೋದಾನಂದ, ಗೋವಿಂದಾನಂದ, ಆತ್ಮಾನಂದ, ಧರ್ಮತೀರ್ಥ, ನಟರಾಜ ಗುರು, ಆನಂದ ತೀರ್ಥ, ಅಚ್ಯುತಾನಂದ, ವಿದ್ಯಾನಂದ, ನರಸಿಂಹಾನಂದ, ಸುಗುಣಾನಂದ, ಶಂಕರಾನಂದ ಮತ್ತು ನಾರಾಯಣ ತೀರ್ಥ ಎಂಬವರು ನಾರಾಯಣಗುರುಗಳಿಂದ ದೀಕ್ಷೆ ಪಡೆದ ಸನ್ಯಾಸಿಗಳ ಪ್ರಥಮ ಪ್ರಮುಖರು.

ಇವರೆಲ್ಲರೂ ಒಂದೇ ಛತ್ರದಡಿ ಕೆಲಸಮಾಡುತ್ತಾ ನಾರಾಯಣಗುರುಗಳ ಸಮಾಜಸುಧಾರಣೆಯ ಮಹತ್ಕಾರ್ಯದಲ್ಲಿ ಸೇವೆ ಸಲ್ಲಿಸಿದವರು. ಎಲ್ಲಾ ಶಕ್ತಿಗಳಿಗೂ ಸೂರ್ಯನೇ ಮೂಲವಾಗಿರುವಂತೆ ಗುರುಗಳು ಇವರೆಲ್ಲರಿಗೂ ಸ್ಫೂರ್ತಿಯ ಆಗರವಾಗಿದ್ದರು. ಈ ಮಹಾನ್ ಸಂಘಟಕರು ಮೂರು ಸಂಸ್ಥೆಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡು ಗುರುಗಳ ಚಿಂತನೆಗಳನ್ನು ಕಾರ್ಯರೂಪಕ್ಕಿಳಿಸಿದರು, ಅವುಗಳು ಯಾವುದೆಂದರೆ,

**ನಾರಾಯಣ ಗುರುಕುಲ** : 1923 ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆ ಪ್ರಪಂಚದಾದ್ಯಂತ ತನ್ನ ಶಾಖೆಗಳನ್ನು ಹೊಂದಿದೆ. ನಾರಾಯಣಗುರುಗಳ ತತ್ವಚಿಂತನೆಗಳನ್ನು, ಮಾನವೀಯ ಸಂಬಂಧಗಳನ್ನು, ವಿಶ್ವಮಾನವ ಸಿದ್ಧಾಂತವನ್ನು ವಿದೇಶಗಳಲ್ಲೂ ಹರಡಲು ಶಕ್ತವಾಗಿದೆ. ಸಾವಿರಾರು ಪ್ರತಿಭಾವಂತರು ಇದರಲ್ಲಿ ಕಾರ್ಯನಿರತರಾಗಿದ್ದಾರೆ.

**ಶ್ರೀ ನಾರಾಯಣ ಧರ್ಮ ಸಂಘಂ** : 1927 ರಲ್ಲಿ ಸ್ಥಾಪಿಸಲ್ಪಟ್ಟ ಈ ರಿಜಿಸ್ಟರ್ಡ್ ಸಂಸ್ಥೆ ನಾರಾಯಣಗುರುಗಳ ಮಠಮಂದಿರಗಳ ಸಂರಕ್ಷಣೆಯನ್ನು ಮಾಡುವಲ್ಲಿ ಕಾರ್ಯವೆಸಗುತ್ತದೆ. ಶಿವಗಿರಿ ಮಠವು ಇದರ ಮುಖ್ಯ ತಾಣ.

**ಶ್ರೀ ನಾರಾಯಣ ಧರ್ಮ ಪರಿಪಾಲನೆ ಯೋಗಂ (SNDP)** : 1903 ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆ ಕೇರಳದ ಹಿಂದುಳಿದ ವರ್ಗ, ದಲಿತವರ್ಗ ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿಯಲ್ಪಟ್ಟ ಮಂದಿಯ ಆಶಾಗೋಪುರವಾಗಿ ಅವರೆಲ್ಲರ ಮೂಲಭೂತ ಹಕ್ಕುಗಳ ಬಗ್ಗೆ ಹೋರಾಡಬಲ್ಲ ಬಲಿಷ್ಠ ಸಂಸ್ಥೆ.

ಸಮಾಜ ಸುಧಾರಕ ನಾರಾಯಣಗುರು ಪ್ರಾರಂಭಿಸಿದ ಮೊತ್ತ ಮೊದಲ ಕಾರ್ಯವಾದ ಜಾತ್ಯತೀತ ಸಮಾಜ ನಿರ್ಮಾಣ ಕೇರಳಧ್ಯಾದ್ಯಂತ ಬಹಳಷ್ಟು ಪರಿಣಾಮಕಾರಿಯಾಯಿತು. ತನ್ನ ಆಶ್ರಮದಲ್ಲಿ ಶ್ರೀ ಗುರು ಅದನ್ನು ಅನುಷ್ಠಾನಕ್ಕೆ ತಂದು ತೋರಿಸಿದರು. ಅವರ ಅನುಯಾಯಿಗಳಲ್ಲಿ ಹಿಂದುಗಳು, ಕ್ರೈಸ್ತ, ಮುಸ್ಲಿಂ ಬಂಧುಗಳಿದ್ದರು; ಬೌದ್ಧ ಮತದವರಿದ್ದರು. ಬ್ರಾಹ್ಮಣ, ಪರಯಾ (ಅಸ್ಪೃಶ್ಯ ವರ್ಗ) ಹಾಗೂ ಹಿಂದುಳಿದ ಎಲ್ಲಾ ವರ್ಗದ ಜನರಿದ್ದರು. ಸುಸಂಸ್ಕೃತರಾಗಿ ಪರಿವರ್ತಿತರಾದ ಇವರನ್ನು ಜಾತಿವರ್ಗೀಕರಣದಿಂದ ಗುರುತಿಸಲು ಸಾಧ್ಯವಿಲ್ಲ. ದೇವಸ್ಥಾನ ಸ್ಥಾಪನೆ ಮೂಲಕ ನಿಮ್ನ ವರ್ಗದವರಲ್ಲಿ ಸಾಂಸ್ಕೃತಿಕ ಪುನರುತ್ಥಾನ ತಂದರು. ಅಸ್ಪೃಶ್ಯತಾ ನಿವಾರಣೆಯಲ್ಲಿ ಬಹುದೊಡ್ಡ ಪಾತ್ರ ವಹಿಸಿದರು.

ಮತಭೇದ, ಈಶ್ವರ ಭೇದಗಳಿಂದ ವಿವಿಧ ವರ್ಗಗಳಲ್ಲಿ ಉಂಟಾಗುವ ಸಂಘರ್ಷಮಯ ವಾತಾವರಣವನ್ನು ತಿಳಿಗೊಳಿಸುವುದಕ್ಕಾಗಿ "ಒಂದೇ ಜಾತಿ, ಒಂದೇ ಧರ್ಮ ಒಂದೇ ದೇವರು" ಎಂಬ ವಿಶ್ವಮಾನವ ಧರ್ಮದ ತಿರುಳನ್ನೂ ಸಾಮಾನ್ಯಜನರೂ ತಿಳಿಯುವಂತೆ ಜನಾಂದೋಲನ ಮಾಡಿದ ಪುಣ್ಯಪುರುಷ ನಾರಾಯಣಗುರು.

ಸಮಾಜದ ಎಲ್ಲಾ ಸ್ತರಗಳಿಂದ, ಜಾತಿ ಮತ ಭೇದವಿಲ್ಲದೆ ಬಂದು ತನ್ನ ಶಿಷ್ಯರಾದ ಅನುಯಾಯಿಗಳಿಗೆ ನಾರಾಯಣಗುರು ತನ್ನ ಚಿಂತನೆಯ ಕಾರ್ಯಾನುಷ್ಠಾನವನ್ನು ಮಾಡಲು ಈ ಸಂದೇಶಗಳನ್ನು ನೀಡಿದರು:-

* ಧರ್ಮದ ಸಾಮಾನ್ಯ ತತ್ವಗಳನ್ನು ಜನಸಾಮಾನ್ಯರಿಗೆ ಉಪದೇಶಿಸಿ ಈಶ್ವರನಲ್ಲಿ ಭಕ್ತಿ ಉಂಟಾಗುವಂತೆ ಎಲ್ಲ ಕಡೆಗಳಲ್ಲಿ ಪ್ರಚಾರ ಕೆಲಸ ಮಾಡಬೇಕು.
* ಬಾಹ್ಯಾಂತರ ಶುದ್ಧಿ ಮತ್ತು ತ್ರಿಕರಣ ಶುದ್ಧಿಯ ಅಭ್ಯಾಸಗಳನ್ನು ರೂಢಿಗೆ ಬರುವಂತೆ ಯತ್ನಿಸಬೇಕು.
* ಅಹಿಂಸೆ, ಸ್ನೇಹ, ಒಗ್ಗಟ್ಟು - ಇವುಗಳ ಕುರಿತು ಜ್ಞಾನವನ್ನು ಜನರಿಗೆ ಬೌದ್ಧಿಕ ಚಿಂತನೆಯ ಮೂಲಕ, ಅನುಷ್ಠಾನದ ಮೂಲಕವೂ ವ್ಯಕ್ತಪಡಿಸಬೇಕು.
* ಬಡವರಿಗೆ ವಿದ್ಯಾಭ್ಯಾಸವನ್ನು ವಿದ್ಯಾರ್ಥಿವೇತನದ ಮೂಲಕ ಒದಗಿಸಿಕೊಡಬೇಕು.
* ಆಧ್ಯಾತ್ಮದಲ್ಲಿ ಅಭಿರುಚಿಯುಳ್ಳ ಯುವಕರಲ್ಲಿ ಯೋಗ್ಯತೆಯುಳ್ಳವರಿಗೆ ಸನ್ಯಾಸ ದೀಕ್ಷೆ ಕೊಟ್ಟು ಅವರು ಸಾರ್ವಜನಿಕ ಹಿತಕಾರಿಯಾದ ಕೆಲಸಗಳನ್ನು ಮಾಡುವಂತೆ ಅನುಕೂಲತೆಗಳನ್ನು ಮಾಡಬೇಕು.

ಶ್ರೀ ಗುರುಗಳ ಯಾವತ್ತೂ ಕರೆಗಳನ್ನು ಅಕ್ಷರಶಃ ಪಾಲಿಸುವ ಅನುಷ್ಠಾನಗೊಳಿಸುವ ಬಹುದೊಡ್ಡ ವಿಚಾರವಂತ ವರ್ಗದ ಒಗ್ಗೂಡುವಿಕೆಯಿಂದ ಕೇರಳದಲ್ಲೊಂದು ಯುಗಪರಿವರ್ತನೆಯಾಗಿದೆ.

## ಜಾತಿ, ಧರ್ಮ ಪರಿಷ್ಕರಣ ಬಗ್ಗೆ ಶ್ರೀಗುರುಗಳ ನುಡಿಮುತ್ತುಗಳು

ನಾರಾಯಣಗುರುಗಳಿಂದ ರಚಿತವಾದ ಹಲವಾರು ಕೃತಿಗಳಿಂದಲೂ, ತನ್ನ ಜೀವನಾವಧಿಯಲ್ಲಿ ಹಲವಾರು ಕಡೆ ಪ್ರಕಟಪಡಿಸಿದ ತಾತ್ವಿಕ ಚಿಂತನೆಗಳಿಂದಲೂ ಜಾತಿ, ಧರ್ಮ ಪರಿಷ್ಕರಣದ ಬಗೆಗೆ ಗುರುಗಳ ಹೇಳಿಕೆಗಳು ದಾಖಲಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕ್ರೋಡೀಕರಿಸಬಹುದು:-

* ಮನುಷ್ಯರೆಲ್ಲ ಒಂದೇ ಜಾತಿ, ಅವರದ್ದೆಲ್ಲಾ ಒಂದೇ ಧರ್ಮ ಮತ್ತು ಅವರಿಗೆಲ್ಲ ಒಬ್ಬನೇ ದೇವರು.
* ಜಾತಿ ಮತ ಯಾವುದಾದರೇನು ? ಮನುಷ್ಯ ಒಳ್ಳೆಯವನಾದರೆ ಸಾಕು.
* ಧರ್ಮ, ಭಾಷೆ, ಉಡುಪುಗಳಲ್ಲಿ ಅಂತರವಿದ್ದರೂ ಎಲ್ಲರೂ ಮಾನವ ಜಾತಿಗೆ ಸೇರಿದವರು. ಆದುದರಿಂದ ಈ ಅಂತರಗಳೆಲ್ಲಾ ಸಹಬಾಳ್ವೆಗೆ, ಸಹಭೋಜನಕ್ಕೆ ಅಂತರ್‌ಜಾತಿ ವಿವಾಹಕ್ಕೆ ಅಡ್ಡಿಯಾಗುವುದಿಲ್ಲ.

* ಜಾತಿ, ಧರ್ಮ, ಜನಾಂಗಗಳ ಹೆಸರಲ್ಲಿನ ವ್ಯತ್ಯಾಸಗಳನ್ನು ಮತ್ತು ಅನ್ಯಧರ್ಮಗಳನ್ನು ದ್ವೇಷಿಸುವ ಗೋಡೆಗಳನ್ನು ಕುಟ್ಟಿ ಕೆಡವಬೇಕು. ಏಕೆಂದರೆ ನಾವೆಲ್ಲ ಈ ವಿಶಾಲ ಜಗತ್ತಿನಲ್ಲಿ ಸೋದರರು. ನಮ್ಮ ಬದುಕು ಇದೇ ರೀತಿ ಇರಬೇಕು. ಮಾತ್ಸರ್ಯ ಬುದ್ಧಿಯನ್ನು ಬಿಟ್ಟು ಸೋದರಭಾವದಿಂದ ಒಂದಾಗಿ ಪ್ರೀತಿಯಿಂದ ಬಾಳಬೇಕು.
* ಹಲವು ಪರ್ವತಗಳಿಂದ ಹುಟ್ಟಿ ಹರಿವ ವಿಭಿನ್ನ ನದಿಗಳು ಕೊನೆಗೆ ಸಮುದ್ರದಲ್ಲಿ ಸಂಗಮವಾಗುವಂತೆ ಎಲ್ಲ ಮತಗಳ ಉದ್ದೇಶವೂ ಪರಮಾತ್ಮನಲ್ಲಿ ಸೇರುವುದು.
* ಜಾತಿ ಎನ್ನುವುದು ಮನುಷ್ಯರು ಒಂದಾಗಿ ದಿನಾ ಆಚರಿಸಿಕೊಂಡು ಬಂದ ಒಂದು ವ್ಯವಸ್ಥೆ. ಮಾನವೀಯ ಗುಣವಿರುವವರೆಲ್ಲರಿಗೂ ಒಂದೇ ಜಾತಿ. ಅದುವೇ ಮಾನವ ಜಾತಿ.
* ಗೋವುಗಳ ಗುಣಧರ್ಮ ಒಂದೇ ಆಗಿರುವುದರಿಂದ ಅವುಗಳು ಒಂದೇ ಜಾತಿಗೆ ಸೇರಿದವುಗಳು. ಅದೇ ರೀತಿ ಮನುಷ್ಯರಲ್ಲಿ ಮಾನವತೆ ಇರುವುದರಿಂದ ಮಾನವರೆಲ್ಲ ಒಂದೇ ಜಾತಿ.
* ಎಲ್ಲ ಧರ್ಮಗಳೂ ಮೋಕ್ಷಪ್ರಾಪ್ತಿಯ ತೋರುಗಂಬಗಳು. ಮೋಕ್ಷ ಸಾಧನೆಗೆ ಯಾರೊಬ್ಬರೂ ತನ್ನ ಧರ್ಮವನ್ನು ತ್ಯಜಿಸಬೇಕಾಗಿಲ್ಲ.
* ಜನರೆಲ್ಲ ಒಂದು ಕುಟುಂಬಕ್ಕೆ ಸೇರಿದವರು ಎಂದೇ ಪ್ರತಿಯೊಂದು ಧರ್ಮವೂ ಸಾರಿ ಹೇಳುತ್ತಿದೆ. ಹೀಗಾಗಿ ಎಲ್ಲ ಧರ್ಮಗಳು ಹೇಳುವುದು ಒಬ್ಬನೇ ದೇವನ ಕುರಿತು. ಮನುಷ್ಯರೆಲ್ಲ ಒಂದೇ ಜಾತಿ, ಅವರದ್ದೆಲ್ಲಾ ಒಂದೇ ಧರ್ಮ, ಅವರಿಗಿರುವುದು ಒಬ್ಬನೇ ದೇವರು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.
* ಮತ ಮತ್ತು ಧರ್ಮಗಳ ಸರಿಯಾದ ಅರ್ಥವನ್ನು ತಿಳಿದುಕೊಳ್ಳದೆ ಗೊಂದಲದಲ್ಲಿ ಸಿಕ್ಕಿಹಾಕಿಕೊಳ್ಳುವುದರಿಂದಲೇ ಪ್ರಮಾದಗಳು ಘಟಿಸುವುದು.
* ಧರ್ಮದ ತಿರುಳನ್ನು ತಿಳಿದುಕೊಳ್ಳದೆ ಬರಿಯ ಬಾಹ್ಯಾಚರಣೆಗೆ ಮಾತ್ರ ಮಹತ್ವ ಕೊಡುವುದು, ತಿರುಳನ್ನು ಬಿಸುಟು ಗೆರಟೆಯನ್ನು ಆರಿಸಿಕೊಂಡಂತೆ.

ಆಧುನಿಕ ಯುಗದ ವೈಜ್ಞಾನಿಕ ಚಿಂತನೆಯೊಂದಿಗೆ ಬೆಳೆದು ಬಂದ ವಿಶ್ವಮಾನವ ಸಂಬಂಧವನ್ನು ಇಂದು ಜಗತ್ತು ಪ್ರತಿಪಾದಿಸುತ್ತಿದೆ. ಸಂಯುಕ್ತ ರಾಷ್ಟ್ರದ ಕಲ್ಪನೆಯೇ ವಿಶ್ವಕುಟುಂಬದ ಚಿಂತನೆಯಾಗಿದೆ. ಜಾಗತಿಕ ಚಿಂತಕರ ಸಾಲಿಗೆ ಸೇರಿದ ನಾರಾಯಣಗುರು "ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು" ಎಂಬುದನ್ನೇ ಪ್ರತಿಪಾದಿಸಿದುದು ಮಾತ್ರವಲ್ಲದೆ ಸಂಘರ್ಷವಿಲ್ಲದೆ, ಯಾವ ಸಾವು ನೋವುಗಳಿಲ್ಲದೆ ಅಜ್ಞಾನ, ಅಸಮಾನತೆಗಳೊಡನೆ ಹೋರಾಡಿ ಅವರು ಸಂಪಾದಿಸಿದ ಸಾಮೂಹಿಕ ವಿಜಯವನ್ನು ಅದ್ಭುತಭಾವದಿಂದ ಮಾತ್ರವೇ ನೋಡಲು ಸಾಧ್ಯ. ಜನರ ಶ್ರೇಯಸ್ಸಿಗೆ ಮತ್ತು ಲೋಕಶಾಂತಿಯ ಸಾಧನೆಗಾಗಿ ನಾರಾಯಣಗುರು ಕೇರಳ, ತಮಿಳುನಾಡು, ಕರ್ನಾಟಕ ಕರಾವಳಿಯಲ್ಲಿ ಹಲವು ಬಾರಿ ಸಂಚರಿಸಿದುದಲ್ಲದೆ ಮೂರು ಬಾರಿ ಶ್ರೀ ಲಂಕಾ ಪ್ರವಾಸಮಾಡಿ ಬೌದ್ಧಬಿಕ್ಷುಗಳಲ್ಲಿ ವಿಚಾರವಿನಿಮಯ ಮಾಡಿದರು. ಇದರೊಂದಿಗೆ ಹೊಸ ಹೊಸ ಮಠ ಮಂದಿರಗಳನ್ನು ಸ್ಥಾಪಿಸುತ್ತಾ ತಾನು ಕಂಡುಕೊಂಡ ಸತ್ಯಧರ್ಮದ ಪ್ರಚಾರವನ್ನು

ಜನಮನದಲ್ಲಿ ಹರಡಿದರು. ಕಾಂಚಿಪುರಂನಲ್ಲಿ ಸ್ಥಾಪಿಸಿದ "ಸೇವಾಶ್ರಮ ಮಠ" ಮತ್ತು ಮದ್ರಾಸಿನ ಚಿಂತಾದ್ರಿಯಲ್ಲಿರುವ "ಅದ್ವೈತಾಶ್ರಮ" ಎಂಬ ಮಠ ಇವುಗಳಲ್ಲಿ ಪ್ರಾಮುಖ್ಯವಾದುದು. ಅಲ್ವೆಯಲ್ಲಿ ಸ್ಥಾಪಿಸಿದ ಅದ್ವೈತ ಆಶ್ರಮದಲ್ಲಿ ಎಲ್ಲಾ ವರ್ಗದ ಎಲ್ಲಾ ಜಾತಿಯ, ಎಲ್ಲಾ ಧರ್ಮದ ವಿದ್ಯಾರ್ಥಿಗಳು ಅಧ್ಯಯನವನ್ನು ಮಾಡುತ್ತಿರುವುದನ್ನು ನೋಡಿದರೆ ಶ್ರೀ ಗುರು ತಾತ್ವಿಕ ವಿಚಾರಗಳಿಗೆ ಪ್ರಾಮುಖ್ಯತೆ ಕೊಟ್ಟಷ್ಟೇ ಅದರ ಕಾರ್ಯಾನುಷ್ಠಾನಕ್ಕೂ ಬಹಳಷ್ಟು ಒತ್ತುಕೊಟ್ಟಿರುವುದನ್ನು ಕಾಣಬಹುದು.

"ಶ್ರೀ ನಾರಾಯಣ ಧರ್ಮ ಸಂಘಂ" ಸ್ಥಾಪನೆ ಮಾಡಿದಂದು ಅದರ ಉದ್ದೇಶ ವನ್ನು ತಿಳಿಸಿದ ಗುರುಗಳ ದೂರದರ್ಶಿತ್ವದ ಅರಿವು ನಮಗಾಗುವುದು. "ಧರ್ಮ ಹಾಗೂ ಸಮಾಜೋದ್ಧಾರಕ್ಕೆ ಸಂಬಂಧಿಸಿದ ಕಾರ್ಯಕಲಾಪಗಳಲ್ಲಿ ಸರ್ವಸಂಗ ಪರಿತ್ಯಾಗಿಗಳಾದ ಸನ್ಯಾಸಿಗಳು ಭಾಗವಹಿಸಿದರೆ ಸಮಾಜ ಕಲ್ಯಾಣ ನಿಶ್ಚಯವಾಗಿಯೂ ಸಾಧ್ಯ. ಸ್ವಾರ್ಥಮುಕ್ತರಾಗಿ ಲೋಕ ಕಲ್ಯಾಣಕ್ಕಾಗಿ ಟೊಂಕಕಟ್ಟಿ ನಿಂತಿರುವ ಸನ್ಯಾಸಿಯ ಸಕ್ರಿಯ ಪಾತ್ರದಿಂದ ಸಮಾಜದಲ್ಲಿ ಧರ್ಮವು ನೆಲೆಗೊಳ್ಳುತ್ತದೆ. ಇಂತಹ ಸನ್ಯಾಸಿಗಳನ್ನು ಸೃಷ್ಟಿಸುವುದೇ ಶ್ರೀ ನಾರಾಯಣ ಧರ್ಮ ಸಂಘದ ಉದ್ದೇಶ" ಎಂಬುದಾಗಿ ಗುರುಗಳು ಹೇಳಿದರು. ಇಂದು ಕೂಡಾ ಈ ಸಂಸ್ಥೆಯಿಂದ ನಿರಂತರವಾಗಿ ಸೇವಾದೃಷ್ಟಿಯ ಸನ್ಯಾಸಿಗಳು ಅಧ್ಯಾತ್ಮತತ್ವಜ್ಞಾನದಿಂದ ಪ್ರಕಾಶಿತರಾಗಿ ನಾರಾಯಣಗುರುಗಳು ಬೋಧಿಸಿದ "ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು" ಎಂಬ ವಿಶ್ವಚಿಂತನೆಯ ಯಶಸ್ವಿಗಾಗಿ ವಿಶ್ವದಾದ್ಯಂತ ಕಾರ್ಯವೆಸಗುತ್ತಿದ್ದಾರೆ.

## ಸಾಮಾಜಿಕ ಅನಿಷ್ಟಗಳ ನಿವಾರಣೆಗೆ ಶಿಕ್ಷಣವೇ ಮಹದೌಷಧ

ನಾರಾಯಣಗುರುಗಳ ಜೀವಿತ ಕಾಲದಲ್ಲಿ ಸಮಾಜದಲ್ಲಿದ್ದ ಅನಿಷ್ಟಗಳ, ಕಂದಾಚಾರಗಳ ಕುರಿತು ಗುರುಗಳು ಗಾಢವಾಗಿ ಚಿಂತಿಸುತ್ತಿದ್ದರು. ಹೀಗಾಗಿ ಅವರು ಅನಿಷ್ಟಗಳ ನಿವಾರಣೆಗಾಗಿ, ಸಮಾಜಸುಧಾರಣೆಗಳ ಕಡೆಗೂ ಗಮನ ಹರಿಸಿದರು.

ನಮ್ಮಲ್ಲಿರುವ ಹಲವಾರು ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯಗಳಲ್ಲಿ ಸಾಂಕೇತಿಕ ಅರ್ಥಗಳಿವೆಯಾದರೂ, ಧರ್ಮ ಮತ್ತು ಸಂಪ್ರದಾಯದ ಹೆಸರಿನಲ್ಲಿ ನಡೆಯುವ ದುಂದುವೆಚ್ಚವನ್ನು ಅವರು ಸಹಿಸುತ್ತಿರಲಿಲ್ಲ. ಗುರುಗಳ ಶಿಷ್ಯರಾದ ಮಹಾಕವಿ ಕುಮಾರನ್ ಆಶಾನ್ "ವಿವೇಕೋದಯಂ" ಎನ್ನುವ ಪತ್ರಿಕೆಯ ಮೂಲಕ ಸಮಾಜದ ಕಂದಾಚಾರದ ವಿರುದ್ಧ ಬೌದ್ಧಿಕ ಸಮರ ಸಾರಿದರು. ಇದನ್ನು ಸಹಿಸಲಾಗದ ಸಂಪ್ರದಾಯವಾದಿಗಳು ನಾರಾಯಣಗುರುಗಳ ಅನುಮತಿ ಇಲ್ಲದೆ ಆಶಾನ್ ಈ ರೀತಿ ಬರೆಯುತ್ತಿದ್ದಾನೆ ಎಂದು ಆರೋಪಿಸಿದರು. ಸಂಪ್ರದಾಯವಾದಿಗಳಿಗೂ ಗುರುಗಳ ಬಗ್ಗೆ ಅಪಾರ ಆದರವಿತ್ತು. ಇದನ್ನು ಸಮರ್ಥಿಸುವುದಕ್ಕಾಗಿ ಗುರುಗಳು "ಆಶಾನ್ ಅಭಿಪ್ರಾಯ ನನ್ನದೇ ಅಭಿಪ್ರಾಯ" ಎಂದು ಸ್ಪಷ್ಟಪಡಿಸಿದರು. ಆಶಾನ್‌ರವರ ಲೇಖನಿಯ ಓಘದಿಂದಾಗಿ ಶ್ರೀಗುರುಗಳ ಸಮಾಜಸುಧಾರಣೆಯ ಕಾರ್ಯಕ್ಕೆ ರಭಸ ಸಿಕ್ಕಿತು.

**ಸರಳವಿವಾಹ ಪದ್ಧತಿ** : ಆ ಕಾಲದಲ್ಲಿ ಯಜ್ಞೋಪವೀತ ಧರಿಸದ ಹಿಂದುಳಿದ ಜನಾಂಗದವರಲ್ಲಿ ವಿವಾಹ ಪದ್ಧತಿಯಲ್ಲಿ ಪ್ರಾವಿತ್ರ್ಯಬಿಂಬಿಸುವ ಯಾವ ವ್ಯವಸ್ಥೆಯೂ ಇರಲಿಲ್ಲ. ಮದುವೆಯ ಕಾರ್ಯಕ್ರಮ ಮೂರು ನಾಲ್ಕು ದಿನ ನಡೆಯುತ್ತಿದ್ದು ಅನಾವಶ್ಯಕವಾಗಿ ಅದ್ದೂರಿ ವೆಚ್ಚವಾಗುತಿತ್ತು. ಈ ವೆಚ್ಚವನ್ನು ತುಂಬಿಸಲಾರದ ಎಷ್ಟೋ ಕುಟುಂಬಗಳಲ್ಲಿ ಇದೊಂದು ಅಸಾಧ್ಯವಾದರೂ ಮಾಡಲೇಬೇಕಾದ ಸಾಮಾಜಿಕ ಜವಾಬ್ದಾರಿಯಾಗಿತ್ತು, ಎಷ್ಟೋ ಜನರು ಈ ಕಾರ್ಯಕ್ಕಾಗಿ ತಮ್ಮ ಮನೆ, ಆಸ್ತಿಗಳನ್ನು ಮಾರಿಕೊಂಡಾದರೂ ವಿವಾಹ ಕಾರ್ಯವನ್ನು ನೆರವೇರಿಸಬೇಕಾದ ಪ್ರಮೇಯ ಅಂದಿನ ಕಾಲದ ಬಹುದೊಡ್ಡ ಸಮಸ್ಯೆ.

ನಾರಾಯಣಗುರುಗಳು ಅಂದಿನ ಕಾಲದಲ್ಲಿ ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿದ್ದ ವೈದಿಕ ರೀತಿಯ ಅಗ್ನಿಸಾಕ್ಷಿಯಾಗಿ ವಿವಾಹವಾಗುವ ಕ್ರಮವನ್ನು ಹಿಂದುಳಿದ ಈಳವ ಜನಾಂಗದಲ್ಲಿ ಜಾರಿಗೆ ತಂದರು. ಮದುವೆ ಸಮಯ ವೈದಿಕಮಂತ್ರದೊಂದಿಗೆ ಅಗ್ನಿಸಾಕ್ಷಿ ಹಾಗೂ ಮತ್ತಿತರ ಸರಳ ಕ್ರಮಗಳನ್ನು ಅನುಸರಿಸಲು ಪ್ರೋತ್ಸಾಹಿಸಿದರು. "ಶ್ರೀ ನಾರಾಯಣ ಧರ್ಮ ಸಂಘಂ" ಇದರಲ್ಲಿ ತಯಾರಾದ ವೈದಿಕ ಪುರೋಹಿತರ ಮಾರ್ಗದರ್ಶನದಿಂದ ಈ ಸರಳವಿವಾಹ ಪದ್ಧತಿ ನಿಮ್ನಜಾತಿಯವರಲ್ಲೂ ವೈದಿಕ ವಿಧಿವಿಧಾನದಂತೆ ಜರಗುವಂತಾಯಿತು. ಮದುವೆ ಕಾರ್ಯಕ್ರಮ ಮೂರುನಾಲ್ಕು ದಿನ ನಡೆಯುತ್ತಿರುವುದನ್ನು ಬದಲಾಗುವ ಪರಿಸ್ಥಿತಿಗೆ ಅನುಗುಣವಾಗಿ ಗುರುಗಳು ಈ ಸಮಾರಂಭದ ಅವಧಿಯನ್ನು ಅರ್ಧ ಗಂಟೆಗೆ ಇಳಿಸಿ ಶಾಸ್ತ್ರೋಕ್ತ ವಿಧಿವಿಧಾನ ಹತ್ತೇ ನಿಮಿಷದಲ್ಲಿ ಸಾಧ್ಯವೆಂದು ತೋರಿಸಿಕೊಟ್ಟರು.

ಅಂದಿನ ಸಮಾಜದ ಬಹುದೊಡ್ಡ ಸಮಸ್ಯೆಯನ್ನು ನೀಗಿಸುವಲ್ಲಿ ಇದು ಪರಿಣಾಮಕಾರಿಯಾಯಿತು. ಗುರುಗಳ ಆತ್ಮೀಯರಲ್ಲಿ ಹಲವಾರು ಮಂದಿ, ಪ್ರಾರಂಭಿಕ ಹಂತದಲ್ಲಿ, ಮುಂದೆ ಬಂದು ತಮ್ಮ ಮನೆಯಲ್ಲಿ ನಡೆಯುವ ಮದುವೆಯನ್ನು ಸರಳವಾಗಿ ವೈದಿಕ ವಿಧಾನದಲ್ಲಿ ನಡೆಸಿದರು. ಇವರಲ್ಲಿ ಈಳವ ಜಾತಿಯವರು ಮೊತ್ತ ಮೊದಲಿಗರು. ನಂತರ ನಾಯರ್ ಮತ್ತಿತರ ಬ್ರಾಹ್ಮಣೇತರ ವರ್ಗದವರೂ ಈ ವಿಧಾನವನ್ನು ಅನುಸರಿಸತೊಡಗಿದರು. ಅಂದು ಮನೆಯಲ್ಲೇ ಮದುವೆಗಳು ನಡೆಯುತ್ತಿದ್ದು ಕ್ರಮೇಣ ಸರಳವಿವಾಹ ಕ್ರಮದಿಂದಾಗಿ ದೇವಸ್ಥಾನಗಳಲ್ಲಿ ಹೆಚ್ಚು ಹೆಚ್ಚಾಗಿ ನಡೆಯ ತೊಡಗಿತು. ಈಳವರಲ್ಲಿ ಹಿಂದಿನ ಕಾಲದಲ್ಲಿ ಪ್ರಚಲಿತವಾಗಿದ್ದ "ತಾಳಿಕಟ್ಟು" ಎನ್ನುವ ಅರ್ಥಹೀನ ಅಣಕು ಮದುವೆಯನ್ನು ಗುರುಗಳು ನಿಲ್ಲಿಸಿದರು, ಈ ರೀತಿ ಅಣಕು ವಿವಾಹವಾಗುವ ಸಂದರ್ಭಗಳಲ್ಲಿ ಗುರುಗಳು ನೇರ ಮಧ್ಯ ಪ್ರವೇಶಿಸಿ ಹೆತ್ತವರ ಮನ ಒಲಿಸಿ ಇದನ್ನು ತಡೆಗಟ್ಟಲು ಯತ್ನಿಸಿ ಸಫಲರಾದರು. ಸಮಾಜಸುಧಾರಣೆ ವೇದಿಕೆಯ ಭಾಷಣದಿಂದಲ್ಲ ನೇರ ಜನಮನ ಸಂಪರ್ಕದಿಂದ ಮಾತ್ರ ಸಾಧ್ಯವೆಂಬುದಕ್ಕೆ ಗುರುಗಳೊಂದು ದೊಡ್ಡ ನಿದರ್ಶನ.

**ಋತುಸ್ನಾನ - ಮಾನಸಿಕ ಹಿಂಸೆ** : ಹುಡುಗಿ ಪ್ರಾಪ್ತವಯಸ್ಕಳಾದೊಡನೆ, ಮೊದಲಬಾರಿ ಋತುವತಿಯಾದಾಗ ಅವಳನ್ನು ಕತ್ತಲು ಕೋಣೆಯಲ್ಲಿ ಕೂಡಿಹಾಕಿ, ಆ ಮೇಲೆ

ಸಾರ್ವಜನಿಕವಾಗಿ ಕೆಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಕ್ರಮ ಹಿಂದುಳಿದ ಜನಾಂಗದವರಲ್ಲಿ ಸರ್ವತ್ರ ಜಾರಿಯಲ್ಲಿತ್ತು. ಈ ಸಮಾರಂಭವನ್ನು ಏರ್ಪಡಿಸದಿದ್ದರೆ ತನ್ನದೇ ಸಮಾಜದವರಿಂದ ತುಚ್ಛೀಕಾರ. ಇದೊಂದು ಸಾಮಾಜಿಕ ಅನಿವಾರ್ಯತೆ. ಇದರಿಂದ ಹೊರಬರುವಂತಿಲ್ಲ. ಗುರುಗಳು ಈ ಸಂದರ್ಭದಲ್ಲಿ ಹೆಣ್ಣುಮಕ್ಕಳು ಅನುಭವಿಸಬಹುದಾದ ಮಾನಸಿಕ ವೇದನೆಯನ್ನು ಅರ್ಥಮಾಡಿಕೊಂಡರು. ಈ ಅರ್ಥಹೀನ ಕ್ರಮವನ್ನು ಕೊನೆಗೊಳಿಸುವಲ್ಲಿ ಪ್ರಯತ್ನಿಸಿ ಯಶಸ್ವಿಯಾದರು. ಈ ರೀತಿಯ ಸಂಪ್ರದಾಯಗಳಿಗಾಗಿ ಬಡವರು ಕೂಡಾ ವಿಪರೀತ ಖರ್ಚು ಮಾಡಬೇಕಾಗುತ್ತಿತ್ತು. ಸಾಲಮಾಡಿ ಹಬ್ಬದ ಊಟ ಉಂಡಂತೆ ಎಂಬ ಪರಿಸ್ಥಿತಿ ಜನಸಾಮಾನ್ಯರದ್ದಾಗಿತ್ತು. ಇದರ ನಿವಾರಣೆಯು ಮೊದಲು ಈಳವರಲ್ಲೂ ಹಾಗೂ ಕ್ರಮೇಣ ನಾಯರ್ ಜನಾಂಗದವರಲ್ಲೂ ಮತ್ತು ಇನ್ನಿತರ ಜಾತಿಗಳ ಮೇಲೂ ಪ್ರಭಾವ ಬೀರಿ ಈ ಸುಧಾರಣೆ ಯಶಸ್ಸನ್ನು ಕಂಡಿತು.

## ಸಂಘಟನೆಯಿಂದ ಬಲಯುತರಾಗಿರಿ, ವಿದ್ಯಾರ್ಜನೆಯಿಂದ ಸ್ವತಂತ್ರರಾಗಿರಿ

ಸಂಖ್ಯೆಯಲ್ಲಿ ಅತ್ಯಂತ ಚಿಕ್ಕದಾದ ಹಲವು ಹಿಂದುಳಿದ ಸಮಾಜದ ಜಾತಿವರ್ಗಗಳು ಕೇರಳದಲ್ಲೂ, ಕರ್ನಾಟಕ ಕರಾವಳಿಯಲ್ಲೂ ಇದ್ದವು. ಬಹುಸಂಖ್ಯಾತರಾಗಿದ್ದೂ ತಮ್ಮ ಜಾತಿವರ್ಗದಲ್ಲೇ ಬೇರೆಬೇರೆಯಾಗಿ ವರ್ಗೀಕರಿಸಲ್ಪಟ್ಟ ಈಳವ ಜನಾಂಗವೂ ಹಿಂದುಳಿದವರೇ ಆಗಿದ್ದರು. ಕರ್ನಾಟಕ ಕರಾವಳಿಯ ಬಿಲ್ಲವರೂ ಈ ವರ್ಗಕ್ಕೆ ಸೇರಿದವರು. ಒಗ್ಗಟ್ಟಿನಿಂದಿರದ, ಸಂಘಟಿಕರಾಗಿ ತಮ್ಮ ಅಭ್ಯುದಯದ ಬಗ್ಗೆ ಚಿಂತಿಸದ ಈ ಜನಸಮುದಾಯ ನಿರಂತರ ತುಳಿತಕ್ಕೊಳಗಾಗುತಿತ್ತು. ಜಾತೀಯತೆಯ ಅನಿಷ್ಟಗಳಿಂದ ಜನರಿಗಾಗುವ ಹಾನಿಯನ್ನು ಗುರುಗಳು ಮನಗಂಡರು. ಅದರ ಕುರಿತು ಗಾಢವಾಗಿ ಚಿಂತಿಸಿದರು. ಜಾತ್ಯತೀತ ಸಮಾಜವೊಂದನ್ನು ರೂಪಿಸುವ ಅಗತ್ಯವಿದೆಯಾದರೂ ವೈಚಾರಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಸಮಾಜದಲ್ಲಿ ಹಿಂದುಳಿದ ಘಟಕವು ಉತ್ಥಾನವನ್ನು ಪಡೆಯದೆ ಅದು ಅಸಾಧ್ಯವೆಂದು ಗುರುಗಳು ತಿಳಿದಿದ್ದರು. ತನ್ನ ಕಾಲಮೇಲೆ ತಾನೇ ನಿಲ್ಲುವಂತಾಗಲು, ತನ್ನ ಮನೆಯ ದೀಪವನ್ನು ತಾನೇ ಬೆಳಗಿಸುವಂತಾಗಲು ಈ ಹಿಂದುಳಿದ ವರ್ಗಗಳು ತಮ್ಮ ಅಭಿವೃದ್ಧಿಗಾಗಿ ಸಂಘಟಿತರಾಗಬೇಕೆಂದು ಕರೆಕೊಡುತ್ತಾ -

**"ಸಂಘಟನೆಯಿಂದ ಬಲಯುತರಾಗಿರಿ**
**ವಿದ್ಯಾರ್ಜನೆಯಿಂದ ಸ್ವತಂತ್ರರಾಗಿರಿ"**

ಎಂಬ ಕರೆಯನ್ನು ಕೊಟ್ಟರು. ಶಂಖನಾದದಂತೆ ಪಸರಿಸಿದ ಈ ಸಂದೇಶ ಕೇರಳದಾದ್ಯಂತ ಹಾಗೂ ಕರ್ನಾಟಕದ ಕರಾವಳಿಯಾದ್ಯಂತ ಹಿಂದುಳಿದವರ ಜನಜೀವನದಲ್ಲಿ ಪವಾಡಸದೃಶ್ಯ ಪರಿಣಾಮವನ್ನು ಬೀರಿದೆ. ತಮ್ಮ ಉದ್ಧಾರಕ್ಕಾಗಿ ಇನ್ನೊಬ್ಬರನ್ನು ಅವಲಂಬಿಸುವ 1ಯೋಚನೆಯಿಂದ ಹೊರಬಂದು ಹಿಂದುಳಿದ ಜನಾಂಗ ಸಂಘಟಿತರಾಗಿ ಉತ್ಥಾನದ

ಪಥದೆಡೆಗೆ ಸಾಗಲು ಪ್ರೇರಣೆ ನೀಡಿದ ಮಹಾನ್ ಕರೆಯಾಗಿ ಜನ ಮನಗಂಡರು. ಇದರ ಪರಿಣಾಮವಾಗಿ ಹಿಂದುಳಿದ ವರ್ಗ ಈಗ ಸಂಘಟಿತರಾಗಿ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶಾಲವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರಿಯುತ್ತಿದೆ. ಗೀತೋಕ್ತಿಯಾದ 'ಉದ್ಧರೇ ತಾತ್ಮಾನಾತ್ಮಾನಂ' ಎಂಬ ತಾತ್ವಿಕ ವಿಚಾರವನ್ನು ಸಾಕಾರಗೊಳಿಸಿದ ಕೀರ್ತಿ ನಾರಾಯಣಗುರುಗಳಿಗೆ ಸೇರಿದೆ.

ಸಂಘಟಿತರಾಗಿ ಬಲಯುತರಾಗುವ ಜೊತೆಗೆ ವಿದ್ಯಾರ್ಜನೆಗೆ ಒತ್ತುಕೊಡುವ ಪ್ರೇರಣೆಯಿಂದ ಹಿಂದುಳಿದ ಜನಾಂಗದ ಬಹುತೇಕ ಮಂದಿ ಪ್ರತಿಭಾವಂತರು ಸಮಾಜದಲ್ಲಿ ಮೂಡಿ ಬಂದಿದ್ದಾರೆ. ಕೇರಳದಲ್ಲಂತೂ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಇಂದು ಇಂಥವರು ಕಂಡುಬರುತ್ತಿದ್ದಾರೆ. ವೈದ್ಯರಾಗಿ, ಇಂಜಿನಿಯರ್‌ಗಳಾಗಿ, ಸಾಹಿತಿಗಳಾಗಿ, ರಾಜಕೀಯ ಧುರೀಣರಾಗಿ, ಕಲಾಕಾರರಾಗಿ, ಸಾಂಸ್ಕೃತಿಕ ರಂಗದಲ್ಲಿ, ಅಧ್ಯಾತ್ಮಕ್ಷೇತ್ರದಲ್ಲಿ ಗುರುತಿಸುವಂತಹ ಪ್ರತಿಭಾವಂತರು ಕೇರಳಾದ್ಯಂತ ಹಿಂದುಳಿದ ವರ್ಗದಿಂದ ಮೂಡಿಬಂದಿದ್ದಾರೆ. ಶತಮಾನಗಳಿಂದ ತೂಕಡಿಸುತ್ತಿದ್ದ ಜನವರ್ಗ ಎಚ್ಚೆತ್ತು ಸಂಸ್ಕಾರಯುಕ್ತ ಸಮಾಜದೊಂದಿಗೆ ಮುಂದುವರಿಯುವಂತಹ ಮೌನಸಂಕ್ರಾಂತಿ ನಾರಾಯಣಗುರುಗಳು ಸಾಧಿಸಿದ ಮಹಾಸಫಲತೆ. ಅವರು ಜನಿಸಿ ಒಂದೂವರೆ ಶತಮಾನ ಕಳೆದರೂ ಈಗಲೂ, ಇನ್ನಷ್ಟು ಕಾಲವೂ ಈ ದೃಷ್ಟಾರನ ಜೀವನದೃಷ್ಟಿ ಸಮಾಜಕ್ಕೆ ಮಾರ್ಗದರ್ಶಕವಾಗಲಿದೆ.

ಜ್ಞಾನ ವಿಕಾಸವಾಗದೆ ಸಾಮಾಜಿಕ ಅನಿಷ್ಟಗಳ ನಿವಾರಣೆ ಕಷ್ಟ ಸಾಧ್ಯ. ಜ್ಞಾನವಿಕಾಸಕ್ಕೆ ಶಿಕ್ಷಣವೊಂದೇ ಸಾಧನ. ಪರಿಸ್ಥಿತಿಗೆ ಹೊಂದಿಕೊಳ್ಳುವ ಶಿಕ್ಷಣವೊಂದೇ ಪ್ರಗತಿಯ ಅಡಿಗಲ್ಲು ಎಂದು ಗುರುಗಳು ಕಂಡುಕೊಂಡಿದ್ದರು. ಆಧುನಿಕ ಶಿಕ್ಷಣದ ಬಗ್ಗೆ ತುಂಬಾ ಒಲವು ತೋರುತ್ತಿದ್ದರು. ಎಲ್ಲಾ ಸಮಾಜದಲ್ಲೂ ಪ್ರತಿಭೆಗಳಿವೆ. ಸರಿಯಾದ ಶಿಕ್ಷಣ ಹಾಗೂ ಮಾರ್ಗದರ್ಶನ ದೊರೆತರೆ ಅವರು ಸಮಾಜದ ಅಮೂಲ್ಯ ಸೊತ್ತುಗಳಾಗುವ ಎಲ್ಲಾ ಸಾಧ್ಯತೆ ಇವೆ. ಆರ್ಥಿಕ ತೊಂದರೆಯಿಂದಾಗಿ ಇಂತಹ ಪ್ರತಿಭೆಗಳು ಬೆಳಕಿಗೆ ಬಾರದೆ ಹೋದಾಗ ಸಂಘಟಿತ ಸಮಾಜ ಹಾಗೂ ಸಿರಿವಂತರು ಇಂಥ ಎಳೆಯರಿಗೆ ನೆರವಾಗಬೇಕು, ಎನ್ನುವುದು ಗುರುಗಳ ಅಭಿಪ್ರಾಯ. ಗುರುಗಳ ಪ್ರೇರಣಾದಾಯಕ ಬೋಧನೆಯಿಂದ ನೂರಾರು ಸಂಘಟನೆಗಳೂ ಹಲವಾರು ಶಿಕ್ಷಣ ಸಂಸ್ಥೆಗಳು ಮೂಡಿಬಂದು ಸಮಾಜಸುಧಾರಣೆಯ ದೀಪಸ್ತಂಭದಂತೆ ಕಾರ್ಯಪ್ರವೃತ್ತವಾಗಿವೆ.

**ಮಹಿಳೆಯರ ಬಗ್ಗೆ ಹಿತಚಿಂತನೆ:** ಮಹಿಳೆಯರನ್ನು ಯಾವ ಸಮಾಜವೂ ಕಡೆಗಣಿಸಬಾರದು ಎನ್ನುವುದು ಗುರುಗಳ ನಿಲುವಾಗಿತ್ತು. ಹೀಗಾಗಿ ಹುಡುಗಿಯರ ಓದಿಗೂ ಗಮನಹರಿಸಬೇಕೆಂದು ಒತ್ತು ನೀಡಿದರು. ಪ್ರಸಕ್ತ ಸಮಾಜದಲ್ಲಿ ಇದೊಂದು ಸಮಸ್ಯೆಯಾಗದಿರಬಹುದು ಆದರೆ ಒಂದೂವರೆ ಶತಮಾನದ ಹಿಂದೆ ಹಿಂದುಳಿದ ಜನಾಂಗದ ಮಹಿಳೆಯರೆಲ್ಲರೂ ಶೇಕಡಾನೂರು ನಿರಕ್ಷರಕುಕ್ಷಿಗಳು. ಸುಲಭವಾಗಿ ಶೋಷಣೆಗೆ, ದೌರ್ಜನ್ಯಕ್ಕೆ ಒಳಗಾಗುವ ಪರಿಸ್ಥಿತಿ ಇದ್ದ ಆ ಕಾಲದಲ್ಲಿ ಗುರುಗಳ ನಿಲುವು ಎಷ್ಟು ಪುರೋಗಾಮಿಯಾಗಿತ್ತು ಎಂದು ಮನವರಿಕೆಯಾಗುವುದು. ಅಂದಿನ ಕಾಲದಲ್ಲೇ ಗುರುಗಳು ಶಿಕ್ಷಣ ಸೌಲಭ್ಯ ಸಾರ್ವತ್ರಿಕವಾಗಬೇಕು, ವಯಸ್ಕರ ಶಿಕ್ಷಣ ಮತ್ತು

ಗ್ರಂಥಾಲಯಗಳ ವಿಸ್ತೃತ ಸೌಲಭ್ಯ ಅಗತ್ಯ ಎಂದರು. ಹೊಸ ಹೊಸ ಆವಿಷ್ಕಾರಗಳ ಅರಿವು ಅವಿದ್ಯಾವಂತರಿಗೂ ಆಗಲೇಬೇಕೆಂಬ ಅಭಿಪ್ರಾಯ ಹೊಂದಿದ್ದರು. ಇಂತಹ ಒಂದು ಎಚ್ಚರದ ಕರೆಯಿಂದಾಗಿ ಕೇರಳಾದ್ಯಂತ ಅಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣುಮಕ್ಕಳು ವಿದ್ಯೆ ಪಡೆದುದರ ಪರಿಣಾಮವಾಗಿ ಹಿಂದುಳಿದ ಕುಟುಂಬಗಳಲ್ಲಿ ಇಂದು ಅವಿದ್ಯಾವಂತರ ಸಂಖ್ಯೆ ಕೇರಳದಲ್ಲಂತೂ ನಗಣ್ಯವಾಗಿದೆ. ಕಾಲಚಕ್ರದ ಬದಲಾವಣೆಯನ್ನು ಸಕಾಲಿಕವಾಗಿ ಗುರುತಿಸುವ ಗುಣಗಳಿಂದಾಗಿ, ಹಲವರ ಜೀವನದಲ್ಲಿ ಸಾಧ್ಯವಾಗದ ಸಾಧನೆಯು ನಾರಾಯಣಗುರುಗಳ ಜೀವನದಲ್ಲಿ ಯಶಸ್ವಿಯಾಗಿದೆ.

**ಆರ್ಥಿಕ ಸ್ವಾವಲಂಬನೆಯ ಅಗತ್ಯ :** ಆರ್ಥಿಕತೆಯೇ ಪ್ರಧಾನವಾಗಿರುವ ಇಂದಿನ ಸಮಾಜದಲ್ಲಿ ತತ್ವಾದರ್ಶಗಳ ಬೋಧನೆ, ಸಾತ್ವಿಕ ಜೀವನ ಮೌಲ್ಯಗಳ ಅನುಷ್ಠಾನ ಎಷ್ಟು ಪ್ರಸ್ತುತ ಎಂಬ ಬಗ್ಗೆ ಗಾಢವಾಗಿ ಯೋಚಿಸುವ ಕಾಲ ಬಂದಿದೆ. ಇಂತಹ ಪರಿಸ್ಥಿತಿಯನ್ನು ಗುರುಗಳು ಶತಮಾನದ ಹಿಂದೆಯೇ ಗ್ರಹಿಸಿದ್ದರು. ಆರ್ಥಿಕ ಸ್ವಾವಲಂಬನೆ ಇಲ್ಲದೆ ಯಾವ ಸಮಾಜದ ಉನ್ನತಿಯೂ ಅಸಾಧ್ಯ. ಹಸಿದವನ ಕಿವಿಯೊಳಗೆ ತತ್ವಜ್ಞಾನ ಒಳಹೊಕ್ಕದು ಎಂಬ ವಸ್ತುನಿಷ್ಠ ಚಿಂತಕರಾದ ಗುರುಗಳು ವಿದ್ಯೆಯ ಸಹಾಯವಿಲ್ಲದೆ ಆರ್ಥಿಕಮಟ್ಟ ಮೇಲಕ್ಕೇರಲಾರದು ಎಂಬುದನ್ನೂ ಬಲ್ಲವರಾಗಿದ್ದರು. ಹಿಂದುಳಿದ ಸಮಾಜದ ಆರ್ಥಿಕ ಸ್ಥಿತಿ ಅಂದು ಹೀನಾಯವಾಗಿತ್ತು. ಜನಸಮುದಾಯ ಮುಂದೆಬರಲು ಗುಡಿಕೈಗಾರಿಕೆ ಮತ್ತು ಸರಕಾರಿ ಕ್ಷೇತ್ರದ ಉದ್ದಿಮೆಗಳ ಹೆಚ್ಚಳ ಅಗತ್ಯ, ಈ ವಿಷಯದಲ್ಲಿ ಶ್ರೀಮಂತರು ಹೆಚ್ಚಿನ ಶ್ರದ್ಧೆ ವಹಿಸಬೇಕು. ಯಾಂತ್ರಿಕ ಕೈಗಾರಿಕೆಗಳನ್ನು ನಡೆಸಲು ಶ್ರೀಮಂತರಿಗಲ್ಲದೆ ಬಡವರಿಗೆ ಸಾಧ್ಯವಿಲ್ಲ. ಅಭಿವೃದ್ಧಿ ಸಾಧನೆಗೆ ಅನುಕೂಲವಾಗುವ ಮಾರ್ಗಗಳು ತಮ್ಮ ಮುಂದಿದ್ದರೂ ಈ ವಿಷಯದಲ್ಲಿ ಮುಂದೆ ಹೆಜ್ಜೆ ಇಡಲು ಹಿಂದುಳಿದ ಜನರಿಗೆ ಧೈರ್ಯವಿಲ್ಲ. ಈ ಪ್ರದೇಶದಲ್ಲಿ ಸಿಗುವ ತೆಂಗಿನ ನಾರನ್ನು ವಿದೇಶಕ್ಕೆ ಕಳುಹಿಸಿ ರೂಪಾಂತರ ಪಡಿಸಿ ಹೆಚ್ಚಿನ ಬೆಲೆಕೊಟ್ಟು ನಾವೇ ಪುನಃ ಪಡೆಯುತ್ತೇವೆ. ಅವುಗಳನ್ನು ರೂಪಾಂತರ ಮಾಡುವ ಸಾಧನ ಮತ್ತು ಸಾಮರ್ಥ್ಯ ನಮಗಿಲ್ಲ. ಆದುದರಿಂದ ನಮಗೆ ಬೇಕಾದ ವಸ್ತುಗಳನ್ನು ನಾವೇ ತಯಾರಿಸುವಂತಾಗಬೇಕು. ನಮ್ಮ ಮಕ್ಕಳನ್ನು ಕೈಗಾರಿಕೆಯಲ್ಲಿ ತರಬೇತುಗೊಳಿಸುವುದು ನಮ್ಮಲ್ಲಿನ ಶ್ರೀಮಂತರ ಕೆಲಸ. ಶ್ರೀಮಂತರು ಇಂಥ ಯೋಜನೆಗಳಿಗೆ ಭಂಡವಾಳ ಹೂಡುವುದು ಅಗತ್ಯ ಎಂದು ಹೇಳುತ್ತಿದ್ದರು. ಗುರುಗಳು ಎಷ್ಟೊಂದು ವಾಸ್ತವವಾದಿಯಾಗಿದ್ದರು ಎಂದು ಇದರಿಂದ ಗೊತ್ತಾಗುವುದು. ವಿಶೇಷವೇನೆಂದರೆ ಗುರುಗಳು ಹೇಳಿದ ಮಾತುಗಳನ್ನು ಗಾಳಿಗೆ ತೂರದೆ ಅದನ್ನು ಅನುಷ್ಠಾನಗೊಳಿಸಬಲ್ಲ ಬಹುದೊಡ್ಡ ಜನವರ್ಗ ಕೇರಳದಲ್ಲಿ ಗುರುಗಳ ಅಭಿಮಾನಿಗಳಾಗಿ ಬೆಳೆದುಬಂದಿತ್ತು. ಗುರುಗಳು ಪ್ರೇರಣೆ ನೀಡಿದ ದಿಕ್ಕಿನಲ್ಲಿ ರಭಸದಿಂದ ಮುನ್ನುಗ್ಗಬಲ್ಲ ವಿಚಾರವಂತರು ಕಂಡು ಬಂದಿದ್ದರು.

## ಷೋಡಶ ಸಂಸ್ಕಾರಗಳಲ್ಲಿ ಆಡಂಬರ ವರ್ಜ್ಯ

ಕೇರಳದ ಸಮಾಜದಲ್ಲಿ ಆಚರಣೆಯಿದ್ದ ಹಲವಾರು ಅನಿಷ್ಟಗಳನ್ನು, ಕಂದಾಚಾರವನ್ನೂ ಹೋಗಲಾಡಿಸುವಲ್ಲಿ ಶ್ರೀಗುರುಗಳು ಆಹೋರಾತ್ರಿ ಓಡಾಡಿದರು. ಈಳವ ಸಮಾಜಕ್ಕೆ ಅದರ ಉನ್ನತಿಗಾಗಿ ಕೊಟ್ಟ ಸಲಹೆಗಳು ಎಲ್ಲ ಸಮಾಜದವರೂ ಅನುಸರಿಸಿದರು. ಪ್ರಸ್ಥ, ಮದುವೆ, ಶ್ರಾದ್ಧ ಇತ್ಯಾದಿ ವೈದಿಕ ಕಾರ್ಯಗಳಲ್ಲಿ ಕೆಲವು ನಿರರ್ಥಕವಾದ ಆಡಂಬರಗಳನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವುದರಲ್ಲಿ ಗುರುಗಳು ಸದಾ ನಿರತರಾಗಿದ್ದರು. Nobleness Enkindleth Nobelness - ಘನವಿಚಾರವು ಘನಸ್ತಿಕೆಯನ್ನೇ ಬೆಳಗಿಸುತ್ತದೆ ಎಂಬ ಇಂಗ್ಲೀಷ್ ಗಾದೆಯಂತೆ ಶ್ರೀ ಗುರುಗಳ ಸಮಾಜಸುಧಾರಣಾ ಚಿಂತನೆ ಜನರಲ್ಲಿ ವಿಚಾರ ಪ್ರಚೋದನೆಯನ್ನು ಪ್ರೇರೇಪಿಸಿತು.

ವಿಧವಾ ವಿವಾಹಕ್ಕೆ ನಾರಾಯಣಗುರು ಪ್ರೋತ್ಸಾಹ ನೀಡಿದರು. ಮದುವೆಯಾದ ಮೇಲೆ ಗಂಡನು ಮರಣಹೊಂದಿದರೆ ಅಥವಾ ವಿವಾಹ ವಿಚ್ಛೇದನೆ ಪಡೆದರೆ, ಆಬಳಿಕ ಸ್ತ್ರೀಯರು ಶೃಂಗಾರ ಮಾಡದೆ, ಸ್ವಾಭಾವಿಕವಾಗಿರಬೇಕು. ಆದರೆ ಪುನರ್ವಿವಾಹ ಮಾಡಿಕೊಂಡು ತಾಳಿಯನ್ನು ಧರಿಸಬಹುದು. ಪುನರ್‌ವಿವಾಹವಾದ ನಂತರ ಹಿಂದಿನಂತೆಯೇ ಸಂತೋಷವಾಗಿ ಸಂಸಾರಜೀವನ ಮಾಡುವಂತಾಗಬೇಕು.

ಬಹುಪತ್ನಿತ್ವವನ್ನು ನಿಲ್ಲಿಸಬೇಕೆಂಬ ಕಟ್ಟುನಿಟ್ಟಾದ ಎಚ್ಚರ ಹಾಗೂ ನಿಯಮವನ್ನು ಪಾಲಿಸಿಕೊಂಡು ಬರುವಂತೆ ಶ್ರೀಗುರು ಕರೆಕೊಟ್ಟರು. ಬಹುಪತ್ನಿತ್ವ ಒಂದು ಪ್ರತಿಷ್ಠೆ ಎಂದೇ ಬಗೆದಿದ್ದ ಅಂದಿನ ಸಮಾಜದಲ್ಲಿ ಅದೊಂದು ತಪ್ಪು ಎಂಬ ಅಂತಸಾಕ್ಷಿಯು ಇಲ್ಲದ ಜನರಲ್ಲಿ ವಿಚಾರ ಪ್ರಚೋದನೆಗೆ ಈ ಕರೆ ತಿರುವು ನೀಡಿತು.

ಅಳಿಯ ಸಂತಾನ ಪದ್ಧತಿ ಬಹಳಷ್ಟು ಅನುಷ್ಠಾನದಲ್ಲಿದ್ದ ಕೇರಳದ ಸಮಾಜದಲ್ಲಿ ಅದೊಂದು ನಿರರ್ಥಕ, ಅನರ್ಥ ಪದ್ಧತಿಯಾಗಿ ಬಹಳಷ್ಟು ಸಮಸ್ಯೆಗಳಿಗೆ ಕಾರಣವಾಗಿತ್ತು. ಅಳಿಯ ಸಂತಾನ ಪದ್ಧತಿಯಂತೆ ಒಬ್ಬನ ಮರಣಾನಂತರ ಆತನ ಸಂಪತ್ತು, ಆಸ್ಥಿಯೆಲ್ಲಾ ಆತನ ಸಹೋದರಿಯರಿಗೆ ಸೇರಬೇಕಾಗುವುದು ಕ್ರಮ. ಅಳಿಯ ಸಂತಾನ ಪದ್ಧತಿಯನ್ನು ರದ್ದುಪಡಿಸಬೇಕೆಂದು ಶ್ರೀಗುರು ತಿಳಿಸಿ ಹೇಳಿದರು. ಒಬ್ಬನ ತರುವಾಯ ಆತನ ಬದುಕು ಭಾಗ್ಯಗಳು ಹೆಂಡತಿ ಮಕ್ಕಳಿಗೆ ಸೇರಬೇಕು, ಇಲ್ಲದಿದ್ದರೆ ವಿವಾಹ ನಿರರ್ಥಕವಾಗುತ್ತದೆ ಎಂದು ಬೋಧಿಸಿದರು. ಇಂತಹ ವಿಚಾರಗಳ ಬಗ್ಗೆ ಯೋಚನೆಯನ್ನೇ ಮಾಡದೆ, ಮೂಕವೇದನೆ ಅನುಭವಿಸುತ್ತಿದ್ದ ಜನರ ಬಗ್ಗೆ ಅದರಲ್ಲೂ ಆಸ್ತಿ ವಿಚಾರದಲ್ಲಿ ಸ್ವಾರ್ಥಿಗಳಾದ ಜನರಲ್ಲಿ ವಿಚಾರಪ್ರಚೋದನೆ, ಸುಧಾರಣೆ ಎಷ್ಟು ಕಷ್ಟದ ಕೆಲಸ ಎಂಬ ಬಗ್ಗೆ ನಾವು ತಿಳಿಯಬೇಕು. ಮುಂದೆ ಕ್ರಮೇಣ ಸರಕಾರವೇ ಈ ಬಗ್ಗೆ ಧೃಢವಾದ ನಿಲುವನ್ನು ತಳೆದು ಈ ಪದ್ಧತಿ ರದ್ದಾಯಿತಾದರೂ ಇದರ ಕುರಿತು ಪ್ರಥಮವಾಗಿ ಚಿಂತಿಸಿದವರು ನಾರಾಯಣಗುರು.

ಇದೇ ರೀತಿ ಜನಸಾಮಾನ್ಯರನ್ನು ಬಾಧಿಸುತ್ತಿದ್ದ ಹಲವಾರು ಸಾಮಾಜಿಕ ಅನಿಷ್ಟಗಳ ನಿವಾರಣೆಗಾಗಿ ನಾರಾಯಣಗುರು ಕಾರ್ಯಪ್ರವೃತ್ತರಾಗಿ ಪ್ರವಾಹದ ಎದುರಿಗೆ ಈಜುವ ಎದೆಗಾರಿಕೆ ತೋರಿದರು.

# ಬದುಕು, ಸಮಾಜ, ಮಾನವ ಜನಾಂಗದ ಬಗ್ಗೆ ನಾರಾಯಣ ಗುರುಗಳ ಚಿಂತನೆ

ನಾರಾಯಣ ಗುರುಗಳ ಬದುಕು, ಅವರು ಬದುಕಿ ಬಾಳಿದ ಸಮಾಜ ಮತ್ತು ಸಮಗ್ರ ಮಾನವ ಜನಾಂಗದ ಕುರಿತು ಅವರ ಚಿಂತನೆ ಅತ್ಯಂತ ಸಂಕೀರ್ಣ ಹಾಗೂ ವೈಶಿಷ್ಟ್ಯಪೂರ್ಣ. ಅವರ ಬದುಕಿನ ಪರಿಚಯವಾದಂತೆ, ಅವರ ಸಾಹಿತ್ಯಕೃತಿಗಳ ಅಧ್ಯಯನಗೈದಂತೆ "ಇವರು ಖಂಡಿತವಾಗಿಯೂ ಎಲ್ಲರಂತಲ್ಲವಲ್ಲಾ !" ಎಂಬ ವಿಚಾರ ನಮ್ಮಲ್ಲಿ ಮೂಡುತ್ತದೆ. ಇದೊಂದು ರೋಚಕವಿಚಾರವಾಗಿ ನಮ್ಮನ್ನು ಚಿಂತನೆಗೆ ಹಚ್ಚುವುದು.

ಮಹಾನ್ ದಾರ್ಶನಿಕನಾದರೂ ಪ್ರಪಂಚದ ವಾಸ್ತವತೆಯನ್ನು ಅರ್ಥೈಸಿಕೊಂಡು, ಜನಸಾಮಾನ್ಯರ, ಬಡಗುಡಿಸಲು ವಾಸಿಗಳ ಮನಸ್ಸನ್ನು ತಟ್ಟಿ ಎಚ್ಚರಗೊಳಿಸುವುದರ ಜೊತೆಗೆ ಸಮಕಾಲೀನ ಜಾಗತಿಕ ಚಿಂತಕರಾದ ಮಹಾತ್ಮಾಗಾಂಧಿ, ಕವಿ ರವೀಂದ್ರನಾಥ ಟಾಗೋರ್, ಆರ್ಯಸಮಾಜದ ಸ್ವಾಮಿ ಶ್ರದ್ಧಾನಂದ, ಫ್ರೆಂಚ್ ತತ್ವಜ್ಞಾನಿ ರೋಮ್ಯಾನ್ ರೋಲ್ಯಾಂಡ್ ಮೊದಲಾದವರಿಂದ ಪ್ರಶಂಸಿಸಲ್ಪಟ್ಟ ನಾರಾಯಣಗುರು ಉದಾತ್ತ ಧ್ಯೇಯವನ್ನು ಅನುಸರಿಸಿ ಶ್ರೇಯಸ್ಸನ್ನು ಪಡೆದವರು ಎಂಬುದಕ್ಕೆ ಅವರ ಜೀವನದ ಹಲವಾರು ಘಟನೆಗಳೇ ಸಾಕ್ಷಿ.

ಮಹಾತ್ಮಾ ಗಾಂಧಿಯವರು 12-3-1925 ರಲ್ಲಿ ಗುರುಗಳನ್ನು ಶಿವಗಿರಿಯಲ್ಲಿ ಭೇಟಿಮಾಡಿದ ನಂತರ "ವೈಕಂ" ಚಳವಳಿ ಹಾಗೂ ಅದಕ್ಕೆ ಪೂರಕವಾಗಿ ಸಾರ್ವಜನಿಕ ಅಭಿಪ್ರಾಯ ಕ್ರೋಢೀಕರಣದೊಂದಿಗೆ ಸಂತಸವನ್ನು ವ್ಯಕ್ತಪಡಿಸುತ್ತಾ ಸಾರ್ವಜನಿಕ ಸಭೆಯಲ್ಲಿ "ಈ ಸುಂದರ ತಿರುವಾಂಕೂರು ರಾಜ್ಯಕ್ಕೆ ನಾನು ಬಂದುದು, ಪೂಜ್ಯ ನಾರಾಯಣ ಗುರುಗಳನ್ನು ಸಂದರ್ಶಿಸಿದ್ದು ನನ್ನ ಜೀವನದ ಸೌಭಾಗ್ಯವೆಂದು ನಾನರಿತಿದ್ದೇನೆ" ಎಂದರು.

ಆಚಾರ್ಯ ವಿನೋಭಾ ಭಾವೆಯವರು ನಾರಾಯಣ ಗುರುಗಳನ್ನು ಗಾಂಧೀಜಿಯೊಂದಿಗೆ ಭೇಟಿಯಾಗಿ ಹೀಗೆ ಹೇಳಿದ್ದಾರೆ "ಭಾರತದಲ್ಲಿ ಕಳೆದ ನೂರು ವರ್ಷಗಳಲ್ಲಿ ಅವತರಿಸಿದ ಐದು ಅಥವಾ ಹತ್ತು ಅವತಾರಗಳಲ್ಲಿ ನಾರಾಯಣಗುರು ಒಬ್ಬರೆಂದು ಪರಿಗಣಿಸಲ್ಪಡುತ್ತಾರೆ. 1925ರಲ್ಲಿ "ವೈಕಂ" ಸತ್ಯಾಗ್ರಹ ಸಂಬಂಧ ನಾನು ಕೇರಳಕ್ಕೆ ಹೋದಾಗ ಅವರನ್ನು ಭೇಟಿ ಮಾಡುವ ಒಂದು ಅವಕಾಶವು ನನಗೆ ಒದಗಿತ್ತು. ಆ ದಿನಗಳಲ್ಲಿ ಅವರು ವರ್ಕಲದಲ್ಲಿ ಇದ್ದರು. ಅಲ್ಲಿ ನಾನು ಅವರೊಂದಿಗೆ ಒಂದೆರಡು ಗಂಟೆಗಳ ಕಾಲ ಮಾತನಾಡಿದ್ದೆ. ಆ ಪರಮ ಪ್ರಾಜ್ಞನ ನೆನಪಿಗೆ ನನ್ನ ವಿನಮ್ರ ವಂದನೆಗಳು".

ರವೀಂದ್ರನಾಥ ಠಾಗೋರ್‌ರವರು ಹೀಗೆ ಅಭಿಪ್ರಾಯ ಪಡುತ್ತಾರೆ - "ನಾನು ಜಗತ್ತಿನ ವಿವಿಧ ಮೂಲೆಗಳಿಗೆ ಪ್ರವಾಸ ಮಾಡಿದ್ದೇನೆ. ಹೀಗೆ ಪ್ರವಾಸ ಮಾಡುವಾಗ ಹಲವಾರು ಮಹರ್ಷಿಗಳನ್ನೂ, ಯೋಗಿಗಳನ್ನೂ ಭೇಟಿಮಾಡುವ ಸುಯೋಗ ನನಗೆ

ಒದಗಿತ್ತು. ಆದರೆ ಆಧ್ಯಾತ್ಮಿಕ ಜ್ಞಾನಸಿದ್ಧಿಯನ್ನು ಪಡೆದವರಲ್ಲಿ ಶ್ರೀ ನಾರಾಯಣ ಗುರುಗಳಂಥವರನ್ನು ನಾನು ಯಾವತ್ತೂ ಭೇಟಿಯಾಗಲಿಲ್ಲ.

ದಿವ್ಯವಾದ ಶೋಭೆಯೊಂದಿಗೆ, ಪ್ರಕಾಶಮಾನವಾಗಿ ಮಿರುಗುವ ಬೆಳಕಿನ ತೇಜಸ್ಸುಳ್ಳ ಆ ಮುಖವನ್ನು ಹಾಗೂ ದೂರ ದಿಗಂತದಲ್ಲಿ ಐಕ್ಯಗೊಂಡಿರುವ ಬಿಂದುವಿನ ಮೇಲೆ ದಿಟ್ಟ ದೃಷ್ಟಿಯನ್ನಿರಿಸಿಕೊಂಡ ಆ ಯೋಗಿಯ ಕಣ್ಣುಗಳನ್ನು ಖಂಡಿತವಾಗಿಯೂ ನಾನು ಯಾವತ್ತೂ ಮರೆಯಲಾರೆ."

ಫ್ರೆಂಚ್ ತತ್ವಜ್ಞಾನಿ ರೋಮ್ಯಾನ್ ರೋಲ್ಯಾಂಡ್ ನಾರಾಯಣ ಗುರುಗಳ ಬಗ್ಗೆ ಈ ರೀತಿ ಅಭಿಪ್ರಾಯ ಪಡುತ್ತಾರೆ.

"Glassnapp does not say anything regarding the new religious manifestations in South India which are not negligible. Such, for example, is the great Guru Sree Narayana, whose beneficient spiritual activity has been exercising its influence during the past fourty years in the State of Travancore on nearly two millions of his followers (He passed away in 1928). His teachings, imbued with the philosophy of Sankara, shows evidence of a striking difference of temperament compared with the mysticism of Bengal of which the effusion of love (Bhakti) inspired in him a certain mistrust. He was, one might say, a "Jnanin" of action, a grand religious intellectual who had a keen living sense of the people and of social necessities. He had contributed greatly to the elevation of the oppressed classes in South India, and his work has been associated at certain times with that of Gandhi."

ಪಶ್ಚಿಮದ ಜನತೆಗೆ, ಅಲ್ಲಿನ ನಾಗರಿಕತೆಗೆ ನಾರಾಯಣ ಗುರುಗಳನ್ನು ರೋಮ್ಯಾನ್ ರೋಲ್ಯಾಂಡ್ ಪರಿಚಯಿಸಿದ್ದು ಹೀಗೆ.

ನಾರಾಯಣಗುರುಗಳ ಕಾಲಾನಂತರ ಹಲವಾರು ಚರಿತ್ರಾರ್ಹ ವ್ಯಕ್ತಿಗಳು ಶಿವಗಿರಿಗೆ ಭೇಟಿಕೊಟ್ಟಾಗ ಅವರ ಬಗ್ಗೆ ತಮ್ಮ ಶ್ಲಾಘನೆಗಳನ್ನು ಪ್ರಕಟಿಸಿದ್ದಾರೆ. ಮಾತ್ರವಲ್ಲದೆ ಗುರುಗಳ ಕಾರ್ಯಶೈಲಿಯಿಂದ ಪ್ರೇರಣೆ ಪಡೆದಿದ್ದಾರೆ. ಅವರಲ್ಲಿ ಪಂಡಿತ್ ಜವಾಹರಲಾಲ್ ನೆಹರೂರವರ ಶ್ಲಾಘನೆ ಹೀಗಿದೆ -

"ಒಬ್ಬ ಮಹಾಪುರುಷನು ಜೀವಿಸಿ, ತನ್ನ ಸಂದೇಶವನ್ನು ಜನರಿಗೆ ನೀಡಿದ ಈ ಸ್ಥಳಕ್ಕೆ ಬಂದಾಗ ನನಗೆ ಬಹಳ ಆನಂದವೆನಿಸುತ್ತದೆ. ಎಲ್ಲಿ ಮಹಾಪುರುಷರು ಜೀವಿಸಿದರೋ, ಆ ಸ್ಥಳ ಒಂದು ದೇವಾಲಯದಂತೆ ಪವಿತ್ರ ಸ್ಥಳವೆನಿಸುತ್ತದೆ. ಆ ಮಹಾ ವ್ಯಕ್ತಿಗಳ ಆಲೋಚನೆಗಳ, ಪ್ರಾರ್ಥನೆಗಳ ಅಲೌಕಿಕ ಸ್ಪಂದನ ಅಲ್ಲಿರುವುದೇ ಅದಕ್ಕೆ ಕಾರಣ. ಶ್ರೀ ನಾರಾಯಣ ಗುರುಗಳು ಇಲ್ಲಿ ಜೀವಿಸಿದರು. ಜಾತಿ ಭೇದ ಮತ್ತು ಮಾನವ ಮಾನವರೊಳಗಿನ ಕೃತಕ ಗೋಡೆಗಳು ಸಲ್ಲದು ಎನ್ನುವ ತಮ್ಮ ಜೀವಿತ ಸಂದೇಶವನ್ನು ಸಾರಿದರು. ಜಾತಿರಹಿತ ವರ್ಣಾಶ್ರಮ ರಹಿತ ಸಮಾಜ ನಿರ್ಮಾಣ ಹೇಗೆ ಸಾಧ್ಯ?

ಇದಕ್ಕೆ ಬಹಳ ಕೆಲಸಗಳಾಗಬೇಕು. ಶ್ರೀ ನಾರಾಯಣಗುರುಗಳು ನೀಡಿದ ಮಾರ್ಗವೇ ಸರಿಯಾದ ಮಾರ್ಗವೆಂದು ನನ್ನ ಅಭಿಪ್ರಾಯ. ಮನಸ್ಸು ಮತ್ತು ಹೃದಯಗಳ ಸರಿಯಾದ ಪರಿವರ್ತನೆಯೇ ಶ್ರೀಗುರು ತೋರಿದ ದಾರಿ.

ಹೃದಯ ಮತ್ತು ಮನ ಪರಿವರ್ತನೆ ಇಲ್ಲದೆ ಎಂತಹ ಬದಲಾವಣೆಯೂ ಕೇವಲ ಮೇಲ್ಮೈಯ ತಾತ್ಕಾಲಿಕ ಬದಲಾವಣೆಯಷ್ಟೇ ಆಗಬಲ್ಲುದು.

ಆ ಮಹಾಪುರುಷನು ಬಾಳಿ, ತನ್ನ ಸಂದೇಶವಿತ್ತ ಈ ಭೂಮಿಗೆ ಬಂದು ಆತನಿಗೆ ನನ್ನ ಶ್ರದ್ಧಾಂಜಲಿಯರ್ಪಿಸಲು ನಾನು ಸಂತೋಷಪಡುತ್ತೇನೆ".

ನಾರಾಯಣಗುರು ಜನ್ಮದಾರಭ್ಯ ತನ್ನ ಸ್ವಭಾವಜನ್ಯ ಸಂಚಿತವಾಸನೆಯಿಂದ ಮತ್ತು ಯೋಗಾಭ್ಯಾಸದ ಮೂಲಕ ಆತ್ಮ ಸಾಕ್ಷಾತ್ಕಾರ ಮಾಡಿದ ಫಲವಾಗಿ ಅವರು ಅಸಾಧಾರಣ ಸಿದ್ಧಿಗಳಿಂದ ಓರ್ವ ಅತಿಮಾನುಷ ವ್ಯಕ್ತಿಯಾಗಿದ್ದರೆಂದು ಅವರ ಕಾಲದಲ್ಲಿ ಜನಸಾಮಾನ್ಯರು ಭಾವಿಸಿದ್ದರು. ಹಾಗಿದ್ದರೂ ಶ್ರೀ ಗುರುಗಳು ತನ್ನ ಸಿದ್ಧಿಗಳನ್ನು ಉದ್ದೇಶಪೂರ್ವಕವಾಗಿ ಲೋಕಕ್ಕೆ ಪ್ರದರ್ಶಿಸಲಿಲ್ಲ. ಅಂತಹ ಅಲೌಕಿಕ ಘಟನೆ ಸ್ವಾಭಾವಿಕವಾಗಿ ಅವರಿಂದ ನಡೆದಾಗ ಅದು ಜನರಲ್ಲಿರುವ ನಂಬಿಕೆಯ ಫಲವೆಂದೇ ಹೇಳುತ್ತಿದ್ದರು.

ಇಷ್ಟಿದ್ದರೂ ಜನಸಾಮಾನ್ಯರೊಡನೆ ತಾನು ಸಾಮಾನ್ಯವ್ಯಕ್ತಿಯಂತೆ ಬೆರೆತು, ಅವರೆಲ್ಲರ ಹಿತಚಿಂತಕನಾಗಿದ್ದು, ಜನರಲ್ಲಿದ್ದ ಉಚ್ಚ ನೀಚ ಭಾವನೆ, ಅದಕ್ಕೆ ಆಧಾರವಾಗಿದ್ದ ಆಚಾರ ವಿಚಾರದಲ್ಲಿದ್ದ ಹುಳುಕುಗಳನ್ನೂ, ಅಸತ್ಯ - ವಂಚನೆಗಳನ್ನೂ ಸ್ಪಷ್ಟವಾಗಿ ತೋರಿಸಿಕೊಟ್ಟರು. ಜಾತಿಭೇದ, ಮತಭೇದ, ಈಶ್ವರ ಭೇದಗಳನ್ನು ಅನುಸರಿಸಿ ಅನರ್ಥಕಾರಿ ನೀಚಕರ್ಮಗಳನ್ನು ಮಾಡಿಕೊಂಡು ಹೋಗುತ್ತಿದ್ದ ಭಾರತೀಯರನ್ನು ಅಜ್ಞಾನದ ಕತ್ತಲೆಯಿಂದ ಉದ್ಧರಿಸುವ ಮಹಾತ್ಕಾರ್ಯವನ್ನು ಮಾಡಿದರು.

ನಾರಾಯಣಗುರುಗಳು ಯಾವತ್ತೂ ಸಮಾಜದಲ್ಲಿನ ಜ್ವಲಂತ ಸಮಸ್ಯೆಗಳಿಗೆ ಬೆನ್ನು ತೋರಿದವರಲ್ಲ. ಹಾಗಾಗಿ ಹಲವು ಸಮಾಜ ಸುಧಾರಣೆಗಳು ಗುರುಗಳ ಪ್ರಭಾವದಿಂದ ನೆರವೇರಿತು. ಸಾಮಾಜಿಕ ಸಮಸ್ಯೆಗಳಿಂದ ಜರ್ಝರಿತವಾದ ಜನಕ್ಕೆ ಸುಧಾರಣೆಯ, ಪರಿವರ್ತನೆಯ ಅವಶ್ಯಕತೆಯಿತ್ತು. ಕಂದಾಚಾರ, ಅಂಧಾನುಕರಣೆ ಮೊದಲಾದ ಸಾಮಾಜಿಕ ಅನಿಷ್ಟಗಳ ಶೃಂಖಲೆಯಿಂದ ಬಂಧಿತರಾಗಿದ್ದ ಜನಸಮುದಾಯ ತಾನಾಗಿಯೇ ಹೊರಬರಲಾರದೆ ಬಿಡುಗಡೆ ಇಲ್ಲದ ಬೇಡಿಯನ್ನು ತೊಟ್ಟು ಅಸಹಾಯಕವಾಗಿತ್ತು. ಇಂತಹ ಸಂಕೀರ್ಣ ಸಂಧಿಕಾಲದಲ್ಲಿ ಋಷಿತುಲ್ಯ ನಾರಾಯಣಗುರು ತನ್ನ ಅಧ್ಯಾತ್ಮಿಕ ಜೀವನಾನುಷ್ಠಾನದಿಂದಲೂ, ಜನಸಾಮಾನ್ಯರೊಡನೆ ಬೆರೆತು ಆಪ್ಯಾಯಮಾನರಾದುದರಿಂದಲೂ, ಸಮಾಜದಲ್ಲಿ ಸರ್ವಗ್ರಾಹಿಯಾದರು. ಆದುದರಿಂದಲೇ ಜನರ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಜೀವನದಲ್ಲೂ ಸುಧಾರಣೆ, ಪರಿವರ್ತನೆ ತರಲು ಗುರುಗಳಿಗೆ ಸಾಧ್ಯವಾಯಿತು.

ಕ್ವಿಲಾನ್ ಬಳಿ ಪೂರವೂರು ಎಂಬಲ್ಲಿ ನಾರಾಯಣ ಗುರುಗಳು ಈಳವರ ಒಂದು ಮಹಾಸಭೆಯಲ್ಲಿ, ಸಮಾಜಸುಧಾರಣೆಯಲ್ಲಿ ಮಹತ್ತರ ಪಾತ್ರವಹಿಸಬಲ್ಲ ಸರಳ

ವಿವಾಹ ಪದ್ಧತಿಯ ಅನುಷ್ಠಾನ ಹಾಗೂ ಅಂಧವಿಶ್ವಾಸ - ಪ್ರಾಣಿಹಿಂಸೆ - ತಾಮಸ ಆರಾಧನೆಯನ್ನು ಕೈಬಿಡಬೇಕೆಂದು ಕರೆಕೊಟ್ಟಾಗ ಜನ ಅದನ್ನು ಸ್ವೀಕರಿಸಿದರು. ಕೇರಳದ ಅಖಿಲ ಸೋದರ ಸಮ್ಮೇಳನದಲ್ಲಿ ನೀಡಿದ ಮದ್ಯವರ್ಜನೆಯ ಚರಿತ್ರಾರ್ಹ ಸಂದೇಶಕ್ಕೆ ಜನ ಸ್ಪಂದಿಸಿದರು, ಸರ್ವಧರ್ಮ ಸಮ್ಮೇಳನವನ್ನು ಅಲ್ವೆಯಲ್ಲಿ ನಡೆಸಿ ಇಡೀ ವಿಶ್ವಕ್ಕೆ ಮಾನ್ಯವಾದ "ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು" ಎಂದು ಸಾರಿದಾಗ ಇಡೀ ಜನಸ್ತೋಮ ಪುಳಕಿತಗೊಂಡಿತು. ಸರ್ವಧರ್ಮದವರೂ ಅದನ್ನು ಮಾನ್ಯಮಾಡಿ ಇಡೀ ಕೇರಳದಲ್ಲಿ ವಿಚಾರಕ್ರಾಂತಿಗೆ ನಾಂದಿಯಾಯಿತು. ತಮಿಳುನಾಡಿನಾದ್ಯಂತ ಬಿರುಸಾದ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡು ರಾಮೇಶ್ವರ, ರಾಮನಾಥಪುರ, ಮಧುರೆ ಮುಂತಾದ ಕ್ಷೇತ್ರಗಳಲ್ಲಿ ಸ್ಥಳೀಯ ಬ್ರಾಹ್ಮಣ ಪೀಠಾಧಿಪತಿಗಳೊಂದಿಗೆ ಸಾಮಾಜಿಕ ಉನ್ನತಿಯ ಬಗ್ಗೆ ಸಮಾಲೋಚನೆ ಮಾಡಿದಾಗ ಉತ್ತಮ ವರ್ಗದ ಈ ಮಂದಿ ಗುರುಗಳ ಬೌದ್ಧಿಕ ಔನ್ನತ್ಯ ಸಾಮಾಜಿಕ ಕಳಕಳಿಯನ್ನು ಮನಗಂಡು ಅವರನ್ನು ಪುರಸ್ಕರಿಸಿದರು, ಧನ್ಯತೆಯನ್ನು ಕಂಡು ತಾವೂ ಕಾರ್ಯತತ್ಪರರಾದರು. ಶ್ರೀಲಂಕಾದ ಬೌದ್ಧಭಿಕ್ಷುಗಳನ್ನು ಮೂರು ಬಾರಿ ಭೇಟಿಯಾಗಿ ದಲಿತೋದ್ಧಾರ ಕಾರ್ಯಕ್ರಮದ ಬಗ್ಗೆ ತಿಳಿಸಿಹೇಳಿದಾಗ ಅವರೆಲ್ಲಾ ಪುಳಕಿತಗೊಂಡು ತಾವು ಕೂಡಾ ನೆರವನ್ನೂ ನೀಡಿದರು. ಪ್ರಾರಂಭದಲ್ಲಿ ಹಿಂದುಳಿದವರಿಗೆ ಕ್ಷೇತ್ರನಿರ್ಮಾಣವನ್ನು ಮಾಡಿ ಸಾಂಸ್ಕೃತಿಕ ಪುನರುತ್ಥಾನದ ನಾಂದಿ ಹಾಡಿದ ಗುರುಗಳು ತನ್ನ ಜೀವನಾವಧಿಯಲ್ಲಿ ಇಡೀ ಕೇರಳ ಹಾಗೂ ಸುತ್ತುಮುತ್ತಲಿನ ಪ್ರಾಂತ್ಯದ ಜನಜೀವನದಲ್ಲಿ ಪರಿವರ್ತನೆಯನ್ನು ತಂದು ಅಸಾಧಾರಣ ಬದುಕನ್ನು ಬದುಕಿ ಯಶ್ಯಶರೀರಿಯಾದರು.

ನಾರಾಯಣಗುರುಗಳು ಜನರ ಬದುಕನ್ನೇ ಬದಲಾಯಿಸಿದವರು. ಅವರ ಸುಧಾರಣಾ ಕಾರ್ಯಗಳಿಂದಾಗಿ ಜನರ ಮಧ್ಯೆ ವೈಷಮ್ಯಗಳು ದೂರವಾಗಿ, ಸಂಘರ್ಷಗಳು ಕಡಿಮೆಯಾದ ಪ್ರಯುಕ್ತ ತಿರುವಾಂಕೂರು ರಾಜ್ಯದ ಸುತ್ತಮುತ್ತಲೂ ಕೋರ್ಟು ಕಚೇರಿಗಳಿಗೆ ಜನರು ಅಲೆಯುವುದು ಬಹಳಷ್ಟು ಕಡಿಮೆಯಾಯಿತು. ಜನರು ಸಣ್ಣಪುಟ್ಟ ವೈಷಮ್ಯಗಳಿಗೆ ಕೋರ್ಟಿಗೆ ಹೋಗದೆ ತಮ್ಮಲ್ಲೇ ತೀರ್ಮಾನಿಸಿದ ನಿಮಿತ್ತ ಕೋರ್ಟುಗಳಲ್ಲಿ ಕೇಸುಗಳೇ ಕಡಿಮೆಯಾದುದನ್ನು ಗುರುತಿಸಿ ತಿರುವಾಂಕೂರು ಹೈಕೋರ್ಟು ಶ್ರೀಗುರುಗಳ ಸಾಮಾಜಿಕ ನ್ಯಾಯ ತೀರ್ಮಾನದ ಬಗ್ಗೆ ಶ್ಲಾಘಿಸಿದ ಸುತ್ತೋಲೆಯೊಂದು ಐತಿಹಾಸಿಕ ದಾಖಲೆಯಾಗಿದೆ.

ಸಮಾಜದಲ್ಲಿ ಒಳ್ಳೆಯ ಬದುಕನ್ನು ಬದುಕಲು ಕಲಿಯುವುದೇ ಒಂದು ಕಲೆ, ಅದಕ್ಕಾಗಿಯೇ ಬದುಕೊಂದು ಕಲೆಯೆಂದರು ಹಿರಿಯರು. ಇದು ಇನ್ನೂ ಕಲಾತ್ಮಕವಾಗಬೇಕಾದರೆ ನಾವು ಹೇಗಿರಬೇಕೆಂಬುದಾಗಿ ಶ್ರೀಗುರು ತಿಳಿಸಿದ್ದು ಮಾತ್ರವಲ್ಲದೆ ನುಡಿದಂತೆ ನಡೆಯುವ ಜನಸಮುದಾಯವನ್ನು ರೂಪಿಸಿದರು. ಬದುಕು ಹೇಗಿರಬೇಕೆಂದರೆ -

* ಅನ್ಯರ ಸಂತೋಷವೇ ತನ್ನ ಸಂತೋಷ. ತನ್ನ ಸಂತೋಷದ ದಾರಿ ಇತರರಿಗೆ ಸಂತಸ ತರುವಂತಿರಬೇಕು.
* ನಮ್ಮೆದೆಯಲ್ಲಿ ದಿವ್ಯ ಜ್ಯೋತಿಯೊಂದಿದೆ, ಅದು ನಮ್ಮ ಒಳ - ಹೊರಗಣ ಎಲ್ಲ ಕ್ರಿಯೆಗಳನ್ನು ಅತ್ಯಂತ ಎಚ್ಚರದಿಂದ ಗಮನಿಸುತ್ತಿರುತ್ತದೆ.

* ಜ್ಞಾನ ಮಾತ್ರ ಸರ್ವತ್ರ ಪ್ರಕಾಶಿಸುತ್ತದೆ. ಬೇರೆ ಯಾವುದೂ ಅಲ್ಲ. ಯಾವುದು ಪ್ರಕಾಶಿಸುವುದಿಲ್ಲವೋ ಅದು ಸತ್ತ ಹಾಗೆ. ಆದುದರಿಂದ ಜ್ಞಾನ ಸಂಪಾದನೆ ನಮ್ಮ ಕರ್ತವ್ಯವಾಗಿರಬೇಕು.
* ತನ್ನಂತೆ ಪರರಿಗೂ ಹಿತವನ್ನು ಬಯಸುವುದು ನಿಜವಾದ ಸಮಾಜ ಸೇವೆ. ಜನಸೇವೆ ನಮ್ಮ ಋಣದ ಹೊರೆ ಹಗುರವಾಗಿಸುವ ಯತ್ನ. ನಾವು ಉಪಕಾರ ಮಾಡುತ್ತೇವೆ ಎನ್ನುವ ಭ್ರಮೆ ಸರಿ ಅಲ್ಲ.
* ಬದುಕು ನಿಂತ ನೀರಾಗಬಾರದು. ನಿರಂತರ ಹರಿಯುತ್ತಿರಬೇಕು. ಆಗ ಮಾತ್ರ ಬದುಕಿನಲ್ಲಿ ಲವಲವಿಕೆ ಉಳಿದುಕೊಳ್ಳಲು ಸಾಧ್ಯ.
* ಒಳ್ಳೆಯ ಗುಣ ಸಂಸ್ಕಾರದಿಂದ ಬೆಳಗುತ್ತದೆ. ಬರಿಯ ಹುಟ್ಟಿನಿಂದ ಯಾರೂ ದೊಡ್ಡವರಾಗುವುದಿಲ್ಲ. ಒಳ್ಳೆಯ ಗುಣದಿಂದ ಉತ್ತಮರಾಗುತ್ತಾರೆ.
* ಆತ್ಮವಿಶ್ವಾಸ ಉಳಿಸಿಕೊಂಡು ಮಿಕ್ಕೆಲ್ಲವನ್ನೂ ಕಳೆದುಕೊಂಡರೂ ಚಿಂತೆಯಿಲ್ಲ. ಏಕೆಂದರೆ ಆತ್ಮವಿಶ್ವಾಸದ ಬಲದಿಂದ ಎಲ್ಲವನ್ನೂ ಸಂಪಾದಿಸಬಹುದು.
* ಸಮಾಜದಲ್ಲಿ ಜೀತ ಪದ್ಧತಿ ಅತ್ಯಂತ ಹೇಯ ಸಂಪ್ರದಾಯ, ಇಲ್ಲಿ ಮನುಷ್ಯಮಾತ್ರನು. ದರ್ಪದಿಂದ ತನ್ನಂಥ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಾನೆ.
* ಹೆದರಿಕೆ ಮತ್ತು ಪಾಪಗಳ ಹುಟ್ಟಿಗೆ ಅಜ್ಞಾನವೇ ಕಾರಣ.
* ಜ್ಞಾನದಿಂದ ಭೀತಿ ನಾಶವಾಗಿ ಸಂತೋಷ ಹುಟ್ಟಿಕೊಳ್ಳುತ್ತದೆ.
* ಪರಂಪರೆ ನಮ್ಮ ಗತಕಾಲದ ಸಂಚಯ, ಈ ಪರಂಪರೆ ಒಂದು ಜಾತಿಗೆ ಮೀಸಲಾಗಿರದೆ, ಮನುಷ್ಯ ಜಾತಿಯ ಪರಂಪರೆಯ ಕುರಿತು ಮಾತ್ರ ನಾವು ಯೋಚಿಸಬೇಕು.
* ನಾವು ಸಂಸಾರದಲ್ಲಿದ್ದು ಜೀವನ್ಮುಕ್ತರಂತಿರಬೇಕು.
* ಔದಾರ್ಯ - ಪ್ರೇಮ - ಅನುಕಂಪ ಈ ಮೂರೂ ಅಮೂಲ್ಯ ಜೀವನ ಮೌಲ್ಯಗಳು. ನಮಗೆ ಸರಿಯಾದ ದಾರಿತೋರುವ ಚುಕ್ಕೆಗಳು.
* ಪ್ರೇಮದ ಸೆಲೆ ಬತ್ತಿದ ಹೃದಯ ಬರಡು; ಅದಿಲ್ಲದವನು ಉಸಿರಾಡುವ ಯಂತ್ರ ಮಾತ್ರ. ಅವನು ಬದುಕಿದ್ದಾನೆ ಅನ್ನುವ ಹಾಗಿಲ್ಲ.

ಬದುಕು, ಸಮಾಜ, ಮಾನವ ಜನಾಂಗದ ಬಗ್ಗೆ ನಾರಾಯಣ ಗುರುಗಳ ಚಿಂತನೆ ಮತ್ತು ಬೋಧನೆ ಮಹಾಸಾಗರದಂತಿದ್ದು ಸ್ಥೂಲವಾಗಿ ಕೆಲವನ್ನು ಮಾತ್ರ ಸಾಗರದ ಹನಿಯಂತೆ ಇಲ್ಲಿ ನಮೂದಿಸಲಾಗಿದೆ, ಅವುಗಳನ್ನು ಅರ್ಥೈಸಿ, ಅನುಷ್ಠಾನ ಗೈದಾಗ ವ್ಯಕ್ತಿಯ ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ. ವ್ಯಕ್ತಿಯ ಉದ್ಧಾರದಿಂದ ಸಾಮಾಜಿಕ ಉತ್ಥಾನ ಸಾಧ್ಯ. ಇಂತಹ ನವಸಮಾಜದ ಸೃಷ್ಟಿಯಿಂದ ವಿಶ್ವಮಾನವ ಪ್ರಜ್ಞೆ ಬೆಳೆಯಲು ಅನುಕೂಲವಾಗುವುದು. ಇಂತಹ ಪ್ರಪಂಚದಲ್ಲೇ ನಾವು ಕಾಣುವುದು ಸತ್ಯ - ಶಿವಂ - ಸುಂದರಂ ಎಂಬ ಅಲೌಕಿಕ ಆನಂದದ ಸುಂದರ ಸಮಾಜ. ನಾರಾಯಣ ಗುರುಗಳು ತನ್ನ ಜೀವಿತಾವಧಿಯಲ್ಲಿ ಮಾಡಿದ ದಲಿತೋದ್ಧಾರ, ಸಮಾಜಸುಧಾರಣೆ, ತತ್ವಚಿಂತನೆಯ ಮೂಲಸೆಲೆಯೇ ಇಂತಹ ವಿಶ್ವಮಾನವ ಪ್ರಜ್ಞೆಯ ಸುಂದರ ನವಸಮಾಜ ಸೃಷ್ಟಿಯ

ಉದ್ದೇಶವಾಗಿದೆ ಎಂದು ತಿಳಿದಾಗ ಗುರುವಿನ ಘನವ್ಯಕ್ತಿತ್ವದ ಅರಿವಾಗುವುದು. ಇಂಥವರು ಹುಟ್ಟಿದ ತಾಣವೇ ಧನ್ಯ.

ನಾರಾಯಣ ಗುರುಗಳ ಬದುಕು, ಹಾಗೂ ಮಾನವ ಜನಾಂಗದ ಬಗ್ಗೆ ಅವರ ಚಿಂತನೆ ಇಂದು ವಿಶ್ವದಾದ್ಯಂತ ಅಧ್ಯಯನವಾಗುತ್ತಿದೆ. ಶಿವಗಿರಿಯಲ್ಲಿ ಗುರುಗಳ ಚಟುವಟಿಕೆಗಳು ನಡೆದ ಪವಿತ್ರ ಕ್ಷೇತ್ರದ ಬಳಿಯೇ ಈಸ್ಟ್ - ವೆಸ್ಟ್ ಯೂನಿವರ್ಸಿಟಿ. ಸ್ಥಾಪನೆಗೊಂಡಿದ್ದು ಅಲ್ಲಿ ದೇಶ ವಿದೇಶದ ಪ್ರತಿಭಾವಂತರನೇಕರು ನಾರಾಯಣಗುರುಗಳು ಬೋಧಿಸಿದ ತತ್ವಸಿದ್ಧಾಂತದ ಅಧ್ಯಯನದಲ್ಲಿ ನಿರತರಾಗಿದ್ದಾರೆ. ವಿದೇಶಗಳಲ್ಲಿ ಹಲವು ಕಡೆಗಳಲ್ಲಿ ನಾರಾಯಣ ಗುರುಕುಲದ ಶಾಖೆಗಳು ಹರಡಿದ್ದು ಗುರುಗಳ ವಿಶ್ವಜನಾಂಗದ ಚಿಂತನೆಯನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯಮಾಡುತ್ತಿದೆ. ಇಷ್ಟಿದ್ದರೂ ನಾರಾಯಣ ಗುರು ತನ್ನದೇ ಒಂದು ಪ್ರತ್ಯೇಕ ಮತವನ್ನು ಸ್ಥಾಪಿಸಲಿಲ್ಲ ಎಂಬುದು ಗಮನಾರ್ಹ. ಅವರ ಹಲವಾರು ಶಿಷ್ಯರು ಅನುಯಾಯಿಗಳು, ಅಭಿಮಾನಿಗಳು, ಗುರುಗಳ ತಾತ್ವಿಕ ಚಿಂತನೆಯಲ್ಲಿ ಅಡಕವಾಗಿರುವ ತಾತ್ವಿಕ ವಿಚಾರವನ್ನು ಅಧ್ಯಯನ ಮತ್ತು ಅನುಷ್ಠಾನ ಮಾಡುವಲ್ಲಿ ನಿರತರಾಗಿದ್ದಾರೆಯೇ ವಿನಹ ಪುನಃ ಒಂದು ಹೊಸಮತವನ್ನು ಹುಟ್ಟುಹಾಕಲಿಲ್ಲ. ಇದಕ್ಕೆ ಬಲವಾದ ಕಾರಣವೆಂದರೆ ನಾರಾಯಣಗುರುಗಳು ಭಾರತದ ಸನಾತನ ಧರ್ಮಸಿದ್ಧಾಂತದ ಅಧ್ಯಾತ್ಮಿಕ ತತ್ವಜ್ಞಾನವನ್ನು ಸರಿಯಾದ ಅರ್ಥದಲ್ಲಿ ಜನಮನಕ್ಕೆ ಮುಟ್ಟಿಸುತ್ತಾ ಅದರಲ್ಲಿ ನುಸುಳಿದ ಅಂಧಾಚರಣೆ, ಕಂದಾಚಾರವನ್ನು ನಿವಾರಿಸುವ ಸಮಾಜಸುಧಾರಕರಾಗಿಯೇ ಜನರ ಮಧ್ಯೆ ನಿರಂತರ ಓಡಾಡಿದರು. ಹೊಸ ಮತ ಪ್ರಚಾರ ಬೋಧನೆಗೆ ಮಾತ್ರ ತನ್ನನ್ನು ಸೀಮಿತಗೊಳಿಸಲಿಲ್ಲ.

ಅಮೇರಿಕದ ಪೋರ್ಟ್‌ಲ್ಯಾಂಡ್‌ನಲ್ಲಿರುವ "ನಾರಾಯಣ ಗುರುಕುಲದ" ಕಾರ್ಯದರ್ಶಿಯಾದ ಶ್ರೀಮತಿ ಡೆಬೋರಾ ಬುಚಾನನ್ ತಾನು ಬರೆದ "Gestures in Silence - who and what Narayana Guru is" ಎಂಬ ಗ್ರಂಥದಲ್ಲಿ ಗುರುಗಳ ಬಗ್ಗೆ ಹೇಳುತ್ತಾ "ನಾರಾಯಣ ಗುರು ಹುಟ್ಟಿ ಬೆಳೆದು ಸಂದೇಶ ಪ್ರಚಾರ ಮಾಡಿದ್ದು ಕೇವಲ ದಕ್ಷಿಣ ಭಾರತದಲ್ಲಿ. ಕೆಲವರು ಅವರನ್ನು ತಮ್ಮ ಗುರುವೆಂದು ಹೇಳಿಕೊಂಡರೂ ವಿಶ್ವದ ಎಲ್ಲೆಡೆ ಅವರ ಪ್ರಭಾವವಿರುವುದರಿಂದಲೇ ನಾರಾಯಣ ಗುರು ಒಂದು ವರ್ಗಕ್ಕೆ ಇಲ್ಲವೇ ಒಂದು ದೇಶಕ್ಕೆ ಸೀಮಿತರಾದವರಲ್ಲ. ವಿಶ್ವದಾದ್ಯಂತ ಅವರ ಹೆಸರಿನಲ್ಲಿ ಸಂಘ ಸಂಸ್ಥೆಗಳು, ಶಿಕ್ಷಣ ಕೇಂದ್ರಗಳು ಸ್ಥಾಪಿಸಲ್ಪಟ್ಟು ಕಾರ್ಯವೆಸಗಿರುವುದು ಈ ಹೇಳಿಕೆಗೆ ಜ್ವಲಂತ ಸಾಕ್ಷಿ. ನಾರಾಯಣ ಗುರುಗಳ ತಾತ್ವಿಕ ಚಿಂತನೆಯು ಗಾಢ ಮಾನವತೆಯ ಸಂಗಮವಾಗಿದ್ದುದರಿಂದಲೇ, ಜಾತಿ, ಮತ, ಪಂಥ, ವರ್ಣಗಳ ಬೇಧವಿಲ್ಲದೆ ಎಲ್ಲರ ಹೃದಯವನ್ನು ಅವರ ಮಾತುಗಳು ತಲುಪುತ್ತವೆ. ಅಲ್ಲಿ ಸ್ಪಂದನವನ್ನು ಮೂಡಿಸುತ್ತವೆ. ಆದುದರಿಂದಲೇ ನಾರಾಯಣ ಗುರು ಸೀಮಾತೀತರು. ಅವರು 74 ವರ್ಷ ಜೀವಿಸಿದ್ದರೂ ಅವರ ಚಿಂತನೆ ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಅವರದ್ದು ಕಾಲಾತೀತ ಬದುಕು. ಅವರ ಮಾತು ಇವತ್ತಿಗೂ, ಇನ್ನು ನೂರು ವರ್ಷಗಳ ನಂತರವೂ ಒಂದೇ ಅನುಭವವನ್ನು ನೀಡಬಲ್ಲುದು. ನಿರಾಶೆ, ನೋವು, ಯಾತನೆಗಳ ಬದುಕಿನ ಗೊಂಡಾರಣ್ಯದಲ್ಲಿ

ಬದುಕಿನ ಅರ್ಥ ಹುಡುಕಲು ಅವರದ್ದು ಒಂಟಿ ಸಲಗದ ಪ್ರಯಾಣ" ಎಂದು ಬರೆದಿದ್ದಾರೆ.

ಭಾರತದಲ್ಲಿ ಹುಟ್ಟಿದ ಬಹಳಷ್ಟು ಆಧ್ಯಾತ್ಮಿಕ ವಿಭೂತಿಪುರುಷರು ಜನತೆಯ ಉದ್ಧಾರಕ್ಕೆ ಶ್ರಮಿಸಿ, ತಾವು ಕಂಡುಕೊಂಡ ಸತ್ಯವನ್ನು ಜನರಿಗೆ ತಿಳಿಸಿಹೇಳಿದರೆ, ಅದೊಂದು ಬೋಧನೆಯಾಗಿ, ಮತವಾಗಿ ಪರಿಗಣಿಸಲ್ಪಟ್ಟು, ಅವರನ್ನು ದೇವರ ಅವತಾರ ಅಥವಾ ದೈವತ್ವಕ್ಕೇರಿಸಿ ಪೂಜಿಸಲ್ಪಡುವುದನ್ನೇ ನಾವು ಕಾಣುತ್ತೇವೆ. ಬುದ್ಧ, ಶಂಕರ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಗುರುನಾನಕ್ ಇವರೆಲ್ಲಾ ಮಹಾ ದಾರ್ಶನಿಕರು, ಆದರೆ ಅವರ ಅನುಯಾಯಿಗಳು ಅವರವರ ಮತಕ್ಕೇ ಸೀಮಿತಗೊಂಡರು. ನಾರಾಯಣ ಗುರುಗಳ ಬೋಧನೆ, ತತ್ವಸಿದ್ಧಾಂತವನ್ನು ಭಾರತದಲ್ಲಿ, ವಿದೇಶಗಳ ಹಲವಾರು ಕಡೆಗಳಲ್ಲಿ ಬಹಳಷ್ಟು ಮಂದಿ ಅನುಸರಿಸುತ್ತಿದ್ದು ಅವರಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧರು, ವಿದೇಶಿಗಳು ಎಲ್ಲರೂ ಇದ್ದಾರೆ. ಇವರೆಲ್ಲ ತಾವು ನಂಬಿಕೊಂಡಿರುವ ಮತಧರ್ಮಗಳನ್ನು ಅನುಸರಿಸುತ್ತಾ ಇದ್ದರೂ ನಾರಾಯಣ ಗುರುಗಳ ವಿಶ್ವಚಿಂತನೆಯನ್ನು ಗೌರವಿಸಿ ಅನುಷ್ಠಾನ ಮಾಡುವುದರಲ್ಲಿ ಯಾವ ಭೇದವನ್ನು ಕಾಣರು, ಇದಕ್ಕೆ ನಾರಾಯಣಗುರುಗಳ ಚಿಂತನೆ ಒಂದು ಮತವಾಗಿ ಪರಿವರ್ತಿತವಾಗದಿರುವುದೇ ಕಾರಣ. ಇಂತಹ ಸ್ಥಿತಿ ಪ್ರಸಕ್ತ ಕಾಲದ ವರೆಗೆ ಮುಂದುವರಿಯುತ್ತಿದ್ದು, ಇನ್ನು ಮುಂದೆಯೂ ಹಾಗೆಯೇ ಇದ್ದರೆ, ಅದೇ ಶ್ರೀಗುರುಗಳ ಚಿಂತನೆಗೆ ಸಂದ ಗೌರವ.

ಶ್ರೀ ನಾರಾಯಣ ಗುರುಗಳು 21ನೇ ಸೆಪ್ಟೆಂಬರ್, 1928 ರಲ್ಲಿ ಸಮಾಧಿ ಹೊಂದಿದರು. ಅವರ ಜೀವಿತದ ಏಳು ದಶಕಗಳೂ ಒಂದಲ್ಲ ಒಂದು ರೀತಿಯಲ್ಲಿ ಪವಾಡ ಸದೃಶ್ಯವಾಗಿದ್ದವು. "ಶ್ರೀ ನಾರಾಯಣ ಅಂತಾರ್‍ರಾಷ್ಟ್ರೀಯ ವರ್ಷ"ವನ್ನು 1977 ರಲ್ಲಿ ದೇಶ ವಿದೇಶಗಳಲ್ಲಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಭಾರತ ಸರಕಾರವು ಸ್ವಾಮಿಗಳ ಗೌರವಾರ್ಥವಾಗಿ ಒಂದು ಅಂಚೆಚೀಟಿಯನ್ನು ಬಿಡುಗಡೆಗೊಳಿಸಿದೆ.

## ಕಾಯವಳಿದರೂ ಬೆಳಕು ಆರದು

ನಾರಾಯಣ ಗುರುಗಳು ತನ್ನ ಜೀವಿತಾವಧಿಯ ಎಪ್ಪತ್ತನಾಲ್ಕು ವರ್ಷ ಕೇರಳದಾದ್ಯಂತ ತಂದ ಸಾಮಾಜಿಕ ಪರಿವರ್ತನೆ, ಯಾವತ್ತೂ ಸ್ಮರಣೀಯವಾಗಿ ಉಳಿಯುವಂತಹದ್ದಾಗಿದೆ. ಅವರ ಕಾಯ ಅಳಿದರೂ ನೀಡಿದ ಬೆಳಕು ಆರದು. ಬಾಲ್ಯದಲ್ಲಿ ಸಂಸ್ಕೃತ ವಿದ್ಯಾಭ್ಯಾಸ, ಕೌಟುಂಬಿಕ ವೃತ್ತಿಯಾದ ಆಯುರ್ವೇದ ಮದ್ದಿನ ಕಲಿಕೆಗಳಾದ ನಂತರ ಸಂಸಾರ ತೊರೆದು ಹಲವು ವರ್ಷ ಜ್ಞಾನಾರ್ಜನೆಗಾಗಿ ಪರಿವ್ರಾಜಕನಾಗಿ ಅಲೆದಾಡಿದ ನಂತರ ವೇದಾಂತಿಯಾಗಿ ಅವರು ಕೇರಳಕ್ಕೇ ಮನೆಗೆ ಮರಳಿದರು. ಬಂದವರೇ ಅಸ್ಪೃಶ್ಯತಾ ನಿವಾರಣೆ, ಮತ ಸುಧಾರಣೆ, ದಲಿತರಿಗೆ ದೇವಸ್ಥಾನ ನಿರ್ಮಾಣದೊಂದಿಗೆ ಸಾಂಸ್ಕೃತಿಕ ಪುನರುತ್ಥಾನದ ಕಾರ್ಯದಲ್ಲಿ ತಲ್ಲೀನರಾದರು. ಸರ್ವಧರ್ಮ ಸಮ್ಮೇಳನ, ಅಖಿಲ ಕೇರಳ ಸೋದರ ಸಮ್ಮೇಳನವನ್ನು ಸಂಘಟಿಸಿದರು, "ಶ್ರೀ ನಾರಾಯಣ ಧರ್ಮಪರಿಪಾಲನಾ ಯೋಗಂ",

ನಾರಾಯಣ ಧರ್ಮ ಸಂಘಂ", ಅದ್ವೈತ ಆಶ್ರಮ, ಶಿವಗಿರಿ ಮಠ ಸ್ಥಾಪನೆ, ಹಲವಾರು ಮಠ ಮಂದಿರಗಳು, ನೂರಾರು ದೇವಸ್ಥಾನ ಸ್ಥಾಪನೆಯೊಂದಿಗೆ ವಿಚಾರಕ್ರಾಂತಿಯನ್ನು ಮಾಡಿದರು. ತಾನು ಕಂಡುಕೊಂಡ ಧರ್ಮಪ್ರಸಾರಕ್ಕಾಗಿ ದಕ್ಷಿಣಭಾರತದಲ್ಲಿ ಸಂಚರಿಸುವುದರ ಜತೆಗೆ ಮೂರು ಬಾರಿ ಶ್ರೀಲಂಕಾಕ್ಕೆ ಪ್ರವಾಸವನ್ನು ಕೈಗೊಂಡರು, ನಿತ್ಯ ಬಿಡುವಿಲ್ಲದ ಓಡಾಟದ ನಡುವೆಯೂ "ಮಾನವರಿಗೆಲ್ಲಾ ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಎಂಬ ತತ್ವವನ್ನು ನಿರಂತರ ಪ್ರತಿಪಾದಿಸಿದರು. ದೀನದಲಿತರಿಗಾಗಿ ನೂರಾರು ದೇವಸ್ಥಾನ, ವಿದ್ಯಾಸಂಸ್ಥೆ, ಹಲವಾರು ಆಸ್ಪತ್ರೆಗಳನ್ನು ಸ್ಥಾಪಿಸಿ ಸಮಾಜಸುಧಾರಣೆಯಲ್ಲಿ ಉದ್ಯುಕ್ತರಾದರು. ಜಾತಿವಾದಿಗಳನ್ನೂ, ಮತಾಂಧರನ್ನೂ, ಸಂಪ್ರದಾಯವಾದಿಗಳನ್ನೂ ದ್ವೇಷಿಸದೆ ಹಿಂದುಳಿದವರ, ದಲಿತರ, ಅಸ್ಪೃಶ್ಯರ ಉದ್ಧಾರಕ್ಕೆ ಪ್ರಯತ್ನಿಸಿದರು. ಇಷ್ಟಾದರೂ ಅವರು ಯಾವ ಪಂಥವನ್ನಾಗಲಿ, ಪಂಗಡವನ್ನಾಗಲಿ ಕಟ್ಟಲಿಲ್ಲ. ಸನಾತನ ಧರ್ಮದಲ್ಲಿ ಪ್ರತಿಪಾದಿಸಿದಂತೆ ಅವರು ವಿಶ್ವಪ್ರೇಮಿಯಾಗಿ, ವಿಶ್ವಮಾನವನಾಗಿ ಬಾಳಿದರು. ಅವರ ಸಮಕಾಲೀನರು ಹಾಗೂ ಅವರ ಆದಿಶಿಷ್ಯರು ಅವರಲ್ಲಿ ನಿಗೂಢಶಕ್ತಿಯೊಂದು ಮನೆಮಾಡಿಕೊಂಡಿತ್ತು ಎಂದು ನಂಬಿದ್ದರು. ಅವರ ವರ್ಚಸ್ಸು ಅವರ ಕಾರ್ಯಪರಂಪರೆಯಲ್ಲಿ ಗೋಚರಿಸಿದೆ.

ಅವರ ಚಿಂತನೆಯ ಮೂಲಸೆಲೆಯ ಬೆಳವಣಿಗೆ ಮತ್ತು ಪ್ರಭಾವವನ್ನು ಕಾಣಬೇಕಾದರೆ ಕೇರಳದ ಪ್ರಸಕ್ತ ಜನಜೀವನವನ್ನು ಹಾಗೂ ಕರ್ನಾಟಕ ಕರಾವಳಿಯ ಹಿಂದುಳಿದ ಜನವರ್ಗವನ್ನೂ ಸಂಶೋಧನಾತ್ಮಕ ಅಧ್ಯಯನಕ್ಕೆ ಒಳಪಡಿಸಬೇಕಾಗುವುದು. ಶತಮಾನಗಳಿಂದ ಜಡತೆ ತುಂಬಿದ ಈ ಜನಕೋಟಿ ಮೂರು - ನಾಲ್ಕು ದಶಕಗಳಲ್ಲಿ ಶ್ರೀ ಗುರುವಿನ ಪ್ರೇರಣೆಯಿಂದ ಗಳಿಸಿದ ಪ್ರಗತಿ ಗಣನೀಯ, ದೇಶ ವಿದೇಶಗಳಲ್ಲೂ ವಿಚಾರವಂತರು ಶ್ರೀ ಗುರುವಿನ ಚಿಂತನೆಯ ಅಧ್ಯಯನ ಮಾಡುತ್ತಿದ್ದಾರೆ. ನಾರಾಯಣ ಗುರುಗಳು ಎಷ್ಟು ಪ್ರಗತಿಪರರಾಗಿದ್ದಾರೆಂದರೆ ಅವರು ಪ್ರತಿಪಾದಿಸಿದ ಸುಧಾರಣೆಗಳನ್ನು ಒಂದೂವರೆ ಶತಮಾನದ ನಂತರ ಈಗ ಸರಕಾರವು ಪ್ರತಿಪಾದಿಸುತ್ತಿದೆ. ಸಂಯುಕ್ತ ರಾಷ್ಟ್ರ ಸಂಘದ ಧೋರಣೆಯೂ ಇದೇ ವಿಶ್ವಚಿಂತನೆಯ ಆಧಾರದಲ್ಲಿ ರೂಪಿಸಲ್ಪಟ್ಟಿದೆ.

ಬಿಡುವಿಲ್ಲದ ಓಡಾಟದ ಮಧ್ಯೆ ಕೂಡಾ ಶ್ರೀ ಗುರು ಬಹಳಷ್ಟು ಸಾಹಿತ್ಯ ಸೃಷ್ಟಿ ಮಾಡಿದ ಪ್ರತಿಭಾವಂತರಾಗಿದ್ದರು. ಸಂಸ್ಕೃತ, ಮಲೆಯಾಳಂ ಭಾಷೆಯಲ್ಲಿ ಗುರುಗಳು ಉತ್ತಮ ಬರಹಗಾರರಾಗಿದ್ದು ಅವಿರತವಾಗಿ ಬರೆಯುತ್ತಿದ್ದರು. ಅವರ ಹಲವಾರು ಗ್ರಂಥಗಳಲ್ಲಿ "ದರ್ಶನಮಾಲಾ" (ಸಂಸ್ಕೃತ) ಮತ್ತು "ಆತ್ಮೋಪದೇಶ ಶತಕಂ" (ಮಲೆಯಾಳಂ) ಮುಖ್ಯವಾದುವು. ಮಿತಭಾಷಿಯಾಗಿದ್ದು ಯಾವಾಗಲೂ ಪ್ರಸನ್ನಚಿತ್ತರಾಗಿರುತ್ತಿದ್ದ ಗುರುಗಳು ಆಡುವ ಮಾತುಗಳು ವಚನಸಾಹಿತ್ಯದಂತಿದ್ದು ಗಾದೆಯಂತೆ ಮನಮುಟ್ಟುತ್ತಿದ್ದು, ವೇದದಂತೆ ಪಾಂಡಿತ್ಯ ಪೂರ್ಣವಾಗಿರುತಿತ್ತು.

## ನಾರಾಯಣಗುರು ವಿರಚಿತ ಲಭ್ಯ ಕೃತಿಗಳು ಈ ರೀತಿ ಇವೆ.

1. ವಿನಯಾಷ್ಟಕಂ
2. ಗುಹಾಷ್ಟಕಂ
3. ಬಾಹುಲೇಯಾಷ್ಟಕಂ
4. ಸುಬ್ರಹ್ಮಣ್ಯ ಕೀರ್ತನಂ
5. ಭದ್ರಕಾಳ್ಯಷ್ಟಕಂ
6. ಮಣ್ಣಂತಲ ದೇವಿಸ್ತವಂ
7. ಶಿವ ಪ್ರಸಾದ ಪಂಚಕಂ
8. ಚಿದಂಬರಾಷ್ಟಕಂ
9. ಪರಮಶಿವ ಚಿಂತಾದಶಕಂ
10. ಷಣ್ಮಾತುರಸ್ತವಂ
11. ವಾಸುದೇವಾಷ್ಟಕಂ
12. ಷಣ್ಮುಖ ಸ್ತೋತ್ರಂ
13. ಷಣ್ಮುಖ ದಶಕಂ
14. ನವಮಂಜರಿ
15. ದೇವಿ ಸ್ತವಂ
16. ಕಾಳೀ ನಾಟಕಂ
17. ಸದಾಶಿವ ದರ್ಶನಂ
18. ಶಿವ ಶತಕಂ
19. ಅರ್ಧನಾರೀಶ್ವರ ಸ್ತವಂ
20. ಮನನಾತೀತಂ (ವೈರಾಗ್ಯದಶಕಂ)
21. ಕುಂಡಲಿನಿಪ್ಪಾಟ್
22. ಇಂದ್ರಿಯ ವೈರಾಗ್ಯಂ
23. ಪ್ರಪಂಚ ಶುದ್ಧಿದಶಕಂ
24. ಅದ್ವೈತ ದೀಪಿಕ
25. ಚಿಜ್ಜಡ ಚಿಂತನಂ
26. ಪಿಂಡ ನಂದಿ
27. ಅನುಭೂತಿ ದಶಕಂ
28. ಶಿವಸ್ತವಂ - ಪ್ರಪಂಚ ಸೃಷ್ಟಿ
29. ಆತ್ಮೋಪದೇಶ ಶತಕಂ
30. ಬ್ರಹ್ಮವಿದ್ಯಾ ಪಂಚಕಂ
31. ಜೀವಕಾರುಣ್ಯ ಪಂಚಕಂ
32. ಅನುಕಂಪಾ ದಶಕಂ
33. ತಿರುಕ್ಕುರಳ್ - ಭಾಷ್ಯ
34. ಜಾತಿನಿರ್ಣಯಂ
35. ಜಾತಿಮೀಮಾಂಸ
36. ದರ್ಶನ ಮಾಲ
37. ಅರಿವು
38. ನಿರ್ವೃತಿಪಂಚಕಂ
39. ಕೋಲತೀರೇಶ ಸ್ತವಂ
40. ವಿಷ್ಣ್ವಷ್ಟಕಂ
41. ಒರು ತಮಿಳ್ ಶ್ಲೋಕಂ
42. ದೈವಚಿಂತಕಂ
43. ಆತ್ಮವಿಲಾಸಂ
44. ಜನನೀ ನವರತ್ನ ಮಂಜರಿ
45. ಮುನಿಚರ್ಯಾ ಪಂಚಕಂ
46. ಭಾರ್ಯಾ ಧರ್ಮಂ
47. ದತ್ತಾಪಹಾರಂ
48. ಈಶಾವಾಸ್ಯೋಪನಿಷದ್ ಭಾಷ್ಯ
49. ಜಾತಿಲಕ್ಷಣಂ
50. ದೈವಚಿಂತಕಂ
51. ಆಶ್ರಮಂ
52. ಶ್ಲೋಕ ತ್ರಯೀ
53. ಸ್ವಾನುಭವ ಗೀತ
54. ಧರ್ಮಂ
55. ವೇದಾಂತ ಸೂತ್ರ (ಸಂಸ್ಕೃತ)
56. ದೈವ ಚಿಂತಕಂ
57. ಗದ್ಯ ಪ್ರಾರ್ಥನ
58. ತೇವಾರಪ್ಪದಿಕಂಗಳ್ (ತಮಿಳು)

ಒಂದು ವ್ಯಕ್ತಿ ಜೀವಿತಾವಧಿಯಲ್ಲಿ ಎಷ್ಟೇ ಪ್ರಚಾರ, ಪ್ರಸಿದ್ಧಿ ಪಡೆದಿರಲಿ, ಆತನ ಕಾಲಾನಂತರ ಆ ವ್ಯಕ್ತಿತ್ವಕ್ಕೆ ಘನತೆ ಉಳಿಯುವುದು ಆತ ಮಾಡಿದ ಶಾಶ್ವತ ಕೆಲಸಗಳಿಂದ

ಮಾತ್ರ. ಬಹುಕಾಲ ಉಳಿಯಬಲ್ಲ ಸಂಸ್ಥೆಯ ನಿರ್ಮಾಣವೊ, ಸಾಹಿತ್ಯ ಕೃತಿಯೊ ಒಬ್ಬನಿಂದಾದರೆ ಆತ ಬಹುಕಾಲ ಜನ ಪರಂಪರೆಯ ನೆನಪಿನಲ್ಲಿ ಉಳಿಯುತ್ತಾನೆ. ಕಾಯವಳಿದ ಬಳಿಕವೂ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಿರುವವರಲ್ಲಿ ನಾರಾಯಣಗುರು ಒಬ್ಬರು. ಅವರು ಸಮಾಧಿಹೊಂದಿದ ನಂತರವೂ ಜನರು ಅವರ ತತ್ವಾದರ್ಶಗಳನ್ನು ನಿತ್ಯಾಚರಣೆಯಲ್ಲಿ ಜೀವಂತವಾಗಿರಿಸಿದ್ದಾರೆ.

ಆಧುನಿಕ ಕೇರಳದ ಸಾಮಾಜಿಕ ಸರ್ವಸಮಾನತೆಯ ಪ್ರಜ್ಞೆಯ ಹಿಂದೆ, ಗಾಂಧೀಜಿ ನೇತೃತ್ವದ ಆಂದೋಲನ, ಇ.ಎಂ.ಎಸ್. ನಂಬೂದಿರಿ ಪ್ಪಾಡ್ ಅವರ ನೇತೃತ್ವದ ಕಮ್ಯೂನಿಸ್ಟ್ ಆಂದೋಲನದ ಸರಿಸಮಾನ ಪಾತ್ರ ಅಲ್ಲಿನ ಈಳವ ಸಮಾಜದ ಹಾಗೂ ಇತರ ದಲಿತ ಸಮಾಜದ ಅಸ್ಪೃಶ್ಯತೆಯನ್ನು ನೀಗಿದ ನಾರಾಯಣಗುರುವಿಗೆ ಇದೆ. ಅವರು ಎರಡು ಬಾರಿ ಮಂಗಳೂರಿಗೆ ಬಂದು ಕರಾವಳಿ ಕನ್ನಡ ಜಿಲ್ಲೆಗಳ ಬಿಲ್ಲವರ ಸಂಘಟನೆಗೂ ಭದ್ರ ಬುನಾದಿ ಹಾಕಿದ್ದರೆಂಬುದು ಉಲ್ಲೇಖನೀಯ. ಇಂದು ಈ ಜಿಲ್ಲೆಗಳಲ್ಲಿ 120 ಕ್ಕೂ ಹೆಚ್ಚಿನ ಸಂಘಟನೆಗಳು ನಾರಾಯಣ ಗುರುಗಳ ಪ್ರೇರಣೆಯಿಂದ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿವೆ.

ಕೇರಳದಲ್ಲಿ ಈಳವರನ್ನು, ಕರಾವಳಿ ಕರ್ನಾಟಕದಲ್ಲಿ ಬಿಲ್ಲವರನ್ನು ವೈದಿಕ ಮಾರ್ಗಕ್ಕೆ ತಂದ ಕೀರ್ತಿ ನಾರಾಯಣ ಗುರುಗಳಿಗೆ ಸೇರಿದೆ. ವೇದಾಂತದ ತಿರುಳನ್ನು ಜನಸಾಮಾನ್ಯರಿಗೆ ತಿಳಿಸಿಕೊಟ್ಟು ಅವರನ್ನು ವಿದ್ವತ್‌ಪ್ರೇಮಿಗಳನ್ನಾಗಿ ಪರಿವರ್ತಿಸಿ, ಅವರಲ್ಲಿ ಮಹಾನ್ ವಿದ್ವಾಂಸರು ಮೂಡಿಬರಲು ದಾರಿ ತೆರೆದುಕೊಟ್ಟದ್ದು ಈ ವಿಶ್ವಚೇತನದ ಮಹಾನ್ ಸಾಧನೆ.

ವಿಶ್ವಚೇತನ ಎಂದು ಹೇಳಲು ನಾರಾಯಣ ಗುರುಗಳ ಧೋರಣೆಯೇ ಆಧಾರ. ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು ಮಾನವನಿಗೆ ಎನ್ನುವಲ್ಲಿ ಮನುಷ್ಯನಿಗೆ ಅವರು ಹೆಚ್ಚಿನ ಮಹತ್ವ ನೀಡಿದ್ದಾರೆ. ಎಲ್ಲ ಮತಧರ್ಮಗಳ ಸಾರವನ್ನು ಅರ್ಥಮಾಡಿಕೊಂಡ ನಾರಾಯಣ ಗುರು ಸರ್ವಮತ ಸಮ್ಮೇಳನ ಏರ್ಪಡಿಸಿ ಮತೀಯ ಸಾಮರಸ್ಯ, ಮಾತ್ರವಲ್ಲ ಪರಸ್ಪರ ಅರಿವಿನ ವೃದ್ಧಿಗೆ ಸಹಾಯಮಾಡಿದರು.

ನಾರಾಯಣ ಗುರುಗಳ ಅಭಿಯಾನದ ತಿರುಳನ್ನು ಅರ್ಥಮಾಡಿಕೊಂಡಿದ್ದರೆ ಇವತ್ತಿನ ಜಾತಿ ಮೇಲಾಟಕ್ಕೆ ಎಡೆ ಇರುತ್ತಿರಲಿಲ್ಲ. ತೀರ ಕೆಳಸ್ತರದಲ್ಲಿದ್ದ ಈಳವರಿಗೆ, ಮೇಲ್ಜಾತಿಗೆ ಸಮನಾಗಿ ತಲೆಎತ್ತಿ ನಡೆಯುವಂತೆ ಪ್ರೇರಣೆ ನೀಡಿದ ಫಲವಾಗಿ ಇಂದು ಕೇರಳದಲ್ಲಿ ಎಲ್ಲ ಸಮಾಜದೊಂದಿಗೆ ಈಳವರು ಅಳುಕಿಲ್ಲದೆ ವ್ಯವಹರಿಸಲು ಶಕ್ತರಾಗಿದ್ದಾರೆ.

ನಾರಾಯಣ ಗುರುಗಳ ಅಂತಿಮ ಉದ್ದೇಶ ಸಮಾಜದಲ್ಲಿ ಸಾರೂಪ್ಯ (Homogenicity) ತರುವುದೇ ಆಗಿತ್ತು. ಈ ಸಾರೂಪ್ಯದಿಂದಾಗಿ ಅಂತರ್ಜಾತೀಯ ಹೊಕ್ಕುಬಳಕೆ ಸಾಧ್ಯವಾಗಿ, ಸಾಮಾಜಿಕ ಅಸಮಾನತೆ ತೊಲಗೀತು. ಅಂತರ್ಜಾತೀಯ ವಿವಾಹ ಒಂದೇ ಭಾರತೀಯ ಸಮುದಾಯದಲ್ಲಿ ಹೆಚ್ಚಿನ ಶರೀರ ಯೋಗ್ಯತೆ, ಬುದ್ಧಿ ಯೋಗ್ಯತೆ, ಮನೋಯೋಗ್ಯತೆಗಳನ್ನು ಬೆಳೆಸಿಕೊಟ್ಟೀತು. ಆ ಮೂಲಕ ಸಾಮಾಜಿಕ

ಶಾಂತಿಯನ್ನು ಶಾಶ್ವತಗೊಳಿಸೀತು. ಶಾಂತಿ ಇಲ್ಲದಿದ್ದರೆ, ಸದಾ ಜಗಳಗಂಟ ಸಮಾಜವಾದರೆ, ಅಲ್ಲಿ ಅಭಿವೃದ್ಧಿಗೆ ಸ್ಥಾನವಿರಲಾರದು.

ಈ ಸಾಮಾಜಿಕ ಅಭಿವೃದ್ಧಿಯ ಒತ್ತಡದ ಕೆಲಸದಿಂದಾಗಿ ನಾರಾಯಣ ಗುರುವಿನ ವಿದ್ವತ್ತು, ಕವಿತ್ವ ಹೆಚ್ಚು ಪ್ರಚಾರ ಪಡೆಯಲಿಲ್ಲ. ಸಾಹಿತಿಯಾಗಿಯೇ ತಮ್ಮ ಜೀವಮಾನವನ್ನು ಮುಡಿಪಾಗಿಡುತ್ತಿದ್ದರೆ ಶಂಕರಾಚಾರ್ಯರಿಗೆ ಅಥವಾ ಕಾಳಿದಾಸನಿಗೆ ಸಮನಾದ ಕವಿಯಾಗಿ ಅವರನ್ನು ಕಾಣಬಹುದಿತ್ತು. ಸಂಸ್ಕೃತದಲ್ಲೂ, ಮಲಯಾಳದಲ್ಲೂ, ತಮಿಳಿನಲ್ಲೂ ಅವರು ಪ್ರಚಂಡ ಪಂಡಿತರೂ, ರಸಭರಿತ ಕಾವ್ಯರಚನಾ ಕುಶಲರೂ ಆಗಿದ್ದರು.

ಸಂಸ್ಕೃತದಲ್ಲೂ, ದೇಶಭಾಷೆಗಳಲ್ಲೂ ಒಟ್ಟು 144 ಕೃತಿಗಳನ್ನು ರಚಿಸಿದ ನಾರಾಯಣ ಗುರು ಅವರ ಸ್ತೋತ್ರಸಾಹಿತ್ಯ ಶಂಕರಾಚಾರ್ಯರ ಸ್ತೋತ್ರಸಾಹಿತ್ಯಕ್ಕೆ ಸಮನಾದುದಾಗಿದೆ. ಮಲೆಯಾಳ ಪದ್ಯರಚನೆಯಂತೂ ಆಹ್ಲಾದಕಾರಿಯಾದ ರಸಕವಳವೆಂದೇ ವಿದ್ವಾಂಸರ ಹೇಳಿಕೆ. ಸಾಹಿತ್ಯ ರಚನೆಯಲ್ಲಿ ಅವರಿಗೊಂದು ಮಹತ್ತಾದ ಸ್ಥಾನವಿದೆ. ಮುಂದೆ ಅವರ ಸಂಪರ್ಕಕ್ಕೆ ಬಂದು ಕುಮಾರಾನ್ ಆಶಾನ್ ಕೇರಳದ ಮೂರು ಮಹಾನ್ ಕವಿಗಳಲ್ಲಿ ಓರ್ವನಾಗಿ ರೂಪುಗೊಳ್ಳುತ್ತಾನೆ. ಇನ್ನಿಬ್ಬರು, ವೆಳ್ಳತ್ತೋಳ್ ನಾರಾಯಣ ಮೇನೋನ್ ಮತ್ತು ಉಳ್ಳೂರ್ ಎನ್. ಪರಮೇಶ್ವರ ಅಯ್ಯರ್. ಕುತೂಹಲವೆಂದರೆ ಇವರು ಕ್ರಮವಾಗಿ ಈಳವ, ನಾಯರ್ ಮತ್ತು ಬ್ರಾಹ್ಮಣರು. ಕೇರಳದಲ್ಲಿ ಸಾಹಿತ್ಯದ ಮೇಲ್ಮೆಯನ್ನು ಅಳೆಯುವಾಗ ಕೃತಿಗಾರನ ಜಾತಿಯು ಗಣನೆಗೆ ಬರದಿರಲು ಒಂದು ಕಾರಣ ನಾರಾಯಣ ಗುರುಗಳ ವಿಚಾರಕ್ರಾಂತಿ.

ಕುಮಾರಾನ್ ಆಶಾನ್ ಮಾತ್ರವಲ್ಲದೆ ಇನ್ನೂ ಅನೇಕ ವಿದ್ವಾಂಸರನ್ನು ಮಲಯಾಳ ಸಾಹಿತ್ಯಕ್ಕೆ ಕಾಣಿಕೆ ಕೊಟ್ಟ ಕೀರ್ತಿ ನಾರಾಯಣ ಗುರುಗಳಿಗೆ ಇದೆ. ಸಾವಿರಾರು ಹಣತೆಗಳನ್ನು ಪ್ರಜ್ವಲಗೊಳಿಸುವ ನಂದಾ - ದೀಪದಂತೆ ವಿಶ್ವದಾದ್ಯಂತ ಬೆಳಕುಬೀರಿ ಸ್ವತಃ ಬೆಳಕೇ ಆದರು ನಾರಾಯಣಗುರು. ದೀಪದ ಕುಡಿ ತಾನೇ ಬೆಳಗುವುದಲ್ಲದೆ ತನ್ನ ಸ್ಪರ್ಶಕ್ಕೆ ಬಂದ ಇತರ ದೀಪಗಳನ್ನು ಉರಿಸಿ ಬೆಳಕನ್ನು ಹೆಚ್ಚಿಸುತ್ತದೆ. ವಿಶ್ವಚಿಂತಕರ ಸಾಲಿಗೆ ಸೇರಿದ ಈ ಮಹಾನ್‌ಯೋಗಿಯದೊಂದು ಪರಿಪೂರ್ಣ ವ್ಯಕ್ತಿತ್ವ. ಇಂಥವರು ಜನಿಸಿದ ನಾಡು, ಸಂಸ್ಕೃತಿಯೇ ಧನ್ಯ.

# ಗ್ರಂಥ ಋಣ


1. ನಾರಾಯಣ ಗುರು (ಇಂಗ್ಲೀಷ್)
   ಮೂಲ ಮಲೆಯಾಳಂ - ಎಂ. ಕೆ. ಸಾನು
   ಇಂಗ್ಲೀಷ್ ಅನುವಾದ : ಮಾಧವನ್ ಅಯ್ಯಪ್ಪಥ್ (1978)
   ಪ್ರಕಾಶಕರು : ಭಾರತೀಯ ವಿದ್ಯಾಭವನ, ಮುಂಬ್ಯಾ.
2. ದಿ ವರ್ಡ್ ಆಫ್ ಗುರು (ಇಂಗ್ಲೀಷ್)
   ಲೇ|: ಪದ್ಮನಾಭನ್ ನಟರಾಜನ್ (1952)
   ಪ್ರಕಾಶಕರು : ಗುರುಕುಲ ಹೌಸ್, ಕಗ್ಗಲ್ಲಿಪುರ, ಬೆಂಗಳೂರು.
3. ಆ್ಯನ್ ಇಂಟರ್ ಗ್ರೇಟೆಡ್ ಸಯನ್ಸ್ ಆಫ್ ದ ಎಬ್‌ಸೊಲ್ಯೂಟ್ (ಇಂಗ್ಲೀಷ್)
   ಲೇ| ನಟರಾಜ ಗುರು (1977)
   ಪ್ರಕಾಶಕರು : ಈಸ್ಟ್ - ವೆಸ್ಟ್ ಯೂನಿವರ್ಸಿಟಿ ಆಫ್ ಬ್ರಹ್ಮವಿದ್ಯಾವರ್ಕಳ, ಕೇರಳ.
4. ನಾರಾಯಣ ಗುರು (ಇಂಗ್ಲೀಷ್)
   ಎ. ಪರಮೇಶ್ವರನ್ (1977)
   ಪ್ರಕಾಶಕರು : ಸುರುಚಿ ಸಾಹಿತ್ಯ, ಕೇಶವ ಕುಂಜ, ನ್ಯೂಡೆಲ್ಲಿ.
5. ಶ್ರೀ ನಾರಾಯಣಗುರು (ಇಂಗ್ಲೀಷ್)
   ಲೇ| ನಿತ್ಯಚೈತನ್ಯ ಯತಿ
   ಪ್ರ| ಈಸ್ಟ್ - ವೆಸ್ಟ್ ಯೂನಿವರ್ಸಿಟಿ ಆಫ್ ಬ್ರಹ್ಮವಿದ್ಯಾ, ವರ್ಕಳ, ಕೇರಳ.
6. ಶ್ರೀ ನಾರಾಯಣ ಗುರು (ಇಂಗ್ಲೀಷ್)
   ಲೇ| ಮುರ್ಕೋಟು ಕುಂಜಪ್ಪನ್ (1982)
   ಪ್ರ| ನೇಶನಲ್ ಬುಕ್ ಟ್ರಸ್ಟ್, ಇಂಡಿಯಾ, ನ್ಯೂಡೆಲ್ಲಿ.
7. ನಾರಾಯಣ ಗುರು (ಇಂಗ್ಲೀಷ್)
   ಡಾ. ಓಮನ್‌ರವರು ಬರೆದ ಪಿ. ಎಚ್. ಡಿ. ಪ್ರಬಂಧ
8. ನಾರಾಯಣ ಗುರು (ಇಂಗ್ಲೀಷ್)
   ಲೇ| ಜಿ. ವಿ. ನಾರಾಯಣ ಮೂರ್ತಿ (1974)
   ಪ್ರ| ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.
9. ಗೆಶ್ಚರ್ ಇನ್ ಸೈಲೆನ್ಸ್ - ಹೂ ಆಂಡ್ ವಾಟ್ ನಾರಾಯಣಗುರು ಈಸ್. (ಇಂಗ್ಲೀಷ್)
   ಲೇ| ಡೆಬೋರಾ ಬುಚಾನನ್
   ಪ್ರ| ಈಸ್ಟ್ - ವೆಸ್ಟ್ ಯೂನಿವರ್ಸಿಟಿ ಆಫ್ ಬ್ರಹ್ಮವಿದ್ಯಾ ವರ್ಕಳ, ಕೇರಳ.

10. ನಾರಾಯಣ ಗುರು (ಕನ್ನಡ)
ಲೇಖಕ : ಪಿ. ಪರಮೇಶ್ವರನ್
ಪ್ರಕಟನೆ : ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

11. ಶ್ರೀ ನಾರಾಯಣ ಗುರು (ಕನ್ನಡ)
ಲೇಖಕ : ಪಾ. ಸಂಜೀವ ಬೋಳಾರ
ಪ್ರಕಟನೆ : ಬಿಲ್ಲವರ ಯೂನಿಯನ್, ಮಂಗಳೂರು.

12. ಬ್ರಹ್ಮಶ್ರೀ ನಾರಾಯಣ ಗುರು (ಜೀವನ ಚರಿತ್ರೆ, ವಚನಗಳು) (ಕನ್ನಡ)
ಲೇಖಕರು : ಬಿ. ದೂಮಪ್ಪ ಮಾಸ್ತರ್ ಮತ್ತು ಸಿ. ಕೆ. ರಾಘವ ಶಾಂತಿ
ಪ್ರಕಟನೆ : ದ. ಕ. ಜಿಲ್ಲಾ ಬಿಲ್ಲವ ಯೂನಿಯನ್, ಕುದ್ರೋಳಿ, ಮಂಗಳೂರು.

13. ಸಂತ ಸುಧಾರಕ ಶ್ರೀ ನಾರಾಯಣ ಗುರು (ಕನ್ನಡ)
ಲೇಖಕರು : ಮಲಾರ್ ಜಯರಾಮ ರೈ
ಪ್ರಕಾಶಕರು : ಗೀತಾ ಬುಡುಗಡೆ, ಅಡ್ಕದಗುತ್ತು - 671 321

14. ಶ್ರೀ ನಾರಾಯಣ ಗುರು ಜೀವನ ಚರಿತ್ರೆ (ಕನ್ನಡ)
ಲೇ। ಶ್ರೀ ಕೃಷ್ಣ
ಪ್ರ। ಮನುಜಮತ ಪ್ರಕಾಶನ, ವಡ್ನಾಲ ರಸ್ತೆ, ಸಾಗರ.

15. ಶ್ರೀ ನಾರಾಯಣ ಗುರು (ಕನ್ನಡ)
ಲೇ। ಓ. ಶಾಮಭಟ್
ಪ್ರ। ಶ್ರೀ ಗೋಕರ್ಣನಾಥೇಶ್ವರ ಟ್ರಸ್ಟ್, ರೂಪನಗರ, ಮೈಸೂರು.

16. ಕಾಯವಳಿದರೂ ಬೆಳಕು ಆರದು
ಲೇ। ಕೆ. ಎಂ. ರಾಘವನಂಬಿಯಾರ್
ಲೇಖನ.

ಜಗತ್ತಿನ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳನ್ನು ತಮ್ಮ ವಿಶಿಷ್ಟವಾದ ಬದುಕು, ಕ್ರಿಯಾಶೀಲತೆ, ಹೋರಾಟ ಮತ್ತು ಚಿಂತನೆಗಳಿಂದ ಅರ್ಥಪೂರ್ಣವಾಗಿ, ಅತ್ಯುಪಯುಕ್ತವನ್ನಾಗಿ ಜೀವಂತಿಸಿದ ನೂರಾರು ಸಾವಿರಾರು ಜನ ಚಿಂತಕರು ಇತಿಹಾಸದಲ್ಲಿ ಮೂಡಿ ಮೆರೆದಿದ್ದಾರೆ. ಇವರ ಅಪೂರ್ವವೂ, ಅನನ್ಯವೂ ಆದ ಬದುಕು ಮತ್ತು ಚಿಂತನೆಗಳು 20 ನೆಯ ಶತಮಾನದ ಈ ಅವಧಿಯಲ್ಲೂ ಕಾಲ, ದೇಶ ಮತ್ತು ಭಾಷೆಗಳನ್ನು ಮೀರಿ ಪ್ರಸ್ತುತವಾಗಿ ಮಾನವ ಬದುಕಿಗೆ ಸ್ಫೂರ್ತಿಯನ್ನು ತುಂಬುತ್ತಿವೆ. ಇಂತಹ ಅಸಾಮಾನ್ಯ ಚಿಂತಕರ ಆಲೋಚನೆಗಳನ್ನು ಕನ್ನಡಿಗರಿಗೆ ಸರಳವಾದ ಭಾಷೆಯಲ್ಲಿ ಪರಿಚಯ ಮಾಡಿಕೊಡುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರವು "ಜಾಗತಿಕ ಚಿಂತಕರ ಮಾಲೆ" ಯನ್ನು ಆರಂಭಿಸಿದೆ.

ಅವಕಾಶ ವಂಚಿತರಲ್ಲಿ, ಜಾತಿಯ ಅಮಾನುಷ ಕ್ರೌರ್ಯಕ್ಕೆ ಒಳಗಾಗಿ ನರಳಿದವರಲ್ಲಿ, ಅನಕ್ಷರತೆ ಅಜ್ಞಾನಗಳಲ್ಲಿ ಮುಳುಗಿದವರಲ್ಲಿ ಸ್ವಪ್ರಜ್ಞೆಯನ್ನು ಜಾಗೃತಗೊಳಿಸಿ, ವಿಶೇಷವಾಗಿ ಕೇರಳದ ದಲಿತರ ಉನ್ನತಿಗಾಗಿ ಜೀವನವಿಡೀ ಶ್ರಮಿಸಿ ಕೃತಕೃತ್ಯರಾಗಿ ಸರ್ವರ ಗೌರವ ಆದರಗಳಿಗೆ ಪಾತ್ರರಾಗಿ ಜೀವಿತ ಕಾಲದಲ್ಲಿಯೇ ದಂತಕತೆಯಾದವರು ಶ್ರೀ ನಾರಾಯಣ ಗುರು. ಅವರ ಜೀವನದ ವಿವಿಧ ಸಂದರ್ಭಗಳು, ಸಾಮಾನ್ಯ ಜನರ ಉತ್ಥಾನಕ್ಕಾಗಿ ಅವರು ಹಮ್ಮಿಕೊಂಡ ಕಾರ್ಯಕ್ರಮಗಳು, ಕೇರಳ ಮಾತ್ರವಲ್ಲದೇ ಅಸಮಾನತೆಯ ದಳ್ಳುರಿಯಲ್ಲಿ ಬೇಯುತ್ತಿರುವ ಹಿಂದುಳಿದ ಮತ್ತು ದಲಿತ ವರ್ಗಗಳ ಜೀವನಕ್ಕೆ ಪ್ರಾಣವಾಯುವಾದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಇಂತಹ ಅಸಾಮಾನ್ಯ ಚಿಂತಕರ ಸಮಾಜ ಪರಿವರ್ತನೆಕಾರರ ಜೀವನ ಮತ್ತು ದರ್ಶನಗಳನ್ನು ಈ ಕೃತಿ ಒಳಗೊಂಡಿದೆ.

**ಡಾ|| ಎಚ್. ಜೆ. ಲಕ್ಕಪ್ಪಗೌಡ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ISBN : 81 - 7713 - 037 - 4